ಸೋಮವಾರ, ನವೆಂಬರ್ 3, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 303 | ಪುಟ 12
prajavani.net | prajavani | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಕೈಬೀಸಿದ ಪಂತ್
ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಮೈದಾನದಲ್ಲಿ ಭಾನುವಾರ ಆಫ್ರಿಕಾ ಎ ವಿರುದ್ಧದ 'ಟೆಸ್ಟ್' ಗೆಲುವಿನ ನಂತರ ಅಭಿಮಾನಿಗಳತ್ತ ಕೈಬೀಸಿದ ಭಾರತ ಎ ತಂಡದ ನಾಯಕ ರಿಷಭ್ ಪಂತ್



ನೃತ್ಯ ವೈಭವ
ದಾವಣಗೆರೆಯ ಕುವೆಂಪು ಕನ್ನಡ ಭವನದಲ್ಲಿ ರಾಜ್ಯೋತ್ಸವದ ಅಂಗವಾಗಿ ಭಾನುವಾರ ನಡೆದ ನೃತ್ಯ ಸ್ಪರ್ಧೆಯಲ್ಲಿ ಹರಿಹರದ ಆಶ್ರಿತಾ ತಂಡದ ಕಲಾವಿದೆ ಪ್ರದರ್ಶಿಸಿದ ನೃತ್ಯ ಗಮನ ಸೆಳೆಯಿತು

ಆರ್‌ಎಸ್‌ಎಸ್ ತೆರಿಗೆಯೇಕೆ ಪಾವತಿಸುತ್ತಿಲ್ಲ: ಖರ್ಗೆ 5 | ಅಪಘಾತ ಮರುಕಳಿಕೆ: ಗುತ್ತಿಗೆದಾರರಿಗೆ ದಂಡ 8

ಭಾರತ ನಾರಿಯರಿಗೆ ಕಿರೀಟ

ಚೊಚ್ಚಲ ವಿಶ್ವಕಪ್ ಗೆದ್ದು ಬೀಗಿದ ಹರ್ಮನ್‌ಪ್ರೀತ್ ಬಳಗ

ಮುಗಿಲು ಮುಟ್ಟಿದ 'ಚಿನ್ನದ ಹುಡುಗಿ'ಯರ ಸಂಭ್ರಮ



ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಟ್ರೋಫಿಯೊಂದಿಗೆ ಭಾರತ ತಂಡದ ಆಟಗಾರ್ತಿಯರ ಸಂಭ್ರಮ — ಎಎಫ್‌ಪಿ ಚಿತ್ರ

ಪ್ರಜಾವಾಣಿ ವಾರ್ತೆ/ಪಿಟಿಐ

ನವಿ ಮುಂಬೈ: ಮಹಿಳಾ ಕ್ರಿಕೆಟ್ ರಂಗದಲ್ಲಿ ಭಾನುವಾರ ಹೊಸ ಶಕೆ ಆರಂಭವಾಯಿತು. ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಭಾರತ ತಂಡವು ಮೊದಲ ಬಾರಿಗೆ ವಿಶ್ವ ಕಿರೀಟ ಮುಡಿಗೇರಿಸಿಕೊಂಡು ಚಾರಿತ್ರಿಕ ಸಾಧನೆ ಮೆರೆಯಿತು. ಹಲವು ವರ್ಷಗಳಿಂದ ಕೋಟ್ಯಂತರ ಕ್ರಿಕೆಟ್ ಅಭಿಮಾನಿಗಳು ಕಂಡಿದ್ದ ಕನಸು ನನಸಾಯಿತು. ಹರ್ಮನ್‌ಪ್ರೀತ್ ಕೌರ್ ಬಳಗದ ಆಟಗಾರ್ತಿಯರು ಹರ್ಷದ ಹೊನಲಲ್ಲಿ ತೇಲಿದರು.

2005 ಮತ್ತು 2017ರ ಟೂರ್ನಿಗಳಲ್ಲಿ ಫೈನಲ್‌ನಲ್ಲಿ ಎಡವಿದ್ದ ಭಾರತ ತಂಡ ಈ ಬಾರಿ ಗುರಿ ತಪ್ಪಲಿಲ್ಲ. ದೀಪ್ತಿ ಶರ್ಮಾ ಮತ್ತು ಶಫಾಲಿ ವರ್ಮಾ ಅವರ ಆಲ್‌ರೌಂಡ್ ಆಟದ ಬಲದಿಂದ ಭಾರತವು 52 ರನ್‌ಗಳಿಂದ ದಕ್ಷಿಣ ಆಫ್ರಿಕಾ ವನಿತೆಯರ ಎದುರು ಜಯಭೇರಿ ಬಾರಿಸಿತು. ದಕ್ಷಿಣ ಆಫ್ರಿಕಾ ತಂಡಕ್ಕೆ ಚೊಚ್ಚಲ ಪ್ರಶಸ್ತಿ ಜಯಿಸುವ ಅವಕಾಶ ಕೈತಪ್ಪಿತು. ಆದರೆ ತಂಡದ ನಾಯಕಿ ಲಾರಾ ವೋಲ್ವಾರ್ಟ್ (101; 98 ಎಸೆತ; 4X11, 6X1) ಅವರ ಅಮೋಘ ಶತಕವು ಇತಿಹಾಸದ ಪುಟ ಸೇರಿತು. ಅವರ ಬಳಗದ ದಿಟ್ಟ ಹೋರಾಟವೂ ಮನಗೆದ್ದಿತು.

ಮಧ್ಯಾಹ್ನ ಸುರಿದ ಮಳೆಯಿಂದಾಗಿ ಪಂದ್ಯವು ಎರಡು ತಾಸು ವಿಳಂಬವಾಗಿ ಆರಂಭವಾಯಿತು. ಶಫಾಲಿ ವರ್ಮಾ (87; 78ಎ, 4X7, 6X2) ಮತ್ತು ದೀಪ್ತಿ ಶರ್ಮಾ (58; 58 ಎಸೆತ, 4X3, 6X1) ಅವರ ಅರ್ಧ ಶತಕಗಳ ಬಲದಿಂದ ಭಾರತ ತಂಡವು 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 298 ರನ್ ಗಳಿಸಿತು. ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡವನ್ನು ಕಟ್ಟಿಹಾಕುವಲ್ಲಿಯೂ ದೀಪ್ತಿ (39ಕ್ಕೆ 5) ಮತ್ತು ಶಫಾಲಿ (36ಕ್ಕೆ 2) ತಮ್ಮ ಸ್ಪಿನ್ ಕೈಚಳಕವನ್ನು ತೋರಿಸಿದರು. ಇದರಿಂದಾಗಿ ದಕ್ಷಿಣ ಆಫ್ರಿಕಾ ತಂಡಕ್ಕೆ 45.3 ಓವರ್‌ಗಳಲ್ಲಿ 246 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಏಳು ಬಾರಿಯ ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ತಂಡವನ್ನು ಸೆಮಿಫೈನಲ್‌ನಲ್ಲಿ ಸೋಲಿಸಿದ್ದ ಭಾರತ ಮತ್ತು ನಾಲ್ಕು ಸಲ ಕಿರೀಟ ಧರಿಸಿದ್ದ ಇಂಗ್ಲೆಂಡ್ ತಂಡವನ್ನು ಮಣಿಸಿದ್ದ ದಕ್ಷಿಣ ಆಫ್ರಿಕಾ ಫೈನಲ್‌ನಲ್ಲಿ ಮುಖಾಮುಖಿಯಾಗಿದ್ದವು. ▶10

₹37.3 ಕೋಟಿ ಚಾಂಪಿಯನ್ ಭಾರತ ತಂಡ ಗೆದ್ದ ಬಹುಮಾನ ಮೊತ್ತ

₹20 ಕೋಟಿ ರನ್ನರ್ಸ್ ಅಪ್ ದಕ್ಷಿಣ ಆಫ್ರಿಕಾ ತಂಡ ಪಡೆದ ಬಹುಮಾನ

571 ದಕ್ಷಿಣ ಆಫ್ರಿಕಾದ ಲಾರಾ ವೋಲ್ವಾರ್ಟ್ ಟೂರ್ನಿಯ ಒಂಬತ್ತು ಪಂದ್ಯಗಳಲ್ಲಿ ಗಳಿಸಿದ ಒಟ್ಟು ರನ್. ಭಾರತದ ಸ್ಮೃತಿ ಮಂದಾನ (434) ಎರಡನೇ ಸ್ಥಾನದಲ್ಲಿದ್ದಾರೆ.

22 ಭಾರತದ ದೀಪ್ತಿ ಶರ್ಮಾ ಅವರು ಟೂರ್ನಿಯ 9 ಪಂದ್ಯಗಳಲ್ಲಿ ಪಡೆದ ಒಟ್ಟು ವಿಕೆಟ್. ಆಸ್ಟ್ರೇಲಿಯಾದ ಅನ್ನಾಬೆಲ್ ಸದರ್‌ಲ್ಯಾಂಡ್ (17 ವಿಕೆಟ್) ಎರಡನೇ ಸ್ಥಾನದಲ್ಲಿದ್ದಾರೆ.

ಟೂರ್ನಿಯಲ್ಲಿ ಸಂಘಟಿತ ಪ್ರದರ್ಶನ ತೋರಿದ ನಮ್ಮ ಆಟಗಾರ್ತಿಯರಿಗೆ ಅಭಿನಂದನೆಗಳು. ಈ ಐತಿಹಾಸಿಕ ವಿಜಯವು ದೇಶದ ಭವಿಷ್ಯದ ಚಾಂಪಿಯನ್‌ಗಳಿಗೆ ಸ್ಫೂರ್ತಿ ತುಂಬಲಿದೆ
ನರೇಂದ್ರ ಮೋದಿ, ಪ್ರಧಾನ ಮಂತ್ರಿ

1983ರ ವಿಶ್ವಕಪ್ ಗೆಲುವು ಇಡೀ ಪೀಳಿಗೆಗೆ ದೊಡ್ಡ ಕನಸುಗಳನ್ನು ಕಾಣಲು ಹಾಗೂ ಅವುಗಳನ್ನು ಬೆನ್ನಟ್ಟಲು ಪ್ರೇರೇಪಿಸಿತ್ತು. ಅದೇ ರೀತಿ ಈ ಗೆಲುವು ಕೂಡ ದೇಶದ ಅಸಂಖ್ಯಾತ ಯುವ ಆಟಗಾರ್ತಿಯರು ಕ್ರಿಕೆಟ್‌ನಲ್ಲಿ ತಾವೂ ಸಾಧನೆ ಮಾಡಬಹುದು ಎಂಬ ವಿಶ್ವಾಸ ಮೂಡಿಸಿದೆ
ಸಚಿನ್ ತೆಂಡೂಲ್ಕರ್, ಭಾರತ ತಂಡದ ಮಾಜಿ ಆಟಗಾರ

ಮುಂದುವರಿದ 'ಸಿ.ಎಂ ಕುರ್ಚಿ' ಚರ್ಚೆ

ಆಡಳಿತಾರೂಢ ಕಾಂಗ್ರೆಸ್ ಪಾಳಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಚರ್ಚೆ ಭಾನುವಾರವೂ ಮುಂದುವರಿದಿದೆ. 'ಮುಖ್ಯಮಂತ್ರಿ ಬದಲಾಗುತ್ತಾರೆ ಎಂದು ಯಾರು ಹೇಳಿದರು' ಎಂದು ಪ್ರಶ್ನಿಸುತ್ತಲೇ ಹಲವು ಸಚಿವರು, ಪಕ್ಷ ಅದನ್ನು ತೀರ್ಮಾನಿಸುತ್ತದೆ ಎಂದು ಒತ್ತಿ ಹೇಳುತ್ತಿದ್ದಾರೆ. ಸಚಿವ, ಶಾಸಕರ ಈ ಮಾತುಗಳು ಅಧಿಕಾರ ಬದಲಾವಣೆಯ ಕಿಡಿಗೆ ತಿದಿ ಒತ್ತುತ್ತಲೇ ಇವೆ. ಪಕ್ಷದ ನಾಯಕರ ಸಾಲು–ಸಾಲು ದೆಹಲಿ ಭೇಟಿಗಳೂ ಇದಕ್ಕೆ ತುಪ್ಪ ಸುರಿಯುತ್ತಿವೆ

ನನಗೆ ದೊಡ್ಡ ಹುದ್ದೆ ಸಿಗುವ ವಿಚಾರ ಈಗ ಮುಖ್ಯವಲ್ಲ. ತೇಜಸ್ವಿ ಯಾದವ್ ಬಿಹಾರದ ಮುಖ್ಯಮಂತ್ರಿ ಆಗಬೇಕು. ರಾಹುಲ್ ಗಾಂಧಿ ಪ್ರಧಾನಿ ಆಗಬೇಕು
ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

'2028ರವರೆಗೆ ಸಿದ್ದರಾಮಯ್ಯ ಸಿ.ಎಂ'

ಕೊಪ್ಪಳ/ಹೊಸಪೇಟೆ/ಹುಬ್ಬಳ್ಳಿ: 'ರಾಜ್ಯದಲ್ಲಿ ಮುಖ್ಯಮಂತ್ರಿ ಹಾಗೂ ಪಕ್ಷದ ಅಧ್ಯಕ್ಷ ಸ್ಥಾನದ ಹುದ್ದೆಗಳು ಸದ್ಯಕ್ಕೆ ಖಾಲಿಯಿಲ್ಲ. ಸಿದ್ದರಾಮಯ್ಯ ಅವರಿಗೆ ಎಲ್ಲ ಶಾಸಕರ ಬೆಂಬಲವಿದ್ದು, 2028ರವರೆಗೆ ಅವರೇ ಮುಖ್ಯಮಂತ್ರಿ ಆಗಿರುತ್ತಾರೆ. ಆ ಬಳಿಕ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಬೇಕು ಎನ್ನುವ ಆಸೆ ನನ್ನದು' ಎಂದು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು 'ಮುಖ್ಯಮಂತ್ರಿ ಆಗಬೇಕು ಎನ್ನುವ ಆಸೆ ಎಲ್ಲರಿಗೂ ಇರುತ್ತದೆ. ಶಿವಕುಮಾರ್ ಅವರ ಅಭಿಮಾನಿಗಳು ಕೂಡ ಆಸೆ ಇಟ್ಟುಕೊಂಡಿದ್ದಾರೆ. ಶಿವಕುಮಾರ್ ಅಪಾರ ದೈವಭಕ್ತರಾಗಿದ್ದು ದೇವಸ್ಥಾನಗಳಿಗೆ ಹೋಗುವುದು ಸಾಮಾನ್ಯ. ಅವರು ದೇವಸ್ಥಾನಕ್ಕೆ ಹೋಗುವುದಕ್ಕೂ ಮುಖ್ಯಮಂತ್ರಿ ಸ್ಥಾನದ ಪೈಪೋಟಿಗೂ ಸಂಬಂಧವಿಲ್ಲ. ನವೆಂಬರ್‌ನಲ್ಲಿ ಯಾವ ಕ್ರಾಂತಿಯೂ ಇಲ್ಲ. ಎಲ್ಲವೂ ಬಿಜೆಪಿ ಸೃಷ್ಟಿ' ಎಂದರು.

ಸಚಿವ ಸಂಪುಟ ವಿಸ್ತರಣೆ ಬಗ್ಗೆ ಕೇಳಲಾದ ಪ್ರಶ್ನೆಗೆ 'ವಿಸ್ತರಣೆ ಆಗಬಹುದು. ಪಕ್ಷ ಸೂಚಿಸಿದರೆ ಸಚಿವ ಸ್ಥಾನ ತ್ಯಾಗಕ್ಕೂ ಸಿದ್ಧನಿದ್ದೇನೆ. ನನಗೆ ಪಕ್ಷ ಉಪ ಮುಖ್ಯಮಂತ್ರಿ ಪಟ್ಟ ಕೊಟ್ರೆ ನಾನು ಬೇಡ ಅನ್ನಲ್ಲ. ಎಲ್ಲರಿಗೂ ಆಸೆ ಇರ್ತದೆ. ಪಕ್ಷ ಏನು ತೀರ್ಮಾನ ಮಾಡುತ್ತೋ ಅದಕ್ಕೆ ನಾನು ಬದ್ಧ' ಎಂದಷ್ಟೇ ಹೇಳಿದರು.

ದಲಿತ ಸಿಎಂ ಕೂಗಿಗೆ ನನ್ನ ಬೆಂಬಲ: ದಲಿತ ಸಮುದಾಯದವರು ಮುಖ್ಯಮಂತ್ರಿ ಆಗಬೇಕೆನ್ನುವ ಕೂಗು ಎದ್ದಿದ್ದು, ನನ್ನ ಬೆಂಬಲವೂ ಇದೆ. ಆದರೆ, ಅದು ಹೈಕಮಾಂಡ್ ತೀರ್ಮಾನ. ನಾನು ಅಭಿಪ್ರಾಯವಷ್ಟೇ ತಿಳಿಸಬಹುದು' ಎಂದರು.

'ಹೇಳಿದವರು ಯಾರು?'

ಬೆಂಗಳೂರು: 'ಶಿವಕುಮಾರ್ ಅವರು ಶೀಘ್ರದಲ್ಲೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಾರೆಯೇ' ಎಂದು ಸುದ್ದಿಗಾರರು ಪ್ರಶ್ನಿಸಿದಾಗ ಸಚಿವ ಪ್ರಿಯಾಂಕ್ ಖರ್ಗೆ, 'ಇದನ್ನು ನಿಮಗೆ ಯಾರು ಹೇಳಿದರು? ಯಾರಾದರೂ ಅಧಿಕೃತವಾಗಿ ಹೇಳಿದ್ದರೆ, ನಾನು ಮಾತನಾಡಬಹುದು. ಶಿವಕುಮಾರ್ ಅವರೇ ಈ ಬಗ್ಗೆ ನಿನ್ನೆ ಮಾತನಾಡಿದ್ದಾರಲ್ಲ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಅವರು ಹೇಳಿದರೆ ಮಾತ್ರ ಅಧಿಕೃತ ಎಂದೂ ಅವರು ಹೇಳಿದ್ದಾರೆ. ಹೀಗಿರುವಾಗ ನಾವು ಮಾತನಾಡಿ ಪ್ರಯೋಜನವಿಲ್ಲ' ಎಂದರು.

'ನಮ್ಮ ಪಕ್ಷದ ನಾಯಕರು, ಸಚಿವರು ದೆಹಲಿ ಭೇಟಿಗೆ ಹೋಗುವುದು ಹೊಸ ಮತ್ತು ವಿಶೇಷ ವಿಚಾರವೇನೂ ಅಲ್ಲ. ದೆಹಲಿಗೆ ಹೋದವರು ಹೈಕಮಾಂಡ್ ಅನ್ನು ಭೇಟಿ ಮಾಡುವುದು ಸಾಮಾನ್ಯ. ಸತೀಶ ಜಾರಕಿಹೊಳಿ ಅವರ ದೆಹಲಿ ಭೇಟಿಯಲ್ಲಿ ವಿಶೇಷವೇನೂ ಇಲ್ಲ. ತಂತ್ರಜ್ಞಾನ ಶೃಂಗಸಭೆ ಬಗ್ಗೆ ಮಾತನಾಡಲು ನಾನೂ ನಾಡಿದ್ದು ದೆಹಲಿಗೆ ಹೋಗುತ್ತಿದ್ದೇನೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ನೀವು ಡಿಸಿಎಂ ಹುದ್ದೆ ಆಕಾಂಕ್ಷಿಯೇ' ಎಂದು ಸುದ್ದಿಗಾರರು ಪ್ರಶ್ನಿಸಿದ್ದಕ್ಕೆ, 'ಸಚಿವ ಆಗಿದ್ದೇನೆ. ಜಿಲ್ಲಾ ಉಸ್ತುವಾರಿಯನ್ನೂ ನೀಡಿದ್ದಾರೆ. ಅವೆರಡನ್ನೂ ಮಾಡಿಕೊಂಡು ಹೋಗುತ್ತೇನೆ. ಈಗ ನನ್ನನ್ನು ಬಿಟ್ಟುಬಿಡಿ' ಎಂದು ತೆರಳಿದರು.

'ಸಿ.ಎಂ ಕುರ್ಚಿ ಖಾಲಿ ಇಲ್ಲ'

'ರಾಜ್ಯ ಸರ್ಕಾರವು ಸದೃಢವಾಗಿದ್ದು, ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. ಸಾಮಾಜಿಕ ಜಾಲತಾಣದಲ್ಲಿ ಕೆಲವು ದಿನಗಳಿಂದ ಕೆಲವರು, 'ರಾಮಲಿಂಗಾರೆಡ್ಡಿ ಫಾರ್ ಸಿ.ಎಂ' ಎಂದು ಸುದ್ದಿ ಹಬ್ಬಿಸುತ್ತಿದ್ದಾರೆ. ನಾನು ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಯಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತೇನೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ನನ್ನ ಮೇಲೆ ಮತ್ತು ಪಕ್ಷದ ಮೇಲೆ ಗೌರವವಿದ್ದರೆ, ದಯವಿಟ್ಟು ಈ ರೀತಿಯ ಆಧಾರರಹಿತ ಪ್ರಚಾರವನ್ನು ತಕ್ಷಣವೇ ನಿಲ್ಲಿಸಬೇಕು. ಮುಖ್ಯ-ಮಂತ್ರಿಯವರ ನೇತೃತ್ವದಲ್ಲಿ ನಮ್ಮ ಸರ್ಕಾರ ಉತ್ತಮವಾಗಿ ಜನಪರ ಕಾರ್ಯಗಳನ್ನು ಮಾಡುತ್ತಿದೆ. ಈ ಸಮಯದಲ್ಲಿ ಒಗ್ಗಟ್ಟಿನಿಂದ ಕೆಲಸ ಮಾಡಿ, ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸುವು-ದಷ್ಟೇ ನಮ್ಮ ಗುರಿಯಾಗಿರಬೇಕು' ಎಂದು ವಿವರಿಸಿದ್ದಾರೆ.

'ಪಕ್ಷ ಮತ್ತು ನಾಡಿನ ಜನತೆ ವಹಿಸಿರುವ ಜವಾಬ್ದಾರಿಯನ್ನು ನಿಷ್ಠೆಯಿಂದ ನಿರ್ವಹಿಸುವುದರತ್ತ ಮಾತ್ರ ನನ್ನ ಗಮನವಿದೆ. ಆದ್ದರಿಂದ, ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ನನ್ನ ಹಿತೈಷಿಗಳು ಯಾರೂ ಇಂತಹ ಗೊಂದಲಕಾರಿ ಪ್ರಚಾರಕ್ಕೆ ಕಿವಿಗೊಡಬಾರದು ಮತ್ತು ಇದರಲ್ಲಿ ಭಾಗಿಯಾಗಬಾರದು ಎಂದು ಕೋರುತ್ತೇನೆ. ನಾವೆಲ್ಲರೂ ಒಟ್ಟಾಗಿ ಪಕ್ಷವನ್ನು ಬಲಪಡಿಸಲು ಮತ್ತು ರಾಜ್ಯದ ಅಭಿವೃದ್ಧಿಗಾಗಿ ಶ್ರಮಿಸೋಣ' ಎಂದು ಹೇಳಿದ್ದಾರೆ.

ಸಿಎಂಎಸ್ – 3 ಕಕ್ಷೆಗೆ: ಇತಿಹಾಸ ನಿರ್ಮಿಸಿದ ಇಸ್ರೊ



ಶ್ರೀಹರಿಕೋಟಾ (ಆಂಧ್ರಪ್ರದೇಶ) (ಪಿಟಿಐ): ಹೊಸ ತಲೆಮಾರಿನ, ಸ್ವದೇಶಿ ನಿರ್ಮಿತ 'ಬಾಹುಬಲಿ' ರಾಕೆಟ್ ಮೂಲಕ ಅತ್ಯಂತ ಭಾರವಾದ ಉಪಗ್ರಹವನ್ನು ಕಕ್ಷೆಗೆ ಸೇರಿಸುವುದರೊಂದಿಗೆ ಇಸ್ರೊ ಚಾರಿತ್ರಿಕ ಸಾಧನೆ ಮಾಡಿದೆ.

ಶ್ರೀಹರಿಕೋಟಾದ ಬಾಹ್ಯಾಕಾಶ ಕೇಂದ್ರದಿಂದ ಭಾನುವಾರ ಸಂಜೆ 5.26ಕ್ಕೆ 4,410 ಕೆ.ಜಿ ತೂಕದ ಸಂವಹನ ಉಪಗ್ರಹವನ್ನು (ಸಿಎಂಎಸ್–03) ಹೊತ್ತು ನಭಕ್ಕೆ ಚಿಮ್ಮಿದ ಲಾಂಚ್ ವೆಹಿಕಲ್ ಮಾರ್ಕ್–3 (ಎಲ್‌ವಿಎಂ3-ಎಂ5) 'ಬಾಹುಬಲಿ'ಯು 'ಆತ್ಮನಿರ್ಭರ ಭಾರತ'ದ ಸಾಧನೆಗೆ ಸಾಕ್ಷಿಯಾಯಿತು.

ದೇಶದ ಬಾಹ್ಯಾಕಾಶ ಕೇಂದ್ರದಿಂದ ಮೊದಲ ಬಾರಿಗೆ ಉಡ್ಡಯನ ಮಾಡಲಾಗುತ್ತಿರುವ ಭಾರಿ ತೂಕದ ಉಪಗ್ರಹ ಎಂಬ ಹೆಗ್ಗಳಿಕೆಗೆ 'ಸಿಎಂಎಸ್–03' ಪಾತ್ರವಾಯಿತು. ಇದರ ಉಡ್ಡಯನಕ್ಕೆ ಬಳಸಿದ ಭಾರಿ ಗಾತ್ರದ ರಾಕೆಟ್ (ಎಲ್‌ವಿಎಂ3-ಎಂ5) ಕೂಡ 'ಬಾಹುಬಲಿ' ಹೆಸರಿನ ಹಿರಿಮೆಯನ್ನು ಹೆಚ್ಚಿಸಿತು. ▶8

4,410 ಕೆ.ಜಿ ಉಪಗ್ರಹದ ತೂಕ

15 ವರ್ಷ ಉಪಗ್ರಹದ ಕಾರ್ಯ ನಿರ್ವಹಣೆಯ ಅವಧಿ

43.5 ಮೀಟರ್ ಉಡ್ಡಯನಕ್ಕೆ ಬಳಸಿದ ರಾಕೆಟ್‌ನ ಎತ್ತರ

7 ಉಪಗ್ರಹ ಉಡಾವಣೆ ಗುರಿ

ಇಸ್ರೊದ ಮಹತ್ವಾಕಾಂಕ್ಷೆಯ ಗಗನಯಾನ ಕಾರ್ಯಕ್ರಮದಡಿ ಮೊದಲ ಮಾನವ ರಹಿತ ಯೋಜನೆಯೂ ಸೇರಿದಂತೆ 2026ರ ಮಾರ್ಚ್ ಒಳಗೆ 7 ಉಪಗ್ರಹ ಉಡಾವಣೆಗಳನ್ನು ನಡೆಸುವ ಗುರಿಯನ್ನು ಇಸ್ರೊ ಹೊಂದಿದೆ.

ಸಂವಹನ ಉಪಗ್ರಹವನ್ನು 'ಬಾಹುಬಲಿ' ನಿಖರವಾಗಿ ಕಕ್ಷೆಗೆ ಸೇರಿಸಿದೆ. ಇದು ಆತ್ಮನಿರ್ಭರ ಭಾರತಕ್ಕೆ ಮತ್ತೊಂದು ಹೆಮ್ಮೆಯ ಗರಿ.
ವಿ. ನಾರಾಯಣನ್, ಇಸ್ರೊ ಅಧ್ಯಕ್ಷ

'ರಾಜ್ಯ ಜಲ ಆಯೋಗ' ರಚಿಸಲು ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಜಲಸಂಪನ್ಮೂಲಗಳ ಸಮರ್ಥ ಮತ್ತು ಶಾಶ್ವತ ನಿರ್ವಹಣೆ ಹಾಗೂ ಪರಿಹಾರೋಪಾಯಗಳ ಕುರಿತು ಸರ್ಕಾರಕ್ಕೆ ಶಿಫಾರಸುಗಳನ್ನು ಒಳಗೊಂಡ ವರದಿ ನೀಡಲು 'ರಾಜ್ಯ ಜಲ ಆಯೋಗ' ರಚಿಸುವ ಚಿಂತನೆಯಿದೆ' ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

'ರಾಜ್ಯದಲ್ಲಿ ನೀರಿನ ಲಭ್ಯತೆ, ಬೇಡಿಕೆ ಮತ್ತು ಹಂಚಿಕೆಯ ಕುರಿತು ಸಮಗ್ರವಾಗಿ ಅಧ್ಯಯನ ಮಾಡಿ, ಕಾಲಕಾಲಕ್ಕೆ ವೈಜ್ಞಾನಿಕ ವರದಿ ನೀಡುವ ಶಾಶ್ವತ ಸಂಸ್ಥೆಯಾಗಿ ಈ ಆಯೋಗವನ್ನು ರೂಪಿಸುವ ಯೋಚನೆಯಿದೆ' ಎಂದರು.

'ನೀರಿಗೆ ಸಂಬಂಧಿಸಿದಂತೆ ಸಮಗ್ರ ಮತ್ತು ತಾಂತ್ರಿಕ ಅಧ್ಯಯನ ಮಾಡಲು ಈ ಆಯೋಗಕ್ಕೆ ನೀರಾವರಿ, ಆರ್ಥಿಕ, ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳು, ಜಲ ವಿಜ್ಞಾನ ತಜ್ಞರು, ಪರಿಸರ ತಜ್ಞರು, ಜಲ ಪೂರೈಕೆ ವಿಭಾಗದ ಪರಿಣತರು, ಪ್ರಗತಿಪರ ರೈತರು ಸೇರಿದಂತೆ ಸುಮಾರು 15 ಜನರನ್ನು ನೇಮಿಸಲಾಗುವುದು' ಎಂದರು. ▶5

ಕೇಂದ್ರ ಜಲ ಆಯೋಗದಂತೆ, ರಾಜ್ಯದ ಜಲಸಂಪನ್ಮೂಲಗಳು ಮತ್ತು ಬಳಕೆಯ ಕ್ಷೇತ್ರಗಳನ್ನು ಒಳಗೊಂಡು ಕರ್ನಾಟಕದ ಜಲ ಆಯೋಗ ಕಾರ್ಯನಿರ್ವಹಿಸಬೇಕು ಎನ್ನುವುದು ಆಶಯ
ಡಿ.ಕೆ. ಶಿವಕುಮಾರ್, ಜಲಸಂಪನ್ಮೂಲ ಸಚಿವ

ಆಂಬುಲೆನ್ಸ್ ಡಿಕ್ಕಿ: ದಂಪತಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇಗವಾಗಿ ಚಲಿಸುತ್ತಿದ್ದ ಆಂಬುಲೆನ್ಸ್, ಎರಡು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ದಂಪತಿ ಸ್ಥಳದಲ್ಲೇ ಮೃತಪಟ್ಟು, ಮತ್ತಿಬ್ಬರು ಗಾಯಗೊಂಡಿರುವ ಘಟನೆ ಶನಿವಾರ ತಡರಾತ್ರಿ ಶಾಂತಿನಗರದ ಕೆ. ಎಚ್. ರಸ್ತೆಯ ಸಂಗೀತಾ ಸಿಗ್ನಲ್ ಬಳಿ ಸಂಭವಿಸಿದೆ.

ಸೋಮೇಶ್ವರ ನಗರ ನಿವಾಸಿಗಳಾದ ಇಸ್ಮಾಯಿಲ್ (40) ಹಾಗೂ ಅವರ ಪತ್ನಿ ಸಮೀನ್ ಬಾನು (33) ಮೃತಪಟ್ಟಿದ್ದಾರೆ. ಘಟನೆಯಲ್ಲಿ ಗಾಯಗೊಂಡಿರುವ ಸವಾರರಾದ ರಿಯಾನ್ ಮತ್ತು ಸಿದ್ದೀಕ್ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಭಟ್ಕಳದವರಾದ ಇಸ್ಮಾಯಿಲ್ ದಂಪತಿ, ಸುಧಾಮ ನಗರದಲ್ಲಿ ಬಟ್ಟೆ ಅಂಗಡಿ ಇಟ್ಟುಕೊಂಡಿದ್ದರು. ಸೋಮೇಶ್ವರ ನಗರದಲ್ಲಿ ವಾಸವಾಗಿದ್ದ ಅವರು ವ್ಯಾಪಾರ ಮುಗಿದ ಬಳಿಕ ರಾತ್ರಿ ಅಂಗಡಿಯ ಬಾಗಿಲು ಮುಚ್ಚಿ ದ್ವಿಚಕ್ರ ವಾಹನದಲ್ಲಿ ಮನೆಗೆ ಬರುತ್ತಿದ್ದಾಗ ಅಪಘಾತ ಸಂಭವಿಸಿದೆ.

ಇಸ್ಮಾಯಿಲ್ ದಂಪತಿ ಸಿದ್ದಯ್ಯ ರಸ್ತೆ ಮಾರ್ಗವಾಗಿ ಕೆ.ಎಚ್.ರಸ್ತೆಗೆ ಬಂದಿದ್ದರು. ಅದೇ ವೇಳೆಗೆ ರಿಚ್ಮಂಡ್ ರಸ್ತೆ ಮೇಲ್ಸೇತುವೆ ಕಡೆಯಿಂದ ಅತಿ ವೇಗವಾಗಿ ಆಂಬುಲೆನ್ಸ್ ಚಾಲನೆ ಮಾಡಿಕೊಂಡು ಬಂದ ಚಾಲಕ ಅಶೋಕ್, ಮೊದಲು ಇಸ್ಮಾಯಿಲ್ ದಂಪತಿಯ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು, ಬಳಿಕ ಮತ್ತೊಂದು ಬೈಕ್‌ಗೆ ಡಿಕ್ಕಿ ಹೊಡೆದಿದ್ದಾರೆ. ಆಗಲೂ ವಾಹನ ನಿಲ್ಲಿಸದ ಅಶೋಕ್, ಟ್ರಾಫಿಕ್ ಪೊಲೀಸ್ ಚೌಕಿಗೆ ಡಿಕ್ಕಿ ಹೊಡೆದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪಘಾತದ ರಭಸಕ್ಕೆ ಇಸ್ಮಾಯಿಲ್ ದಂಪತಿ ದ್ವಿಚಕ್ರ ವಾಹನ ಸಮೇತವಾಗಿ ಆಂಬುಲೆನ್ಸ್ ಅಡಿಯಲ್ಲಿ ಸಿಲುಕಿದ್ದರು. ಅವರನ್ನು ಆಂಬುಲೆನ್ಸ್ ಸುಮಾರು 50 ಮೀಟರ್ ಎಳೆದೊಯ್ದಿದೆ. ತಕ್ಷಣ ವಾಹನ ನಿಲ್ಲಿಸಿದ್ದ ಆಂಬುಲೆನ್ಸ್ ಚಾಲಕ, ಕೆಳಕ್ಕೆ ಜಿಗಿದು ಪರಾರಿಯಾಗಿದ್ದ. ಸ್ಥಳಕ್ಕೆ ದೌಡಾಯಿಸಿದ ಸ್ಥಳೀಯರು ಆಂಬುಲೆನ್ಸ್ ಅನ್ನು ಉರುಳಿಸಿ ನೋಡಿದಾಗ, ದಂಪತಿ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಜಯನಗರದ ಜನರಲ್ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಇಸ್ಮಾಯಿಲ್ ಮತ್ತು ಸಮೀನ್ ಬಾನು ದಂಪತಿಗೆ 5 ವರ್ಷ, 7 ವರ್ಷ ಹಾಗೂ 10 ವರ್ಷದ ಮಕ್ಕಳಿದ್ದಾರೆ.

'ಆಂಬುಲೆನ್ಸ್ ಚಾಲಕನ ನಿರ್ಲಕ್ಷ್ಯದಿಂದ ತಂದೆ, ತಾಯಿ ಕಳೆದುಕೊಂಡ ಮಕ್ಕಳು ಅನಾಥರಾಗಿದ್ದಾರೆ. ಮಕ್ಕಳನ್ನು ಯಾರು ನೋಡಿಕೊಳ್ಳುತ್ತಾರೆ' ಎಂದು ಮೃತರ ಸಂಬಂಧಿ ಮುಸಾದಿಕ್ ಕಣ್ಣೀರಿಟ್ಟರು.



ದಂಪತಿ ಮೃತಪಟ್ಟ ವಿಲ್ಸನ್ ಗಾರ್ಡನ್‌ನ ಕೆ. ಎಚ್. ರಸ್ತೆಯ ಬಳಿ ವಾಹನದ ಭಾಗಗಳು ಚೆಲ್ಲಾಪಿಲ್ಲಿಯಾಗಿದ್ದವು — ಪ್ರಜಾವಾಣಿ ಚಿತ್ರ

'ರೋಗಿಗಳು ಇರಲಿಲ್ಲ'

'ಚಾಲಕ ಅಶೋಕ್ ಅವರ ನಿರ್ಲಕ್ಷ್ಯ ಹಾಗೂ ಅತಿಯಾದ ವೇಗವೇ ಅಪಘಾತಕ್ಕೆ ಕಾರಣ. ಪರಾರಿಯಾಗಿದ್ದ ಚಾಲಕನನ್ನು ಭಾನುವಾರ ಬಂಧಿಸಲಾಗಿದೆ. ಅಪಘಾತದ ವೇಳೆ ಆಂಬುಲೆನ್ಸ್‌ನಲ್ಲಿ ರೋಗಿಗಳು ಇರಲಿಲ್ಲ. ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದು, ಮದ್ಯ ಕುಡಿದಿರಲಿಲ್ಲ' ಎಂದು ಪೊಲೀಸರು ಹೇಳಿದರು.

'ಸಂಘರ್ಷ' ತಡೆಗೆ ಎಐ ತಂತ್ರಜ್ಞಾನ

ಚಾಮರಾಜನಗರ: 'ಮಾನವ-ವನ್ಯಜೀವಿ ಸಂಘರ್ಷ ತಡೆಗೆ ಬಂಡೀಪುರ ಅರಣ್ಯದೊಳಗೆ ಎಐ ತಂತ್ರಜ್ಞಾನ ಆಧಾರಿತ ಡ್ರೋನ್ ಕ್ಯಾಮೆರಾ ಅಳವಡಿಸಲಾಗುವುದು' ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದರು.

ಸುದ್ದಿ ▶5

ಚಿನಕುರುಳಿ ಪ್ರಕಾಶ್ ಶೆಟ್ಟಿ



ಈ ವರ್ಷ ರಾಜ್ಯದಲ್ಲಿ ಗರಿಷ್ಠ ಪ್ರಕರಣಗಳು ವರದಿ • ರೇಬಿಸ್ ಕಾಯಿಲೆಯಿಂದ 31 ಸಾವು

ಗಾಯಾಳುಗಳ ಸಂಖ್ಯೆ ಏರುಗತಿ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ನಾಯಿ ಕಡಿತದಿಂದ ಗಾಯಗೊಳ್ಳುವವರ ಸಂಖ್ಯೆ ಏರುಗತಿ ಪಡೆದಿದ್ದು, ಈ ವರ್ಷ ವರದಿಯಾದ ಒಟ್ಟು ನಾಯಿ ಕಡಿತ ಪ್ರಕರಣಗಳು ನಾಲ್ಕು ಲಕ್ಷದ ಗಡಿ (3.97 ಲಕ್ಷ) ಸಮೀಪಿಸಿದೆ. ವರ್ಷವೊಂದರಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ರಾಜ್ಯದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದೆ. ಮಕ್ಕಳು ಸೇರಿ ವಿವಿಧ ವಯೋಮಾನದವರು ನಾಯಿ ಕಡಿತದಿಂದ ಗಾಯಗೊಳ್ಳುತ್ತಿದ್ದಾರೆ. ಈ ಕಡಿತದ ಸಂಬಂಧ ಆಸ್ಪತ್ರೆಗಳಿಗೆ ಭೇಟಿ ನೀಡುವವರ ಸಂಖ್ಯೆಯೂ ಹೆಚ್ಚಾಗಿದೆ. 2030ರ ವೇಳೆಗೆ ನಾಯಿ ಕಡಿತದಿಂದ ಬರುವ 'ರೇಬಿಸ್' ರೋಗವನ್ನು ನಿರ್ಮೂಲನೆ ಮಾಡುವ ಗುರಿಯನ್ನು ಆರೋಗ್ಯ ಇಲಾಖೆ ಹಾಕಿಕೊಂಡಿದೆ. ಈ ಸಂಬಂಧ ನಾಯಿ ಕಡಿತವನ್ನು 2021ರಲ್ಲಿ 'ಘೋಷಿತ ಕಾಯಿಲೆ'ಯ ವ್ಯಾಪ್ತಿಗೆ ತರಲಾಗಿದೆ. ಇದರಿಂದಾಗಿ ನಾಯಿ ಕಡಿತ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ಗಾಯಗೊಂಡವರಿಗೆ ಅಗತ್ಯ ಚಿಕಿತ್ಸೆ ಒದಗಿಸಲಾಗುತ್ತಿದೆ. ಇಷ್ಟಾಗಿಯೂ ಈ ವರ್ಷ ನಾಯಿ ಕಡಿತಕ್ಕೆ ಒಳಗಾದವರಲ್ಲಿ 31 ಮಂದಿ ರೇಬಿಸ್‌ನಿಂದ ಈಗಾಗಲೇ ಮೃತಪಟ್ಟಿದ್ದಾರೆ.

ವರ್ಷದಿಂದ ವರ್ಷಕ್ಕೆ ನಾಯಿ ಕಡಿತ ಹೆಚ್ಚುತ್ತಲೇ ಇದೆ. ಕಳೆದ ವರ್ಷ 3.61 ಲಕ್ಷ ಪ್ರಕರಣಗಳು ವರದಿಯಾಗಿದ್ದವು. ನಾಯಿ ಕಡಿತದಿಂದಾದ ಗಾಯಗಳಿಂದ ಬಳಲಿದವರಲ್ಲಿ, 42 ಮಂದಿ ರೇಬಿಸ್‌ನಿಂದ ಸಾವಿಗೀಡಾಗಿದ್ದರು. ಈ ವರ್ಷ ಅಕ್ಟೋಬರ್ ಅಂತ್ಯಕ್ಕೇ ಪ್ರಕರಣಗಳ ಸಂಖ್ಯೆ ನಾಲ್ಕು ಲಕ್ಷದ ಗಡಿ ಸಮೀಪಿಸಿದ್ದು, ಇಲಾಖೆ ಪ್ರಕಾರ ಪ್ರತಿ ವಾರ ಸರಾಸರಿ 10 ಸಾವಿರ ಪ್ರಕರಣಗಳು ವರದಿಯಾಗುತ್ತಿವೆ.

ಪ್ರಕರಣ ಏರುಗತಿ: ಈ ವರ್ಷ ಮೊದಲ 6 ತಿಂಗಳಲ್ಲಿ 2.3 ಲಕ್ಷ ನಾಯಿ ಕಡಿತ ಪ್ರಕರಣಗಳು ವರದಿಯಾಗಿದ್ದವು. ನಂತರದ ನಾಲ್ಕು ತಿಂಗಳಲ್ಲಿ 1.66 ಲಕ್ಷ ಮಂದಿ ಗಾಯಗೊಂಡಿದ್ದಾರೆ.

ಆರೋಗ್ಯ ಇಲಾಖೆಯ ವಿಶ್ಲೇಷಣೆ ಪ್ರಕಾರ, ಮೊದಲ ಆರು ತಿಂಗಳು ಪ್ರತಿ ವಾರ ವರದಿಯಾಗುತ್ತಿದ್ದ ಪ್ರಕರಣಗಳ ಸಂಖ್ಯೆ ಏರಿಳಿತವಾಗುತ್ತಿತ್ತು. ಆಗಸ್ಟ್ ಬಳಿಕ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದಿದ್ದು, ವಾರದ ಪ್ರಕಾರ ನಡೆಸಲಾದ ವಿಶ್ಲೇಷಣೆಯಲ್ಲಿ ಬಹುತೇಕ ವಾರ ವರದಿಯಾಗುತ್ತಿರುವ ಪ್ರಕರಣಗಳ ಸಂಖ್ಯೆ 10 ಸಾವಿರದ ಗಡಿ ತಲುಪುತ್ತಿದೆ. ▶8

ನಾಯಿ ಕಡಿತ

ವರ್ಷವಾರು ನಾಯಿ ಕಡಿತ


ವರ್ಷ	ಪ್ರಕರಣಗಳು	ರೇಬಿಸ್ ಮರಣ
2021	54,420	00
2022	1,63,366	03
2023	2,32,754	18
2024	3,61,522	42
2025	3,97,894	31

ತಿಂಗಳಿಗೆ 40 ಸಾವಿರ ಪ್ರಕರಣ

ಆರೋಗ್ಯ ಇಲಾಖೆಯ ಪ್ರಕಾರ ರಾಜ್ಯದಲ್ಲಿ ತಿಂಗಳಿಗೆ ಸರಾಸರಿ 40 ಸಾವಿರ ನಾಯಿ ಕಡಿತ ಪ್ರಕರಣಗಳು ವರದಿಯಾಗುತ್ತಿವೆ. ನಾಯಿ ಕಡಿತಕ್ಕೆ ಒಳಗಾದವರಿಗೆ ಇಲಾಖೆ ವತಿಯಿಂದ ಆ್ಯಂಟಿ ರೇಬಿಸ್ ಲಸಿಕೆ ಮತ್ತು ರೇಬಿಸ್ ಇಮ್ಯುನೊಗ್ಲೋಬ್ಯುಲಿನ್ ಲಸಿಕೆ ಒದಗಿಸಲಾಗುತ್ತಿದೆ. ಕರ್ನಾಟಕ ರಾಜ್ಯ ಔಷಧ ಸರಬರಾಜು ನಿಗಮವು (ಕೆಎಸ್‌ಎಂಎಸ್‌ಸಿಎಲ್) ರಾಜ್ಯದ ಆಸ್ಪತ್ರೆಗಳಿಗೆ ಈ ಔಷಧಗಳನ್ನು ಪೂರೈಕೆ ಮಾಡುತ್ತಿದೆ. ಈ ಜೀವ ರಕ್ಷಕ ಲಸಿಕೆಗಳ ಸೂಕ್ತ ಬಳಕೆ ಹಾಗೂ ಕೊರತೆಯಾಗದಂತೆ ನೋಡಿಕೊಳ್ಳಲು ಹೆಚ್ಚುವರಿ ಔಷಧವನ್ನು ಸ್ಥಳೀಯವಾಗಿ ಖರೀದಿಸಲು ಇಲಾಖೆಯು ಆಸ್ಪತ್ರೆಗಳಿಗೆ ಸೂಚಿಸಿದೆ.

ಬೀದಿ ನಾಯಿ ಹಾವಳಿ: ಇಂದು 'ಸುಪ್ರೀಂ' ವಿಚಾರಣೆ
ಸುದ್ದಿ ▶9

ಬಿಹಾರ: ಮಾಜಿ ಶಾಸಕ ಅನಂತ್ ಸಿಂಗ್ ಬಂಧನ



ಅನಂತ್ ಸಿಂಗ್

ಪಟ್ನಾ (ಪಿಟಿಐ): ರಾಜಕಾರಣಿಯಾಗಿ ಬದಲಾದ ಗ್ಯಾಂಗ್‌ಸ್ಟರ್, ಜನ್ ಸುರಾಜ್ ಪಕ್ಷದ ಬೆಂಬಲಿಗ ದುಲಾರ್ ಚಾಂದ್ ಯಾದವ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೊಕಾಮಾ ಕ್ಷೇತ್ರದ ಜೆಡಿಯು ಅಭ್ಯರ್ಥಿ, ಮಾಜಿ ಶಾಸಕ ಅನಂತ್ ಸಿಂಗ್ ಸೇರಿ ಮೂವರನ್ನು ಪೊಲೀಸರು ಶನಿವಾರ ತಡರಾತ್ರಿ ಬಂಧಿಸಿದ್ದಾರೆ.

ಅನಂತ್ ಸಿಂಗ್ ಅವರನ್ನು 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಅನಂತ್ ಸಿಂಗ್ ಮತ್ತು ಬರ್ಹ್‌ನಲ್ಲಿರುವ ಅವರ ನಿವಾಸದಲ್ಲೇ ಇದ್ದ ಇನ್ನಿಬ್ಬರು ಆರೋಪಿಗಳಾದ ಮಣಿಕಾಂತ್ ಠಾಕೂರ್ ಮತ್ತು ರಂಜಿತ್ ರಾಮ್ ಅವರನ್ನೂ ಬಂಧಿಸಲಾಯಿತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಾಟ್ನಾದ ಮೊಕಾಮಾ ಕ್ಷೇತ್ರದಲ್ಲಿ ಜನ್ ಸುರಾಜ್ ಪಕ್ಷದ ಅಭ್ಯರ್ಥಿ ಪೀಯೂಷ್ ಪ್ರಿಯದರ್ಶಿನಿ ಪರವಾಗಿ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದಾಗ ಅನುಮಾನಾಸ್ಪದವಾಗಿ ಯಾದವ್ ಮೃತಪಟ್ಟಿದ್ದರು.

ಉತ್ತರಕ್ರಿಯೆ ಮಾಡುವುದಿಲ್ಲ: 'ಎಲ್ಲ ಐವರು ಆರೋಪಿಗಳನ್ನು ಬಂಧಿಸುವವರೆಗೆ ಮತ್ತು ಅವರಿಗೆ ಮರಣದಂಡನೆ ವಿಧಿಸುವವರೆಗೆ ಉತ್ತರಕ್ರಿಯೆ ಮಾಡುವುದಿಲ್ಲ' ಎಂದು ಮೃತ ದುಲಾರ್ ಚಂದ್ ಯಾದವ್ ಅವರ ಮೊಮ್ಮಗ ಹೇಳಿದ್ದಾರೆ.

'ನನ್ನ ತಾತನನ್ನು ವಿರೋಧಿಗಳು, ಆಡಳಿತದ ಸಹಾಯದೊಂದಿಗೆ ಕೊಲೆ ಮಾಡಿದ್ದಾರೆ' ಎಂದು ಅವರು ಆರೋಪಿಸಿದ್ದಾರೆ.

ಚುನಾವಣಾ ಆಯೋಗಕ್ಕೆ 'ಪಕ್ಷ' ಅಥವಾ 'ವಿಪಕ್ಷ' ಎಂಬ ತಾರತಮ್ಯವಿಲ್ಲ. ಎಲ್ಲರೂ ನಮ್ಮ ಮುಂದೆ ಸಮಾನರು
ಜ್ಞಾನೇಶ್ ಕುಮಾರ್, ಮುಖ್ಯ ಚುನಾವಣಾ ಆಯುಕ್ತ

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ.

‘ಬಂಡೆ ಕೊರೆಯುವ ಯೋಜನೆ ಕೈಬಿಡಿ’

‘ಲಾಲ್ ಬಾಗ್ ಉಳಿಸಿ, ಸುರಂಗ ರಸ್ತೆ ನಿಲ್ಲಿಸಿ’ ಹೋರಾಟದಲ್ಲಿ ವಿಪಕ್ಷ ನಾಯಕ ಆರ್. ಅಶೋಕ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಕೆಲವರು ಕನಕಪುರದ ಬಂಡೆ ಎಂದು ಹೇಳುತ್ತಾರೆ. ಅವರು ಬೆಂಗಳೂರಿನ ಬಂಡೆಯನ್ನು ಕೊರೆಯುವ ಯೋಜನೆ ಕೈಬಿಡಬೇಕು. 3 ಸಾವಿರ ದಶಲಕ್ಷ ವರ್ಷಗಳ ಇತಿಹಾಸ ಇರುವ ಈ ಶಿಲೆಗಳನ್ನು ಉಳಿಸಬೇಕು ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಬಿಜೆಪಿ ಭಾನುವಾರ ಹಮ್ಮಿಕೊಂಡಿದ್ದ ‘ಲಾಲ್‌ಬಾಗ್ ಉಳಿಸಿ, ಸುರಂಗ ರಸ್ತೆ ನಿಲ್ಲಿಸಿ’ ಸೌಹಾರ್ದ ನಡಿಗೆ-ಪ್ರತಿಭಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಭೂಕಂಪ, ಪ್ರವಾಹಗಳಿಲ್ಲದೇ ಜನರು ಸುರಕ್ಷಿತವಾಗಿರಲಿ ಎಂದು ಕೆಂಪೇಗೌಡರು ಶಿಲೆಗಳ ಮೇಲೆ ನಗರವನ್ನು ಕಟ್ಟಿದ್ದರು. ಇದನ್ನು ಡಿ.ಕೆ. ಶಿವಕುಮಾರ್ ಹಾಳು ಮಾಡುತ್ತಿದ್ದಾರೆ. ಮೊದಲೇ ಆರ್ಥಿಕವಾಗಿ ದಿವಾಳಿ ಎದ್ದಿರುವ ಸರ್ಕಾರವು ಈ ಯೋಜನೆಯ ಮೂಲಕ ಪಾತಾಳಕ್ಕೆ ಗುಂಡಿ ತೋಡುವುದಲ್ಲದೇ ಆರ್ಥಿಕತೆಯನ್ನೂ ಪಾತಾಳಕ್ಕೆ ಒಯ್ಯುತ್ತಿದೆ ಎಂದು ಟೀಕಿಸಿದರು.

ಗುತ್ತಿಗೆದಾರರಿಗೆ ₹ 4000 ಕೋಟಿ ಪಾವತಿ ಬಾಕಿ ಇದೆ. ಈ ಯೋಜನೆಗೆ ನಗರದ ಆಸ್ತಿಗಳನ್ನು ಅಡಮಾನ ಇಟ್ಟು ₹ 8000 ಕೋಟಿ ಸಾಲ ಮಾಡಲು ಸರ್ಕಾರ ಹೊರಟಿದೆ. ಅದರ ಬಡ್ಡಿಯನ್ನು ಹೇಗೆ ಕಟ್ಟುತ್ತೀರಿ? ಈಗಾಗಲೇ ಗುತ್ತಿಗೆದಾರರ ಸ್ಥಿತಿ ಚಿಂತಾಜನಕವಾಗಿದೆ. ಈ ಯೋಜನೆಯ ಗುತ್ತಿಗೆದಾರರಿಗೂ ಮುಂದೆ ಅದೇ ಸ್ಥಿತಿ ಬರಲಿದೆ ಎಂದು ಹೇಳಿದರು.

ಖಾಸಗಿ ಜಾಗದಲ್ಲಿ ಮಾಡಿದರೆ ಭೂ ಸ್ವಾಧೀನಕ್ಕೆ ಹೆಚ್ಚು ಪರಿಹಾರ ಕೊಡಬೇಕಾಗುತ್ತದೆ. ದಿವಾಳಿಯಾಗಿರುವ ಸರ್ಕಾರದಲ್ಲಿ ಅದಕ್ಕೆ ದುಡ್ಡಿಲ್ಲ. ಹಾಗಾಗಿ ಉದ್ಯಾನ, ಕೆರೆಗಳನ್ನು ಹುಡುಕಿ ಯೋಜನೆ ರೂಪಿಸುತ್ತಿದ್ದಾರೆ. ಸ್ಯಾಂಕಿ ಕೆರೆಗೂ ಧಕ್ಕೆ ತರುತ್ತಿದ್ದಾರೆ ಎಂದು ಆರೋಪಿಸಿದರು.

ಎತ್ತಿನಹೊಳೆ ಯೋಜನೆ ಸಹಿತ ಯಾವುದೇ ಯೋಜನೆಗಳನ್ನು ನಿಗದಿತ ಸಮಯದಲ್ಲಿ ಇವರು ಪೂರ್ತಿಗೊಳಿಸಿಲ್ಲ. ನೆಲದ ಮೇಲಿನ ಯೋಜನೆಗಳಿಗೇ ಇವರು 10–12 ವರ್ಷ ತೆಗೆದುಕೊಳ್ಳುವುದರಿಂದ ಈ ಸುರಂಗ ರಸ್ತೆ ಪೂರ್ಣಗೊಳ್ಳುವಾಗ ನಾವು ಇರುವುದಿಲ್ಲ. ನಮ್ಮ ಮರಿಮಕ್ಕಳ ಕಾಲಕ್ಕೆ ಪೂರ್ಣಗೊಳ್ಳಬಹುದು ಎಂದರು.

ಸುರಂಗ ಕೊರೆಯುವ ಯಂತ್ರಗಳನ್ನು ಜರ್ಮನಿಯಿಂದ ತರಿಸುತ್ತಿದ್ದಾರೆ. ಅದು ಕೆಲಸ ಆರಂಭಿಸುವ ಹೊತ್ತಿಗೆ ಈ ಸರ್ಕಾರವೇ ಇರುವುದಿಲ್ಲ. ಮುಂದೆ ಬರುವ ಸರ್ಕಾರ ಯೋಜನೆಯನ್ನು ಮುಂದುವರಿಸದೇ ಇದ್ದರೆ ಯಂತ್ರಗಳನ್ನು ಗುಜರಿ ಅಂಗಡಿಗೆ ಕೊಡಬೇಕಷ್ಟೇ ಎಂದು ಹೇಳಿದರು.

ಮಂಗಳಗ್ರಹಕ್ಕೆ ಉಪಗ್ರಹ ಉಡಾವಣೆ ಮಾಡಿದ್ದಕ್ಕಿಂತ ಅಧಿಕ ವೆಚ್ಚ ಇಲ್ಲಿ ಸುರಂಗ ಕೊರೆಯಲು ವೆಚ್ಚವಾಗುತ್ತಿದೆ. ಒಂದು ಕಿ.ಮೀ. ಸುರಂಗ ಕೊರೆಯಲು ₹ 1,285 ಕೋಟಿ ಬೇಕು. ಅದೇ ವೆಚ್ಚದಲ್ಲಿ ಐದು ಕಿ.ಮೀ. ಮೆಟ್ರೊ ಮಾರ್ಗ ನಿರ್ಮಿಸಬಹುದು. 1,800 ವಾಹನಗಳಿಗೆ ಸುರಂಗ ರಸ್ತೆ ಅನುಕೂಲವಾದರೆ, ಮೆಟ್ರೊ ಮಾರ್ಗವು 60 ಸಾವಿರ ಜನರಿಗೆ ಅನುಕೂಲವಾಗಲಿದೆ ಎಂದರು.

ಹಲವು ಇಲಾಖೆಗಳ ಅನುಮತಿ ಬೇಕು. ಯಾವುದೇ ಇಲಾಖೆಯಿಂದ ಇಲ್ಲಿವರೆಗೆ ಅನುಮತಿ ಪಡೆದಿಲ್ಲ. ಆದರೂ ಟೆಂಡರ್ ಕರೆಯಲಾಗಿದೆ. ಬಿಹಾರ ಚುನಾವಣೆಗಾಗಿ ಅಥವಾ ತಮಿಳುನಾಡು ಚುನಾವಣೆಗಾಗಿ ಈ ಯೋಜನೆ ರೂಪಿಸಿರಬೇಕು ಎಂದು ಹೇಳಿದರು.

ತೇಜಸ್ವಿ ಸೂರ್ಯ, ರಾಮಮೂರ್ತಿ, ಕಿರಣ್ ಮಜುಂದಾರ್, ಮೋಹನ್‌ದಾಸ್ ಪೈ ಸಹಿತ ಎಲ್ಲರಿಗೂ ಡಿ.ಕೆ. ಶಿವಕುಮಾರ್ ಧಮ್ಕಿ ಹಾಕಿದ್ದಾರೆ. ಧಮ್ಕಿ ಹಾಕುವುದೇ ಕಾಂಗ್ರೆಸ್ ಸಂಸ್ಕೃತಿ ಎಂದು ಅವರು ಹೇಳಿದರು.



‘ಲಾಲ್‌ಬಾಗ್ ಉಳಿಸಿ, ಸುರಂಗ ರಸ್ತೆ ನಿಲ್ಲಿಸಿ’ ಅಭಿಯಾನದಲ್ಲಿ ಆರ್. ಅಶೋಕ, ತೇಜಸ್ವಿ ಸೂರ್ಯ, ಉದಯ ಗರುಡಾಚಾರ್, ಸಿ.ಕೆ. ರಾಮಮೂರ್ತಿ, ಬಿಜೆಪಿ ಮುಖಂಡರು ಭಾಗವಹಿಸಿದ್ದರು. ಪ್ರಜಾವಾಣಿ ಚಿತ್ರ

ಅವಿವೇಕದ ಯೋಜನೆ ಬೇಡ: ಸಂಸದ ತೇಜಸ್ವಿ ಸೂರ್ಯ

‘ಅಹಂಕಾರದ ಯೋಜನೆಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಬದಲು, ರಾಜ್ಯ ಸರ್ಕಾರವು ಸುಸ್ಥಿರ, ದೀರ್ಘಾವಧಿಯ ಸಾರಿಗೆ ಪರಿಹಾರಗಳಲ್ಲಿ ಹೂಡಿಕೆ ಮಾಡಬೇಕು. ಮೆಟ್ರೊ, ಉಪನಗರ ರೈಲು, ಬಿಎಂಟಿಸಿ ಜಾಲಗಳನ್ನು ಬಲಪಡಿಸಬೇಕು’ ಎಂದು ಸಂಸದ ತೇಜಸ್ವಿ ಸೂರ್ಯ ಆಗ್ರಹಿಸಿದರು.

‘ಲಾಲ್‌ಬಾಗ್ ಉಳಿಸಿ, ಸುರಂಗ ರಸ್ತೆ ನಿಲ್ಲಿಸಿ’ ಅಭಿಯಾನದಲ್ಲಿ ಮಾತನಾಡಿದ ಅವರು, ‘ಬೆಂಗಳೂರಿನ ಪರಂಪರೆ, ಪರಿಸರವನ್ನು ನಾಶ ಮಾಡುವ ಅವಿವೇಕದ ಯೋಜನೆಗಳು ಬೇಡ. ಹಸಿರು ಉಳಿಸುವ, ದೂರದೃಷ್ಟಿಯ ಮೂಲಸೌಕರ್ಯ ಬೇಕು’ ಎಂದು ಪ್ರತಿಪಾದಿಸಿದರು.



ಸುರಂಗ ರಸ್ತೆ ಬಗ್ಗೆ ಪ್ರತಿಕ್ರಿಯಿಸಿದ ಸಿ.ಎಂ ಸಿದ್ದರಾಮಯ್ಯ

ವಿರೋಧ ರಾಜಕೀಯ ಪ್ರೇರಿತ

ಬೆಂಗಳೂರು: ಸುರಂಗ ರಸ್ತೆ ಯೋಜನೆಯನ್ನು ಬಿಜೆಪಿಯವರು ರಾಜಕೀಯ ಉದ್ದೇಶ ದಿಂದ ವಿರೋಧಿಸುತ್ತಿ ದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, ‘ಯೋಜನೆಯ ಬಗ್ಗೆ ವಿರೋಧ ಪಕ್ಷದ ಕಳವಳ ಪರಿಶೀಲಿಸಿ ಒಮ್ಮತಕ್ಕೆ ಬರಲು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗುವುದು’ ಎಂದು ಹೇಳಿದರು.



ಸಿದ್ದರಾಮಯ್ಯ

‘ಯೋಜನೆ ಬಗ್ಗೆ ಸಾರ್ವಜನಿಕರು ವಿರೋಧ ವ್ಯಕ್ತಪಡಿಸುತ್ತಿಲ್ಲ. ಸಂಚಾರ ದಟ್ಟಣೆ ಸಮಸ್ಯೆಯನ್ನು ಹೋಗಲಾಡಿಸುವ ಈ ಯೋಜನೆಗೆ ವಿರೋಧ ಏಕೆ ವ್ಯಕ್ತವಾಗಬೇಕು? ಇದೇ ರೀತಿಯ ಸುರಂಗ ಯೋಜನೆಗಳನ್ನು ಅನೇಕ ದೇಶದಲ್ಲಿ ಕೈಗೊಳ್ಳಲಾಗಿದೆ. ಅಲ್ಲಿನ ಜನರು ವಿರೋಧಿಸಿಲ್ಲ’ ಎಂದು ವಿವರಿಸಿದರು.

ಶ್ರೀಮಂತರನ್ನು ಗಮನದಲ್ಲಿಟ್ಟುಕೊಂಡು ಸುರಂಗ ಯೋಜನೆಯನ್ನು ಮಾಡುತ್ತಿಲ್ಲ. ಕಾರು, ಬಸ್, ದ್ವಿಚಕ್ರ ವಾಹನ, ಕಾಲ್ನಡಿಗೆಯವರಿಗೂ ಅನುಕೂಲವಾಗಲೆಂದು ಕೈಗೊಳ್ಳಲಾಗುತ್ತಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಲಾಲ್‌ಬಾಗ್ ಹಾಳು ಮಾಡುವ ಮೂರ್ಖ ನಾನಲ್ಲ: ಶಿವಕುಮಾರ್

‘ನಾನು ಎಲ್ಲ ರೀತಿಯ ಅಧ್ಯಯನ ನಡೆಸಿದ್ದೇನೆ. ಲಾಲ್‌ಬಾಗ್ ಹಾಳು ಮಾಡಲು ನಾನೇನು ಮೂರ್ಖನಲ್ಲ. ಇದರ ಇತಿಹಾಸವೂ ನನಗೆ ಗೊತ್ತಿದೆ. ಉದ್ಯಾನದಲ್ಲಿ ಎಷ್ಟು ಭಾಗ ಉಪಯೋಗವಾಗುತ್ತಿದೆ ಎಂಬುದು ನನಗೆ ಗೊತ್ತಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ಅಶೋಕ ಅವರ ನೇತೃತ್ವದಲ್ಲಿಯೇ ಸಮಿತಿ ಮಾಡುತ್ತೇವೆ. ಯಾರನ್ನು ಬೇಕಾದರೂ ಅದಕ್ಕೆ ಸೇರಿಸಿಕೊಳ್ಳಲಿ. ಅವರು ಸೂಚಿಸಿದ ತಾಂತ್ರಿಕ ಪರಿಣಿತರನ್ನೇ ಸಮಿತಿಗೆ ಸೇರಿಸೋಣ. ಮೆಟ್ರೊ ಮಾರ್ಗ ಹೋಗುವುದು ಟನಲ್ ಮೂಲಕ ಅಲ್ಲವೇ? ಈ ಯೋಜನೆ ತಂದವರು ಯಾರು? ಎಸ್.ಎಂ.ಕೃಷ್ಣ ಅವರ ಕಾಲದಲ್ಲಿ ಹತ್ತು ದೇಶಗಳನ್ನು ತಿರುಗಿ ಅಧ್ಯಯನ ನಡೆಸಿ ವರದಿ ಮಾಡಿದ್ದೆ. ಎಸ್.ಎಂ. ಕೃಷ್ಣ, ಅನಂತಕುಮಾರ್ ಹಾಗೂ ನಾನು ದೆಹಲಿಗೆ ತೆರಳಿ ಅಂದಿನ ಪ್ರಧಾನಿ ವಾಜಪೇಯಿ ಅವರಿಗೆ ವರದಿ ನೀಡಿದ್ದೆವು’ ಎಂದು ಹೇಳಿದರು.

‘ಸಂಸದ ತೇಜಸ್ವಿ ಸೂರ್ಯ ರೈಲು ಯೋಜನೆ ಮಾಡಿ ಎಂದು ಹೇಳುತ್ತಾನೆ. ಅದಕ್ಕೆ ಬೆಂಗಳೂರಿನಲ್ಲಿ ಜಾಗ ಎಲ್ಲಿದೆ? ಕೇಂದ್ರ ಸರ್ಕಾರವೇ ಈ ಯೋಜನೆ ಮಾಡಲಿ. ಬಿಆರ್ ಟಿಎಸ್ ಯೋಜನೆ ಮಾಡಲು ಬೆಂಗಳೂರಿನಲ್ಲಿ ಎಲ್ಲಾದರೂ ಜಾಗ ಇದೆಯೇ? ಅವರಿಗೆ ತಲೆ ಇದೆಯೇ? ಇದರಿಂದ ದಿನಕ್ಕೆ ನೂರಾರು ಜನ ಸಾಯಬೇಕಾಗುತ್ತದೆ. ಹುಬ್ಬಳ್ಳಿಯಲ್ಲಿ ಜಗದೀಶ್ ಶೆಟ್ಟರ್ ಅವರು ಬಿಆರ್ ಟಿಎಸ್ ಯೋಜನೆಯಲ್ಲಿ ವಿಫಲರಾದರು’ ಎಂದು ತಿಳಿಸಿದರು.

‘ತೇಜಸ್ವಿ ಸೂರ್ಯ ಮದುವೆಯಾಗುವ ಸಂದರ್ಭದಲ್ಲಿ ಹೊಸ ಕಾರು ಬೇಕು ಎಂದು ಅರ್ಜಿ ನೀಡಿದ್ದ. ಈಗ ಬೇರೆಯವರಿಗೆ ಕಾರಲ್ಲಿ ಓಡಾಡಬೇಡಿ ಎಂದು ಹೇಳುತ್ತಿದ್ದಾನೆ. ತೇಜಸ್ವಿ ಸೂರ್ಯ ಮತ್ತು ಬಿಜೆಪಿ ನಾಯಕರು ಕಾರು ಬಿಟ್ಟು ಮೆಟ್ರೊದಲ್ಲಿ ಓಡಾಡಲಿ’ ಎಂದು ಡಿ.ಕೆ. ಶಿವಕುಮಾರ್ ಸಲಹೆ ನೀಡಿದರು.

‘ನಾನು ಯಾರಿಗೂ ಧಮ್ಕಿ ಹಾಕಿಲ್ಲ. ಶಾಸಕ ರಾಮಮೂರ್ತಿ ನಮ್ಮ ಹುಡುಗ. ತೇಜಸ್ವಿ ಸೂರ್ಯ ಅತಿ ಬುದ್ಧಿವಂತ. ವಿಮಾನದಲ್ಲಿ ತುರ್ತು ನಿರ್ಗಮನ ಬಾಗಿಲನ್ನೇ ತೆರೆಯಲು ಹೋಗಿದ್ದ. ಅನುಮತಿ ಇಲ್ಲದೆ ಟ್ರಂಪ್ ಭೇಟಿ ಮಾಡಲು ಹೋಗಿ ಉಗಿಸಿಕೊಂಡಿದ್ದ’ ಎಂದು ಹೇಳಿದರು.

ಯು ಟರ್ನ್ ಯಾಕೆ: ರಾಮಲಿಂಗಾರೆಡ್ಡಿ ಪ್ರಶ್ನೆ

ಬೆಂಗಳೂರಿಗೆ ಸುರಂಗ ಮಾರ್ಗವೇ ಮದ್ದು ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದ್ದರು. ಈಗ ಯಾಕೆ ಯು ಟರ್ನ್ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪ್ರಶ್ನಿಸಿದ್ದಾರೆ.

‘ಹಿಮಾಚಲ ಪ್ರದೇಶದ ಅಟಲ್ ಸುರಂಗವನ್ನು ಬಿಜೆಪಿಯವರು ಹೆಮ್ಮೆಯ ಸಾಧನೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಅರುಣಾಚಲ ಪ್ರದೇಶದ ಸೇಲಾ ಸುರಂಗವನ್ನು ಪ್ರಧಾನಿ ನರೇಂದ್ರ ಮೋದಿ ಅವರೇ ಉದ್ಘಾಟಿಸಿದ್ದರು. ಕಾಶ್ಮೀರದ ಸುರಂಗಗಳನ್ನು ಬಿಜೆಪಿಯವರು ಹೊಗಳುತ್ತಾರೆ. ಬೇರೆ ರಾಜ್ಯಗಳಲ್ಲಿ ಸುರಂಗವು ಅಭಿವೃದ್ಧಿ; ಆದರೆ, ಬೆಂಗಳೂರಿನಲ್ಲಿ ಪರಿಸರ ವಿರೋಧಿ ಹೇಗೆ ಆಗುತ್ತದೆ. ಲಾಲ್‌ಬಾಗ್‌ಗೆ ನಿಮ್ಮ ಪರಿಸರ ಪ್ರೇಮ ಸೀಮಿತವಾಗಿದೆ.

ಕಬ್ಬನ್ ಪಾರ್ಕ್ ಅಭಿವೃದ್ಧಿಗೆ ನಿಮ್ಮ ಅಧಿಕಾರದಲ್ಲಿ ಎಷ್ಟು ಅನುದಾನ ನೀಡಿದ್ದೀರಿ? ಆಗ ನಿಮಗೆ ಪರಿಸರದ ಬಗ್ಗೆ ಎಷ್ಟು ಕಾಳಜಿ ಇತ್ತು ಎಂದು ಸಾಮಾಜಿಕ ಜಾಲತಾಣದಲ್ಲಿ ಅವರು ಪ್ರಶ್ನಿಸಿದ್ದಾರೆ.

ಲಿಂಗತ್ವ ಅಲ್ಪಸಂಖ್ಯಾತ ಮಹಿಳೆ ಮೇಲೆ ಹಲ್ಲೆ: ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯ ಮೇಲೆ ಹಲ್ಲೆ ನಡೆಸಿ, ತಲೆ ಬೋಳಿಸಿದ ಕೃತ್ಯವನ್ನು ಸಂಗಮ ಹಾಗೂ ಎಂಜಿಎಸ್‌ಪಿ ಸಂಘಟನೆ ಖಂಡಿಸಿದೆ.

ವಿರಾಟನಗರ ಪ್ರದೇಶದಲ್ಲಿ ವಾಸವಿದ್ದ ಸುಕನ್ಯಾ ಅವರನ್ನು ಗುರುವಾರ ದುಷ್ಕರ್ಮಿಗಳು ಅಪಹರಿಸಿ ರೂಪೇನ ಅಗ್ರಹಾರಕ್ಕೆ ಕರೆದೊಯ್ದು ಅಕ್ರಮವಾಗಿ ಬಂಧನದಲ್ಲಿರಿಸಿ, ಮರದ ಕಟ್ಟಿಗೆಯಿಂದ ಹೊಡೆದು, ಅವರ ತಲೆ ಬೋಳಿಸಿದ್ದಾರೆ. ಪೊಲೀಸರು ಅವರನ್ನು ರಕ್ಷಿಸಿ, ಏಳು ಆರೋಪಿಗಳನ್ನು ಬಂಧಿಸಿದ್ದಾರೆ. ಆದರೆ, ಆರೋಪಿಗಳ ಕಡೆಯವರು ಮಹಿಳೆಗೆ ಬೆದರಿಕೆ ಹಾಕುತ್ತಿದ್ದಾರೆ ಎಂದು ಸಂಘಟನೆಯ ಪೂಜಾ, ವೈಶಾಲಿ, ನಿಶಾ ತಿಳಿಸಿದ್ದಾರೆ.

ಸಂತ್ರಸ್ತೆಗೆ ಪೊಲೀಸ್ ರಕ್ಷಣೆ ಒದಗಿಸಿ, ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು. ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಜತೆ ಕೆಲಸ ಮಾಡುವ ಸಂಸ್ಥೆಗಳೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸಿ ಈ ರೀತಿಯ ಘಟನೆಗಳನ್ನು ತಡೆಯಬೇಕು.

ರಾಜ್ಯದಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೆ ಸೂಕ್ತವಾದ ರಕ್ಷಣೆ ಯನ್ನು ಒದಗಿಸಬೇಕು ಎಂದು ಮನವಿ ಮಾಡಿದ್ದಾರೆ.

ಮತದಾನಕ್ಕಾಗಿ ಬಿಹಾರಿಗಳಿಗೆ 3 ದಿನ ರಜೆ

ಕೆಲಸ ಮಾಡುವ ಸಂಸ್ಥೆಗಳಿಗೆ ಸೂಚನೆ ನೀಡುತ್ತೇವೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಹಾರದಲ್ಲಿ ನಡೆಯುವ ವಿಧಾನಸಭೆ ಚುನಾವಣೆಯಲ್ಲಿ ಮತದಾನ ಮಾಡಲು ತೆರಳುವವರಿಗೆ ಮೂರು ದಿನ ರಜೆ ನೀಡಲು ಅವರು ಕೆಲಸ ಮಾಡುವ ಸಂಸ್ಥೆಗಳಿಗೆ ಸೂಚನೆ ನೀಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬ್ಯಾಟರಾಯನಪುರದ ಕಾಫಿ ಬೋರ್ಡ್ ಲೇಔಟ್‌ನಲ್ಲಿ ಬಿಹಾರದ ಬೆಂಗಳೂರು ನಿವಾಸಿಗಳ ಸಂಘದ ಸದಸ್ಯರನ್ನು ಉದ್ದೇಶಿಸಿ ಅವರು ಮಾತನಾಡಿದರು.

‘ಬಿಹಾರದ ಅಭಿವೃದ್ಧಿಗಾಗಿ ಮಹಾಘಟಬಂಧನ್‌ಗೆ ಮತ ನೀಡಿ. ನಿಮ್ಮ ಸಂಬಂಧಿಕರಿಗೂ ಈ ಬಗ್ಗೆ ತಿಳಿಸಿ. ನಿಮ್ಮ ರಾಜ್ಯದ ಅಭಿವೃದ್ಧಿಗಾಗಿ ಮತ ಚಲಾವಣೆ ಮಾಡಬೇಕು. ಮತವನ್ನು ವ್ಯರ್ಥ ಮಾಡಬಾರದು’ ಎಂದು ಮನವಿ ಮಾಡಿದರು.

‘ಬಿಹಾರದಲ್ಲಿ ಲಕ್ಷಾಂತರ ಜನರ ಹೆಸರನ್ನು ಮತದಾರರ ಪಟ್ಟಿಯಿಂದ ಕಿತ್ತು ಹಾಕಲಾಗಿದೆ. ನಿಮ್ಮ ಊರಿನಲ್ಲಿರುವವರ ಬದುಕನ್ನು ಉಳಿಸಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ನೀವು ಇಲ್ಲಿ ಬದುಕು ಕಟ್ಟಿಕೊಂಡಿರಬಹುದು. ನಿಮ್ಮ ಮತ ಅಲ್ಲಿರಬಹುದು. ಅಥವಾ ನಿಮ್ಮ ಸಂಬಂಧಿಕರು ಅಲ್ಲಿರಬಹುದು. ಮತದಾನ ಮಾಡಲು ಊರಿಗೆ ತೆರಳಿ. ಅದಕ್ಕಾಗಿ ಮೂರು ದಿನ ರಜೆ ನೀಡುವಂತೆ ನೀವು ಕೆಲಸ ನಿರ್ವಹಿಸುವ ಸಂಸ್ಥೆಗಳು, ಗುತ್ತಿಗೆದಾರರಿಗೆ ಹಾಗೂ ಕ್ರೆಡಾಯ್ ಸಂಸ್ಥೆಗೆ ಸೂಚಿಸುತ್ತೇನೆ’ ಎಂದರು.

‘ಈ ಮೊದಲಿನಂತೆ ನಿತೀಶ್ ಕುಮಾರ್ ಅವರ ಕೈಯಲ್ಲಿ ಬಿಹಾರವಿಲ್ಲ. ಅವರು ರಾಜಕೀಯದ ಕೊನೆಗಾಲದಲ್ಲಿದ್ದಾರೆ. ಬಿಹಾರದ ಅಭಿವೃದ್ಧಿಗೆ ಲಾಲೂ ಪ್ರಸಾದ್ ಅವರ ಪುತ್ರ ತೇಜಸ್ವಿ ಯಾದವ್ ಅವರನ್ನು ಮುಖ್ಯಮಂತ್ರಿ ಮಾಡಬೇಕು. ರಾಹುಲ್ ಗಾಂಧಿಯನ್ನು ಪ್ರಧಾನಿ ಮಾಡಬೇಕು’ ಎಂದು ಕೋರಿದರು.

‘ಬಿಹಾರದವರು ಇಲ್ಲದಿದ್ದರೆ ಬೆಂಗಳೂರಿನಲ್ಲಿ ಅತ್ಯುತ್ತಮ ಕಟ್ಟಡಗಳನ್ನು ನಿರ್ಮಿಸಲು ಸಾಧ್ಯವಿರುತ್ತಿರಲಿಲ್ಲ. ನಿಮ್ಮ ಸಂಘದ ಸಮುದಾಯ ಭವನಕ್ಕೆ ನಿವೇಶನ ನೀಡಲಾಗುವುದು. ಸಂಘ ಸಂಸ್ಥೆಗಳಿಗೆ ನಿವೇಶನ ಒದಗಿಸಲು ಒಂದು ತಿಂಗಳ ಒಳಗೆ ಅಧಿಸೂಚನೆ ಹೊರಡಿಸುತ್ತೇವೆ’ ಎಂದರು.

ಡಿ.ಕೆ.ಶಿವಕುಮಾರ್ ಅವರು ಕನ್ನಡದಲ್ಲಿ ಮಾಡಿದ ಭಾಷಣವನ್ನು ತರ್ಜುಮೆ ಮಾಡಲು ತಿಳಿಸಿದಾಗ ‘ನಾವು ಬಿಹಾರಿಗಳಲ್ಲ, ಕನ್ನಡದ ಬಿಹಾರಿಗಳು. ಕರ್ನಾಟಕ ರಾಜ್ಯೋತ್ಸವ ಆಚರಿಸಿದ್ದೇವೆ’ ಎಂದು ಸಭೆಯಲ್ಲಿದ್ದವರು ತಿಳಿಸಿ ಅಚ್ಚರಿ ಮೂಡಿಸಿದರು.



ಬ್ಯಾಟರಾಯನಪುರದ ಕಾಫಿ ಬೋರ್ಡ್ ಲೇಔಟ್‌ನಲ್ಲಿ ಬಿಹಾರದ ಬೆಂಗಳೂರು ನಿವಾಸಿಗಳ ಸಂಘದ ಸದಸ್ಯರೊಂದಿಗೆ ಡಿ.ಕೆ. ಶಿವಕುಮಾರ್ ಚರ್ಚೆ ನಡೆಸಿದರು

‘ಕಲಾಲೋಕ’ ಲೋಕಾರ್ಪಣೆ ಶೀಘ್ರ

ಬೆಂಗಳೂರು: ಮೈಸೂರು ರೇಷ್ಮೆ ಸೀರೆಗಳು, ಚನ್ನಪಟ್ಟಣದ ಬೊಂಬೆ, ಬಂಜಾರ ಕಲಾಕೃತಿಗಳು, ಇಳಕಲ್ ಸೀರೆ, ಕಾಫಿ, ಲಿಡ್ಕರ್ ಉತ್ಪನ್ನಗಳು, ಮೈಸೂರು ಸ್ಯಾಂಡಲ್ ಸೋಪ್ ಸೇರಿದಂತೆ ಜಿ.ಐ. ಮ್ಯಾನತೆ ಹೊಂದಿರುವ ಕರ್ನಾಟಕದ 40ಕ್ಕೂ ಹೆಚ್ಚು ಉತ್ಪನ್ನಗಳ ಮಾರಾಟಕ್ಕೆಂದೇ ರೂಪಿಸಲಾಗುತ್ತಿರುವ ಮೊದಲ ‘ಕಲಾಲೋಕ’ ಮಳಿಗೆಯು ಶೀಘ್ರ ಕಾರ್ಯಾರಂಭ ಮಾಡಲಿದೆ.

‘ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮೊದಲ ‘ಕಲಾಲೋಕ’ ಮಳಿಗೆಯನ್ನು ನವೆಂಬರ್‌ನಲ್ಲಿ ಉದ್ಘಾಟಿಸಲಾಗುತ್ತದೆ. ಜಿ.ಐ ಮಾನ್ಯತೆ ಹೊಂದಿರುವ ರಾಜ್ಯದ ಉತ್ಪನ್ನಗಳನ್ನು ಅಲ್ಲಿ ಮಾರಾಟ ಮಾಡಲಾಗುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಳಿಗೆ ಉದ್ಘಾಟಿಸಲಿದ್ದು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೂ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ’ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು ಮಾಹಿತಿ ನೀಡಿದ್ದಾರೆ.

‘ಕರ್ನಾಟಕ ವಿಶೇಷ ಉತ್ಪನ್ನಗಳನ್ನು ಜಾಗತಿಕ ಬ್ರ್ಯಾಂಡ್‌ಗಳನ್ನಾಗಿ ಮಾಡುವುದು ಸರ್ಕಾರದ ಆಶಯ ಎಂದರು.



ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ನಗರದಲ್ಲಿ 10 ಲಕ್ಷ ಸಸಿ ನೆಡುವ ‘ಪ್ರೆಸ್ಟೀಜ್ ಗ್ರೀನ್ ಪ್ರಾಮೀಸ್’ ಯೋಜನೆಗೆ ಪ್ರೆಸ್ಟೀಜ್ ಸಮೂಹ ಚಾಲನೆ ನೀಡಿದೆ

10 ಲಕ್ಷ ಸಸಿ ನೆಡಲು ‘ಪ್ರೆಸ್ಟೀಜ್’ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಬೆಂಗಳೂರು ನಗರದಲ್ಲಿ 10 ಲಕ್ಷ ಸಸಿ ನೆಡಲು ನಿರ್ಧರಿಸಲಾಗಿದೆ ಎಂದು ಪ್ರೆಸ್ಟೀಜ್ ಸಮೂಹ ತಿಳಿಸಿದೆ.

ಕರ್ನಾಟಕ ರಾಜ್ಯೋತ್ಸವದ ದಿನ ‘ಪ್ರೆಸ್ಟೀಜ್ ಗ್ರೀನ್ ಪ್ರಾಮೀಸ್’ ಯೋಜನೆಗೆ ಸಸಿ ನೆಡುವ ಮೂಲಕ ಸಮೂಹವು ಚಾಲನೆ ನೀಡಿದೆ. ಆರಂಭಿಕವಾಗಿ 10 ಸಾವಿರ ಸಸಿಗಳನ್ನು ನೆಡಲಾಗುತ್ತಿದೆ. ಪ್ರತಿಯೊಬ್ಬ ಉದ್ಯೋಗಿಯು ತಲಾ ಒಂದು ಸಸಿ ನೆಡಲಿದ್ದಾರೆ.

ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಯೋಜನೆ ಆರಂಭಿಸಲಾಗಿದೆ ಎಂದು ಕಂಪನಿ ತಿಳಿಸಿದೆ. ಈ ವೇಳೆ ಕಂಪನಿಯ ಸಿಬ್ಬಂದಿ ಹಾಗೂ ಇತರರು ಇದ್ದರು.

8-9ಕ್ಕೆ ಸಿಂಧೂರ ನಮನ

ಬೆಂಗಳೂರು: ಶ್ರೀ ಅಕಾಡೆಮಿ ಆಫ್ ಮ್ಯೂಸಿಕ್ ಆ್ಯಂಡ್ ಆರ್ಟ್ಸ್ ಸಂಸ್ಥೆಯು ‘ಆಪರೇಷನ್ ಸಿಂಧೂರ’ ಸ್ಮರಣಾರ್ಥ ಇದೇ 8 ಮತ್ತು 9ರಂದು ‘ಸಿಂಧೂರ ನಮನ’ ಶೀರ್ಷಿಕೆಯಡಿ ಕಲಾವಿದರಿಗೆ ಸನ್ಮಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಂಡಿದೆ.

ಜಯನಗರದ 8ನೇ ಬ್ಲಾಕ್‌ನಲ್ಲಿರುವ ಜಯರಾಮ ಸೇವಾ ಮಂಡಳಿಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ. 8ರಂದು ಬೆಳಿಗ್ಗೆ 9 ಗಂಟೆಯಿಂದ, 9ರಂದು ಬೆಳಿಗ್ಗೆ 8.30ರಿಂದ ಕಾರ್ಯಕ್ರಮಗಳು ಪ್ರಾರಂಭವಾಗಲಿದ್ದು, ಇಡೀ ದಿನ ನಡೆಯಲಿದೆ. ಎರಡು ದಿನಗಳ ಈ ಕಾರ್ಯಕ್ರಮದಲ್ಲಿ ಸಂಗೀತ ಕಛೇರಿ, ವೇದ ಪಾರಾಯಣ, ಹಾಸ್ಯ ಸಂವಾದ, ನೃತ್ಯ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಅಲ್ಲದೇ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಸನ್ಮಾನಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಪವನ ವಿದ್ಯುತ್: ಕರ್ನಾಟಕಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಧಿಕ ಪವನ ವಿದ್ಯುತ್ ಉತ್ಪಾದನೆ ಮೂಲಕ 2024-25ನೇ ಸಾಲಿನಲ್ಲಿ ಪ್ರಶಸ್ತಿ ಪಡೆದಿದ್ದ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು (ಕ್ರೆಡಲ್), ಇದೇ ಸಾಲಿನಲ್ಲಿ'ಅನುಷ್ಠಾನದ ಹಂತದಲ್ಲಿರುವ ಅತ್ಯಧಿಕ ಪವನ ವಿದ್ಯುತ್ ಸಾಮರ್ಥ್ಯ'ಕ್ಕಾಗಿ ರಾಷ್ಟ್ರೀಯ ಮಟ್ಟದ ಪ್ರಶಸ್ತಿಯನ್ನೂ ತನ್ನದಾಗಿಸಿಕೊಂಡಿದೆ.

ವಿಂಡ್ ಟರ್ಬೈನ್ ತಯಾರಕರ ಸಂಘ (ಐಡಬ್ಲ್ಯುಟಿಎಂಎ) ಚೆನ್ನೈನ ಟ್ರೇಡ್ ಸೆಂಟರ್‌ನಲ್ಲಿ ಆಯೋಜಿಸಿದ್ದ ‘ವಿಂಡ್ ಎನರ್ಜಿ ಇಂಡಿಯಾ 2025’ರ ಏಳನೇ ಆವೃತ್ತಿಯಲ್ಲಿ ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ಅವರು ಕ್ರೆಡಲ್ ಅಧ್ಯಕ್ಷರೂ ಆದ ಶಾಸಕ ಟಿ.ಡಿ. ರಾಜೇಗೌಡ ಮತ್ತು ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ನಂತರ ಮಾತನಾಡಿದ ರಾಜೇಗೌಡ, ‘ಇದು ನಮ್ಮ ರಾಜ್ಯಕ್ಕೆ ಹೆಮ್ಮೆಯ ಸಂಗತಿ. ಶುದ್ಧ ಇಂಧನ ಉತ್ಪಾದನೆ ಮತ್ತು ಬಳಕೆಗೆ ಆದ್ಯತೆ ನೀಡಿ, ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿರುವ ಎಲ್ಲಾ ಪಾಲುದಾರರ ಬೆಂಬಲಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ’ ಎಂದರು.


‘ಅನುಷ್ಠಾನ ಹಂತದಲ್ಲಿರುವ ಪವನ ವಿದ್ಯುತ್ ಸಾಮರ್ಥ್ಯದಲ್ಲಿ ಕರ್ನಾಟಕವು ದೇಶದಲ್ಲಿ ಮೊದಲ ಸ್ಥಾನ ಹೊಂದಿದೆ. ಇದನ್ನು ಗುರುತಿಸಿ ಪ್ರಶಸ್ತಿ ನೀಡಲಾಗಿದೆ’ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದ್ದಾರೆ.

‘ಇಂಧನ ವಲಯದಲ್ಲಿನ ಹೊಸ ನೀತಿಗಳು ರಾಜ್ಯವನ್ನು ನವೀಕರಿಸಬಹುದಾದ ಇಂಧನದ ಶಕ್ತಿ ಕೇಂದ್ರವನ್ನಾಗಿ ರೂಪಿಸುತ್ತಿವೆ’ ಎಂದು ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಹೇಳಿದ್ದಾರೆ.

‘ನವೀಕರಿಸಬಹುದಾದ ಇಂಧನದ ರಾಷ್ಟ್ರೀಯ ಗುರಿಗಳನ್ನು ಬೆಂಬಲಿಸುವ ನಿಟ್ಟಿನಲ್ಲಿ ಮಾಡುತ್ತಿರುವ ಅವಿರತ ಪ್ರಯತ್ನಕ್ಕೆ ಈ ಪ್ರಶಸ್ತಿ ಸಂದಿದೆ’ ಎಂದು ಕೆ.ಪಿ. ರುದ್ರಪ್ಪಯ್ಯ ಅವರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಸಾಂಸ್ಕೃತಿಕ ಸಮಾವೇಶ: ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಶುಭಾ ಧನಂಜಯ, ಅತಿಥಿಗಳು: ಶ್ರೀಧರ್, ಬಲವಂತರಾವ್ ಪಾಟೀಲ, ಸಂಪನ್ಮೂಲ ವ್ಯಕ್ತಿಗಳು: ಜೋಗಿಲ ಸಿದ್ಧರಾಜು, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10



ಬರಗೂರು ರಾಮಚಂದ್ರಪ್ಪ

ನೊಬೆಲ್ ಪ್ರೈಜ್ ಡೈಲಾಗ್ ಬೆಂಗಳೂರು– ದಿ ಫ್ಯೂಚರ್ ವೀ ವಾಂಟ್: ಡೇವಿಡ್ ಮೆಕ್‌ಮಿಲಾನ್, ಜೇಮ್ಸ್ ರಾಬಿನ್‌ಸನ್, ಗಗನ್‌ದೀಪ್ ಕಾಂಗ್, ಮಾಂಟೆಕ್ ಸಿಂಗ್ ಅಹ್ಲುವಾಲಿಯಾ, ಸ್ಥಳ: ಜೆ.ಎನ್. ಟಾಟಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಬೆಳಿಗ್ಗೆ 10

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ತರಗತಿಗಳಿಗೆ ಚಾಲನೆ: ಅಧ್ಯಕ್ಷತೆ: ಧನಲಕ್ಷ್ಮಿ ಬಸವರಾಜ್, ಜಯಲಕ್ಷ್ಮಿ ಆರ್., ಅತಿಥಿಗಳು: ಜಿ. ಮಣಿವಚಗಂ, ಆಯೋಜನೆ ಮತ್ತು ಸ್ಥಳ: ಪಂಚಶೀಲ ವೆಲ್‌ಫೇರ್ ಅಸೋಸಿಯೇಷನ್, ಪಟ್ಟಣಗೆರೆ, ರಾಜರಾಜೇಶ್ವರಿನಗರ, ಬೆಳಿಗ್ಗೆ 11

ಸಂಗೀತ ಕಛೇರಿ: ಗಾಯನ: ಸಿ. ರಮೇಶ್, ಪಿಟೀಲು: ಎಸ್. ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ, ಸ್ಥಳ: ಯೋಗನರಸಿಂಹ ಸನ್ನಿಧಿ, ವೇಣುಗೋಪಾಲಸ್ವಾಮಿ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.15

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ..
nagaradalli_indu@prajavani.co.in

ಸೇಂದಿ: 20 ಮಂದಿ ಅಸ್ವಸ್ಥ

ಕೊಡಿಗೇನಹಳ್ಳಿ: ಕೊಡಿಗೇನಹಳ್ಳಿ ಹೋಬಳಿಗೆ ಹೊಂದಿಕೊಂಡಿರುವ ಆಂಧ್ರ ಪ್ರದೇಶದ ಚರ್ಲಾಪಲ್ಲಿ ಮುದ್ದೇನಹಳ್ಳಿ ಗೇಟ್ ಸಮೀಪ ಕಲಬೆರಕೆ ಸೇಂದಿ ಕುಡಿದು ರಾಜ್ಯ ಮತ್ತು ಆಂಧ್ರದ 20 ಮಂದಿ ಅಸ್ವಸ್ಥಗೊಂಡಿದ್ದಾರೆ.

ಮಧುಗಿರಿ ತಾಲ್ಲೂಕಿನ ತೆರಿಯೂರು ಗ್ರಾಮದ 13, ಚಿಕ್ಕದಾಳವಟ್ಟ ಗ್ರಾಮದ ಇಬ್ಬರು ಹಾಗೂ ಆಂಧ್ರಪ್ರದೇಶದ ಚೋಳೂರು ಗ್ರಾಮದ ಐವರು ಆಸ್ಪತ್ರೆಗೆ ದಾಖಲಾಗಿದ್ದಾರೆ.

ನಿಧನ ವಾರ್ತೆ

ಜಿ.ಎ. ಜ್ಯೋತಿ

ಬೆಂಗಳೂರು: ಹನುಮಂತನಗರದ ನಿವಾಸಿ ಜಿ.ಎ. ಜ್ಯೋತಿ ಅವರು ಭಾನುವಾರ ನಿಧನರಾದರು. ಅವರಿಗೆ ಪತಿ, ಪುತ್ರ, ಪುತ್ರಿ ಇದ್ದಾರೆ. ಚಾಮರಾಜಪೇಟೆಯ ಆಜಾದ್ ನಗರದ ಟಿ.ಆರ್. ಮಿಲ್ ಚಿತಾಗಾರದಲ್ಲಿ ಜ್ಯೋತಿ ಅವರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.



ಜಿ.ಎ. ಜ್ಯೋತಿ

ಕುಂದು ಕೊರತೆ ಜನದನಿ




ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...
9606038256



‘ಉದ್ಯಾನಕ್ಕೆ ಲಗ್ಗೆ ಇಟ್ಟ ಎಮ್ಮೆಗಳು’

ನಾಗರಬಾವಿಯ 11ನೇ ಬ್ಲಾಕ್‌ನಲ್ಲಿರುವ ದ.ರಾ. ಬೇಂದ್ರೆ ಉದ್ಯಾನಕ್ಕೆ ನಿತ್ಯ ಎಮ್ಮೆಗಳು ಲಗ್ಗೆ ಇಡುತ್ತಿವೆ. ಉದ್ಯಾನದ ಪಾದಚಾರಿ ಮಾರ್ಗದಲ್ಲಿ ಸಗಣಿ, ಗಂಜಲು ಹಾಕುತ್ತಿದ್ದು, ವಾಯು ವಿಹಾರಿಗಳು ಮೂಗು ಮುಚ್ಚಿಕೊಂಡು ಓಡಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಎಮ್ಮೆಗಳು ರಾತ್ರಿ ಹಗಲು ಇಲ್ಲಿಯೇ ಮಲಗುತ್ತಿವೆ. ಎಮ್ಮೆಗಳು ಉದ್ಯಾನಕ್ಕೆ ಬರದಂತೆ ಪಾಲಿಕೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಉದ್ಯಾನದ ಸ್ವಚ್ಛತೆಗೆ ಆದ್ಯತೆ ನೀಡಬೇಕು.

ಅಚ್ಯುತ್‌ರಾವ್, ನಾಗರಬಾವಿ



‘ಲಿಫ್ಟ್ ಸರಿಪಡಿಸಿ’

ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿ ಇರುವ ಮೇಲ್ಸೇತುವೆಯ ಲಿಫ್ಟ್ ಕೆಟ್ಟು ಹೋಗಿದೆ. ಇದರಿಂದ ರಸ್ತೆ ದಾಟುವ ಸಾರ್ವಜನಿಕರಿಗೆ ಅದರಲ್ಲೂ ವೃದ್ಧರಿಗೆ, ಮಹಿಳೆಯರಿಗೆ ಹಾಗೂ ಮಕ್ಕಳಿಗೆ ತೊಂದರೆ ಆಗಿದೆ. ನಾಲ್ಕು ತಿಂಗಳ ಹಿಂದೆಯೇ ಲಿಫ್ಟ್ ಕೆಟ್ಟು ಹೋಗಿದೆ. ಇದನ್ನು ನಿರ್ವಹಿಸುತ್ತಿರುವ ಶಕ್ತಿ ಡೆವಲಪರ್ಸ್‌ನವರು ನಿರ್ಲಕ್ಷ್ಯ ತೋರುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು.

ಟಿ.ವಿ.ಬಿ. ರಾಜನ್, ತಲಘಟ್ಟಪುರ

‘ಬಿಎಂಟಿಸಿ ಬಸ್‌ಗಳ ಸಂಖ್ಯೆ ಹೆಚ್ಚಿಸಿ’

ಕುಮಾರಸ್ವಾಮಿ ಲೇಔಟ್‌ಗೆ ಸಂಪರ್ಕ ಕಲ್ಪಿಸುವ ಬಿಎಂಟಿಸಿ ಬಸ್‌ಗಳ ಸಂಖ್ಯೆ ಕಡಿಮೆ ಇದೆ. ಇದರಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಆಗಿದೆ. ಅದರಲ್ಲೂ ಬೆಳಿಗ್ಗೆ ಕಚೇರಿಗೆ ಹೋಗುವವರಿಗೆ, ಶಾಲಾ–ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ಸಮಸ್ಯೆ ಆಗುತ್ತಿದೆ. ಮೆಜೆಸ್ಟಿಕ್‌ನ ಕೆಂಪೇಗೌಡ ಬಸ್ ನಿಲ್ದಾಣದಿಂದ ರಾತ್ರಿ 8 ಗಂಟೆಯ ನಂತರ ಕುಮಾರಸ್ವಾಮಿ ಲೇಔಟ್‌ಗೆ ತೆರಳಲು ಯಾವುದೇ ಬಸ್‌ಗಳಿಲ್ಲ. ಈ ಬಗ್ಗೆ ಬಿಎಂಟಿಸಿ ಅಧಿಕಾರಿಗಳಿಗೆ ದೂರು ನೀಡಿದರೂ ಸ್ಪಂದಿಸುತ್ತಿಲ್ಲ.

ಭಾರತಿ, ಕುಮಾರಸ್ವಾಮಿ ಲೇಔಟ್



‘ಚರಂಡಿ ಹೂಳೆತ್ತಲು ಆಗ್ರಹ’

ಅಂದ್ರಹಳ್ಳಿಯ ರಾಘವೇಂದ್ರ ಲೇಔಟ್ ದೊಡ್ಡಣ್ಣ ಬಡಾವಣೆಯ ಚರಂಡಿಗಳಲ್ಲಿ ಹೂಳು ತುಂಬಿಕೊಂಡಿದೆ. ಕಳೆದ ಹತ್ತು ವರ್ಷಗಳಿಂದ ಇಲ್ಲಿನ ಚರಂಡಿಗಳಲ್ಲಿ ಹೂಳು ಎತ್ತುವ ಕೆಲಸ ಆಗಿಲ್ಲ. ಮಳೆ ಬಂದರೆ ಚರಂಡಿಗಳಲ್ಲಿ ನೀರು ಸರಾಗವಾಗಿ ಹರಿಯದೇ ಮನೆಗಳಿಗೆ ನುಗ್ಗುತ್ತದೆ. ಈ ಬಗ್ಗೆ ದೂರು ನೀಡಿದರೂ ಸ್ಪಂದಿಸಿಲ್ಲ. ಸಂಬಂಧಪಟ್ಟ ಪಾಲಿಕೆಯ ಅಧಿಕಾರಿಗಳು ಕೂಡಲೇ ಚರಂಡಿಗಳಲ್ಲಿರುವ ಹೂಳು ಎತ್ತುವ ಕಾರ್ಯಕ್ಕೆ ಮುಂದಾಗಬೇಕು.

ಅನಿತಾ, ರಾಘವೇಂದ್ರಸ್ವಾಮಿ ಬಡಾವಣೆ

ಪ್ರಾಣಿಗಳ ಮೇಲಿನ ಹಿಂಸೆ ತಡೆಯಲು ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ವೇಗನ್ ದಿನದ ಅಂಗವಾಗಿ ಪ್ರಾಣಿಗಳ ಮೇಲೆ ನಡೆಯುವ ಹಿಂಸೆಯನ್ನು ತಡೆಯುವ ಬಗ್ಗೆ ಜಾಗೃತಿ ಮೂಡಿಸಲು ಪ್ರಾಣಿ ಹಕ್ಕು ಹೋರಾಟಗಾರರು ಎಇಸಿಎಸ್ ಲೇಔಟ್‌ನಲ್ಲಿ ಅಭಿಯಾನ ನಡೆಸಿದರು.

ಬೆಂಗಳೂರು ಬ್ರಿಗೇಡ್ ಫಾರ್ ಅನಿಮಲ್ ಲಿಬರೇಷನ್ (ಬಿಬಿಎಎಲ್) ಜಾಗೃತಿ ಜಾಥಾವನ್ನು ನಗರದಲ್ಲಿ ಹಮ್ಮಿಕೊಂಡಿತ್ತು.

ಮಾಂಸ, ಹಾಲು, ಮೊಟ್ಟೆ, ಚರ್ಮ, ಜೇನುತುಪ್ಪ ಬಳಸುವುದು, ಪ್ರಾಣಿಗಳಿಂದ ಸೌಂದರ್ಯ ಉತ್ಪನ್ನಗಳನ್ನು ತಯಾರಿಸುವುದರ ಹಿಂದೆ ಕ್ರೌರ್ಯ ಅಡಗಿದೆ ಎಂದು ಪ್ರಾಣಿಹಕ್ಕು ಹೋರಾಟಗಾರರು ಪ್ರತಿಪಾದಿಸಿದರು.

ಕೋಳಿ, ಆಡು, ಮೀನು, ಹಂದಿಯನ್ನು ಆಹಾರಕ್ಕಾಗಿಯೇ ಸಾಕಲಾಗುತ್ತಿದೆ. ಅವುಗಳಿಗೆ ಆಗುವ ನೋವನ್ನು ನಾವು ನೋಡುತ್ತಿಲ್ಲ. ಆ ನೋವು ನಮ್ಮ ಮನಸ್ಸು, ಹೃದಯವನ್ನು ತಟ್ಟಬೇಕು ಎಂದು ಅಭಿಯಾನ ಆಯೋಜಕರಾದ ಮಹೇಶ್, ದಿಲೀಪ್ ತಿಳಿಸಿದರು.

‘ಪ್ರಾಣಿಗಳು ಮನುಷ್ಯರ ಬಳಕೆಗೆ ಸೃಷ್ಟಿಯಾದುದಲ್ಲ. ಆಹಾರ, ಉಡುಪು, ಮನರಂಜನೆಗೆ ಬಳಸಬಾರದು. ಅವುಗಳ ಚರ್ಮ ಅವುಗಳ ರಕ್ಷಣೆಗೇ ಇರುವುಂಥದ್ದು’ ಎಂದು ಹೇಳಿದರು.



ಪ್ರಾಣಿಗಳ ಮೇಲೆ ನಡೆಯುವ ಹಿಂಸೆಯನ್ನು ತಡೆಯುವ ಬಗ್ಗೆ ಜಾಗೃತಿ ಮೂಡಿಸಲು ಪ್ರಾಣಿ ಹಕ್ಕು ಹೋರಾಟಗಾರರು ಅಭಿಯಾನ ನಡೆಸಿದರು

ವೇಣುಗೆ ‘ಕೆಂಧೂಳಿ ರಾಜ್ಯೋತ್ಸವ ಪ್ರಶಸ್ತಿ’

ಬೆಂಗಳೂರು: ಕೆಂಧೂಳಿ ಪತ್ರಿಕೆ ನೀಡುವ ‘ಕೆಂಧೂಳಿ ರಾಜ್ಯೋತ್ಸವ’ ಪ್ರಶಸ್ತಿಗೆ ಸಾಹಿತಿ ಬಿ.ಎಲ್. ವೇಣು ಆಯ್ಕೆಯಾಗಿದ್ದಾರೆ.


ಬಿ.ಎಲ್. ವೇಣು

ಈ ಪ್ರಶಸ್ತಿಯು ₹ 10 ಸಾವಿರ ನಗದು ಒಳಗೊಂಡಿದೆ. ಶಿವಕುಮಾರ್ ಕಂಪ್ಲಿ ಅಧ್ಯಕ್ಷತೆಯಲ್ಲಿ ತುರುವನೂರು ಮಂಜುನಾಥ, ಶ್ರೀದೇವಿ ಕೆರೆಮನೆ ಮತ್ತು ಪರಶಿವ ಧನಗೂರು ಅವರ ಸಮಿತಿ ಈ ಆಯ್ಕೆ ಮಾಡಿದೆ.

‘ಕೆಂಧೂಳಿ ಪತ್ರಿಕೆ ಐದು ವರ್ಷ ಪೂರೈಸಿದ ಈ ಸಂದರ್ಭದಲ್ಲಿ ಸಾಹಿತ್ಯ, ಪತ್ರಿಕೋದ್ಯಮ, ಕೃಷಿ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಗಣ್ಯರಿಗೆ ಪ್ರತಿ ವರ್ಷ ಪ್ರಶಸ್ತಿ ನೀಡಲು ತೀರ್ಮಾನಿಸಿದೆ’ ಎಂದು ಪತ್ರಿಕೆ ಸಂಪಾದಕ ತುರುವನೂರು ಮಂಜುನಾಥ ತಿಳಿಸಿದ್ದಾರೆ.

ನ.8ಕ್ಕೆ ಪರ್ತ್‌ನಲ್ಲಿ ರಾಜ್ಯೋತ್ಸವ

ಬೆಂಗಳೂರು: ಪಶ್ಚಿಮ ಆಸ್ಟ್ರೇಲಿಯಾ ಕನ್ನಡ ಸಂಘವು ಪರ್ತ್‌ನಲ್ಲಿ ನ.8ರಂದು 17ನೇ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸುತ್ತಿದೆ.

ಕಿರು ನಾಟಕ, ನೃತ್ಯ, ಹಾಡುಗಾರಿಕೆ, ವಚನ ಕುರಿತು ಉಪನ್ಯಾಸ, ಮನರಂಜನೆ ಕಾರ್ಯಕ್ರಮಗಳು ನಡೆಯಲಿವೆ. ರಾಜ್ಯದಿಂದ ಕವಯಿತ್ರಿ ಮಮತಾ, ಪದ್ಮಾ ಟಿ ಚಿನ್ಮಯಿ, ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ, ಲೇಖಕ ಹರ್ಷ ಸಾಲಿಮಠ್ ಅವರಿಗೆ ಆಹ್ವಾನ ನೀಡಲಾಗಿದೆ. ಬಳಿಕ ಮಮತಾ ಅವರು ಸಿಂಗಪುರದಲ್ಲಿ ಆಯೋಜಿಸಿರುವ ಕನ್ನಡ ಕಾರ್ಯಕ್ರಮದಲ್ಲಿ ಕವಿತೆ ವಾಚಿಸುವರು.

ಜವಾಬ್ದಾರಿಯುತ ನಾಗರಿಕರನ್ನು ಸೃಷ್ಟಿಸುವುದೇ ಶಿಕ್ಷಣದ ಮೂಲ ಉದ್ದೇಶ.
-ಸ್ವಾಮಿ ವಿವೇಕಾನಂದ



ಮಗನಿಗೆ ಓದಿನಲ್ಲಿ ಆಸಕ್ತಿ ಮೂಡಿಸಲು ಏನು ಮಾಡಲಿ?

ಮಗ 7ನೇ ತರಗತಿಯಲ್ಲಿದ್ದಾನೆ. ಅವನಿಗೆ ಶಾಲಾ ಪರೀಕ್ಷೆಯಲ್ಲಿ ಉತ್ತಮ ಅಂಕಗಳು ಬರುವುದಿಲ್ಲ. ಕತೆ ಪುಸ್ತಕಗಳನ್ನು ಏಕಾಗ್ರತೆಯಿಂದ ಓದುತ್ತಾನಾದರೂ ಪಠ್ಯಪುಸ್ತಕ ಹಿಡಿದು ಕೂತರೆ ಚಂಚಲನಾಗುತ್ತಾನೆ (ಪಾಠ ಓದಬೇಕೆಂಬ ಕಾರಣಕ್ಕೆ ಕತೆ ಪುಸ್ತಕ ಹಿಡಿಯುವನೆಂಬ ಅನುಮಾನವೂ ಒಮ್ಮೊಮ್ಮೆ ಮೂಡುತ್ತದೆ). ಶಿಕ್ಷಕಿಯರು ಅವನಲ್ಲಿ ಸುಧಾರಿಸುವ ಸಾಮರ್ಥ್ಯವಿದೆ ಅನ್ನುತ್ತಿರುತ್ತಾರೆ. ಕಡಿಮೆ ಅಂಕಗಳೆಂದು ನಾನು ನಿಂದಿಸುವುದಿಲ್ಲ ಅಥವಾ ಒತ್ತಡ ಹೇರುವುದಿಲ್ಲ. ಸಕಾರಾತ್ಮಕವಾಗಿ ಉತ್ತೇಜಿಸುತ್ತಿರುತ್ತೇನೆ. ಓದಿನ ಮಹತ್ವದ ಕುರಿತಾದ ಕತೆ, ಆದರ್ಶಪುರುಷರ ಉದಾಹರಣೆಗಳನ್ನು ಹೇಳುತ್ತಿರುತ್ತೇನೆ. ಆದರೂ ಬದಲಾವಣೆ ಕಾಣುತ್ತಿಲ್ಲ. ಉಳಿದ ವಿಷಯಗಳಲ್ಲಿ ಚುರುಕಾಗಿದ್ದಾನೆ. ಬ್ಯಾಡ್ಮಿಂಟನ್, ಕೊಳಲಿನ ತರಗತಿಗಳಿಗೆ ಹೋಗುತ್ತಿದ್ದಾನೆ. ಈಗಿನ ಸ್ಪರ್ಧಾತ್ಮಕ ಜಗತ್ತಿನ ಶಿಕ್ಷಣ ಪದ್ಧತಿಯಲ್ಲಿ ಅಂಕಗಳೇ ಮಾನದಂಡ ಆಗಿರುವುದರಿಂದ ಅವನ ಆಲಸ್ಯ ಹಾಗೂ ಚಂಚಲತೆಯನ್ನು ಹೋಗಲಾಡಿಸಿ ಏಕಾಗ್ರತೆಯಿಂದ ಓದುವಂತೆ ಮಾಡಲು ನಾನೇನು ಮಾಡಬಹುದು?

ಶ್ರೀರಂಜನಿ, ಬೆಂಗಳೂರು



ಸಮಾಧಾನ

ಡಾ. ಡಿ.ಎಂ. ಹೆಗಡೆ, ಸಮಾಲೋಚಕ

ನಿಮ್ಮ ಮಗನ ಅನಾಸಕ್ತಿಯ ಬಗ್ಗೆ ನೀವು ಅವನನ್ನು ಬೈಯದೇ ಅವಮಾನಿಸದೇ ಶಿಕ್ಷಿಸದೇ ಇರುವುದು ನಿಜಕ್ಕೂ ಒಳ್ಳೆಯ ಸಂಗತಿ. ನಮ್ಮ ಮಕ್ಕಳು ಹೇಗಿದ್ದರೂ ನಮ್ಮ ಮಕ್ಕಳು. ನಮಗಾಗಿ ನಾವು ಅವರನ್ನು ಕರೆತಂದಿರುವಾಗ, ಅವರನ್ನು ಸಹಿಸಿಕೊಳ್ಳುವುದು ಹಾಗೂ ಅವರ ವ್ಯಕ್ತಿತ್ವದ ವಿಶೇಷಗಳನ್ನು ಗಮನಿಸಿ, ಅದನ್ನು ಪ್ರೋತ್ಸಾಹಿಸುವುದು ಪಾಲಕರ ಕರ್ತವ್ಯ. ಅದರ ಬಗ್ಗೆ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಇನ್ನು, ಅವನ ಆಸಕ್ತಿಯ ಕ್ಷೇತ್ರಗಳಲ್ಲಿ ಅವನ ಸಾಧನೆ ಹೇಗಿದೆ? ಅವನಿಗೆ ಅದರಲ್ಲಿ ಮುಂದುವರಿಯುವ ಆಸಕ್ತಿ ಇದೆಯೇ? ಇನ್ನೇನನ್ನಾದರೂ ಕಲಿಯಲು ಆಸಕ್ತಿ ತೋರುತ್ತಿದ್ದಾನೆಯೇ?

ಶಾಲಾ ಪಠ್ಯದಲ್ಲಿ ಅವನಿಗೆ ಆಸಕ್ತಿ ಕಡಿಮೆಯಾಗುವುದಕ್ಕೆ ಅನೇಕ ಕಾರಣಗಳಿರಬಹುದು. ಶಾಲೆಯ ಪಠ್ಯಕ್ರಮ, ಕಲಿಸುವ ವಿಧಾನ ಅವನಿಗೆ ಇಷ್ಟವಾಗದೇ ಇರಬಹುದು, ವಿಷಯ ಅರ್ಥವಾಗಿಲ್ಲದೇ ಇರಬಹುದು, ಪಠ್ಯಕ್ಕೆ ಸಂಬಂಧಿಸಿದ ಕೆಲಸಗಳ ಭಾರ ಹೆಚ್ಚಾಗಿ ಗೊಂದಲವಾಗಿರಬಹುದು. ಗೆಳೆಯರಿಂದಾಗಲೀ ಇತರರಿಂದಾಗಲೀ ಅವಮಾನ ಆಗಿರಬಹುದು. ಶಿಕ್ಷಕರು, ಪಾಲಕರು ಶಿಕ್ಷಿಸಿರಬಹುದು. ಸೋಷಿಯಲ್ ಮೀಡಿಯಾ, ಡಿಜಿಟಲ್ ಆಟ, ರೀಲ್ಸ್‌ಗಳ ಕಡೆಗೆ ಹೆಚ್ಚು ಆಸಕ್ತನಾಗಿರಬಹುದು. ಕೆಲವರಿಗೆ ಎಳವೆಯಲ್ಲಿಯೇ ಬದುಕಿನ ಬಗ್ಗೆ ಗಾಂಭೀರ್ಯ ಬರುತ್ತದೆ. ಇನ್ನು ಕೆಲವರಿಗೆ ವಯಸ್ಸಾದರೂ ಬರುವುದಿಲ್ಲ. ಇಲ್ಲಿ ಯಾರೂ ಯಾರಂತೆಯೂ ಇಲ್ಲ. ಎಲ್ಲರೂ ಭಿನ್ನವಾಗಿ, ವಿಶೇಷವಾಗಿ ಇದ್ದಾರೆ. ಅವರವರ ಬದುಕನ್ನು ಅವರವರದ್ದೇ ರೀತಿಯಲ್ಲಿ ಬದುಕಲಿಕ್ಕೆ ಹುಟ್ಟಿದ್ದಾರೆ.

ಇರಲಿ, ಮಗನಿಗೆ ಓದಿನಲ್ಲಿ ಆಸಕ್ತಿ ಕಡಿಮೆಯಾಗುತ್ತಿದೆ ಎಂದು ನೀವಾಗಲೀ ಅವನಾಗಲೀ ಚಿಂತಿತರಾಗಬೇಕಾಗಿಲ್ಲ. ಪ್ರತಿಯೊಬ್ಬರಲ್ಲೂ ಒಂದಲ್ಲಾ ಒಂದು ಪ್ರತಿಭೆ ಇರುತ್ತದೆ. ಸಚಿನ್ ತೆಂಡೂಲ್ಕರ್ ಅದ್ಭುತ ಕ್ರಿಕೆಟ್ ಆಟಗಾರನಾಗಿ ಜಗತ್ಪ್ರಸಿದ್ಧರಾಗಿದ್ದಾರೆ. ಅದೇ ಆತ ವೈದ್ಯನೋ ನಟನೋ ಇನ್ನೇನೋ ಆಗಿದ್ದರೆ ಪ್ರಸಿದ್ಧರಾಗುವ ಸಾಧ್ಯತೆ ಇರಲಿಲ್ಲವೇನೊ. ಹಾಗೆಯೇ ಲತಾ ಮಂಗೇಶ್ಕರ್, ಅಮಿತಾಭ್ ಬಚ್ಚನ್, ರಜನಿಕಾಂತ್, ಅಬ್ದುಲ್ ಕಲಾಂ, ಸಿ.ಎನ್.ಆರ್. ರಾವ್, ರೊನಾಲ್ಡೊ, ಸ್ಟೀವ್ ಜಾಬ್ಸ್, ಜಾಕಿರ್ ಹುಸೇನ್, ವಾಜಪೇಯಿ, ಯಶ್, ಪಿ.ವಿ.ಸಿಂಧು... ಹೀಗೆಯೇ ತಕ್ಷಣಕ್ಕೆ ನೆನಪಾಗುವ ಯಾವುದೇ ಪ್ರಖ್ಯಾತರ ಉದಾಹರಣೆಯನ್ನು ತೆಗೆದುಕೊಂಡರೂ, ಅವರು ಏನಾಗಿ ಪ್ರಸಿದ್ಧರಾಗಿದ್ದಾರೋ ಆಯಾ ಕ್ಷೇತ್ರದಲ್ಲಿ ಅಪರಿಮಿತವಾದದ್ದನ್ನು ಸಾಧಿಸಿದ್ದಾರೆ. ಅವರಲ್ಲಿ ಬಹುತೇಕರ ಶೈಕ್ಷಣಿಕ ಅಂಕಪಟ್ಟಿ ಆಕರ್ಷಕವಾಗಿ ಇಲ್ಲದೇ ಇರಬಹುದು. ಆದರೇನಂತೆ ತಮ್ಮ ಜೀವನವನ್ನು ಅದ್ಭುತವಾಗಿ ನಿರ್ಮಿಸಿಕೊಂಡಿದ್ದಾರೆ. ಶಾಲಾ ಪರೀಕ್ಷೆಯ ಅಂಕಗಳು ಮಾತ್ರ ಒಬ್ಬ ವ್ಯಕ್ತಿಯ ಬದುಕಿನ ಯಶಸ್ಸನ್ನು ನಿರ್ಧರಿಸುವುದಿಲ್ಲ. ಅದರ ಹೊರತಾಗಿಯೂ ಬದುಕು ಬಹಳ ವಿಶಾಲವಾಗಿದೆ, ಸೊಗಸಾಗಿದೆ.

ಹಾಗೆಯೇ, ನಿಮ್ಮ ಮಗನಲ್ಲಿರುವ ವಿಶೇಷ ಪ್ರತಿಭೆಯನ್ನು ಪತ್ತೆ ಮಾಡಿ. ಅವನ ಆಸಕ್ತಿಯನ್ನು ಗಮನಿಸಿ. ಅದನ್ನು ಮನಃಪೂರ್ತಿ ಪ್ರೋತ್ಸಾಹಿಸಿ. ಮಕ್ಕಳು ಹೇಗಿದ್ದಾರೋ ಹಾಗೆಯೇ ಪ್ರೀತಿಸಿ. ಅವರನ್ನು ನಿಮ್ಮ ಇಚ್ಛೆಯಂತೆ ಬದಲಾಯಿಸಲು ಪ್ರಯತ್ನಿಸಬೇಡಿ. ಅಂಥ ನಿಮ್ಮ ಪ್ರಯತ್ನದಿಂದ ಇಬ್ಬರಿಗೂ ಕಷ್ಟ, ನಷ್ಟ. ❖



ಎಂಬಿಎ, ಎಂಸಿಎ ಉಳಿಕೆ ಸೀಟಿಗೆ ಅರ್ಜಿ ಆಹ್ವಾನ

ಬೆಂಗಳೂರು ನಗರ ವಿಶ್ವವಿದ್ಯಾಲಯದ (ಬಿಸಿಯು) 2025-26ನೇ ಸಾಲಿನ ಎಂಬಿಎ ಹಾಗೂ ಎಂಸಿಎ ಕೋರ್ಸ್‌ಗಳ ಉಳಿಕೆ ಸೀಟುಗಳಿಗಾಗಿ ಅರ್ಹ ಪದವೀಧರರಿಂದ ಅರ್ಜಿ ಆಹ್ವಾನಿಸಲಾಗಿದೆ. ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜು ಕ್ಯಾಂಪಸ್‌ನಲ್ಲಿ ಎಂಬಿಎ (ಬೆಳಿಗ್ಗೆ ಮತ್ತು ಸಂಜೆ) ಹಾಗೂ ವಿಶ್ವವಿದ್ಯಾಲಯದ ಬಾಗಲೂರು ಸ್ನಾತಕೋತ್ತರ ಕೇಂದ್ರದಲ್ಲಿ ಎಂಸಿಎ ಕೋರ್ಸ್‌ಗಳಿಗೆ ಇದು ಅನ್ವಯವಾಗಲಿದೆ.

ಆನ್‌ಲೈನ್ ಅರ್ಜಿಗಳು ಲಭ್ಯವಿದ್ದು, ಅರ್ಜಿ ಸಲ್ಲಿಸಲು ನ. 7 ಅಂತಿಮ ದಿನ. ₹ 200 ದಂಡ ಶುಲ್ಕ ಸಹಿತ ನ. 10ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ. 13ರಂದು ಪ್ರವೇಶ ಪರೀಕ್ಷೆ ನಡೆಯಲಿದೆ. 15ರಂದು ಜ್ಯೇಷ್ಠತಾ ಪಟ್ಟಿ ಪ್ರಕಟವಾಗಲಿದ್ದು, 17ರಂದು ಕೌನ್ಸೆಲಿಂಗ್ ಇರಲಿದೆ ಎಂದು ಬಿಸಿಯು ಕುಲಸಚಿವ ಎ.ನವೀನ್ ಜೋಸೆಫ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿ ವೇತನ ಕೈಪಿಡಿ

ಮಹೀಂದ್ರಾ ಎಂಪವರ್‌ಹರ್ ಸ್ಕಾಲರ್‌ಷಿಪ್ ಪ್ರೋಗ್ರಾಂ

ಮಹೀಂದ್ರಾ ಮತ್ತು ಮಹೀಂದ್ರಾ ಲಿಮಿಟೆಡ್‌ನ ಒಂದು ಉಪಕ್ರಮ ಇದಾಗಿದೆ. 9ರಿಂದ 12ನೇ ತರಗತಿಯವರೆಗಿನ, ಪದವಿ ಅಥವಾ ಸ್ನಾತಕೋತ್ತರ ಪದವಿಯ ಪ್ರತಿಭಾನ್ವಿತ ವಿದ್ಯಾರ್ಥಿನಿಯರನ್ನು ಬೆಂಬಲಿಸಲಿದೆ.

ಅರ್ಹತೆ: ಹಿಂದಿನ ಶೈಕ್ಷಣಿಕ ವರ್ಷ ಅಥವಾ ಸೆಮಿಸ್ಟರ್‌ನಲ್ಲಿ ಕನಿಷ್ಠ ಶೇ 50ರಷ್ಟು ಅಂಕಗಳನ್ನು ಪಡೆದಿರಬೇಕು. ಕುಟುಂಬದ ವಾರ್ಷಿಕ ಆದಾಯ ಮಿತಿ ₹ 4 ಲಕ್ಷ. ದೇಶದಾದ್ಯಂತದ ವಿದ್ಯಾರ್ಥಿಗಳು, ಅಂಚಿನಲ್ಲಿರುವ ಸಮುದಾಯಗಳಿಗೆ (ಎಸ್‌ಸಿ, ಎಸ್‌ಟಿ, ಒಬಿಸಿ...) ಆದ್ಯತೆ. ಮಹೀಂದ್ರಾ & ಮಹೀಂದ್ರಾ ಅಥವಾ ಬಡ್ಡಿ4ಸ್ಟಡಿ ಉದ್ಯೋಗಿಗಳ ಮಕ್ಕಳು ಅರ್ಜಿ ಸಲ್ಲಿಸುವಂತಿಲ್ಲ. ಫಲಿತಾಂಶಕ್ಕಾಗಿ ಕಾಯುತ್ತಿರುವ ವಿದ್ಯಾರ್ಥಿನಿಯರು ತಮ್ಮ ಹಿಂದಿನ ಸೆಮಿಸ್ಟರ್‌ನ ಅಥವಾ ವರ್ಷದ ಅಂಕಗಳನ್ನು ಬಳಸಿಕೊಂಡು ಅರ್ಜಿ ಸಲ್ಲಿಸಬಹುದು.

ಆರ್ಥಿಕ ಸಹಾಯ: ಆಯ್ಕೆಯಾದ ವಿದ್ಯಾರ್ಥಿಗಳಿಗೆ ₹ 5,500 ಸ್ಥಿರ ಸ್ಕಾಲರ್‌ಷಿಪ್.

ಅರ್ಜಿ ಸಲ್ಲಿಸಲು ಕೊನೇ ದಿನ: 15-11-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್

ಹೆಚ್ಚಿನ ಮಾಹಿತಿಗೆ: www.b4s.in/praja/MNM2

ಉದ್ಯೋಗ ಕಿರಣ



ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

ಜೂನಿಯರ್ ಆರ್ಕಿಟೆಕ್ಟ್: ರೌಸಿಂಗ್ ಡಿಸೈನ್ಸ್ ಸಂಸ್ಥೆಯು ಜೂನಿಯರ್ ಆರ್ಕಿಟೆಕ್ಟ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಆಟೊಕ್ಯಾಡ್, ಫಿಗ್ಮ ಮತ್ತು ಎಂಎಸ್–ಎಕ್ಸೆಲ್‌ನ ಜ್ಞಾನ ಹೊಂದಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ನವೆಂಬರ್ 26 ಅರ್ಜಿ ಸಲ್ಲಿಕೆಗೆ ಕಡೇ ದಿನ. ಸ್ಟೈಪೆಂಡ್– ತಿಂಗಳಿಗೆ ₹ 15,000. **ಸಂಪರ್ಕ:** https://shorturl.at/SRz3j.

ಡಿಜಿಟಲ್ ಮಾರ್ಕೆಟಿಂಗ್: ಬ್ರ್ಯಾಂಡ್‌ಶಾರ್ಕ್ ಸಂಸ್ಥೆಯು ಡಿಜಿಟಲ್ ಮಾರ್ಕೆಟಿಂಗ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಡಿಜಿಟಲ್ ಮಾರ್ಕೆಟಿಂಗ್, ಫೇಸ್‌ಬುಕ್ ಜಾಹೀರಾತು, ಫೇಸ್‌ಬುಕ್ ಮಾರ್ಕೆಟಿಂಗ್, ಗೂಗಲ್ ಆ್ಯಡ್‌ವರ್ಡ್ಸ್, ಇನ್‌ಸ್ಟಾಗ್ರಾಂ ಮಾರ್ಕೆಟಿಂಗ್, ಪರ್‌ಫಾರ್ಮೆನ್ಸ್ ಮಾರ್ಕೆಟಿಂಗ್, ಸರ್ಚ್ ಎಂಜಿನ್ ಮಾರ್ಕೆಟಿಂಗ್ (ಎಸ್‌ಇಎಂ), ಸರ್ಚ್ ಎಂಜಿನ್ ಆಪ್ಟಿಮೈಸೇಷನ್ (ಎಸ್‌ಇಒ) ಮತ್ತು ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್ ಬಗ್ಗೆ ಜ್ಞಾನ ಇರುವ ವಿದ್ಯಾರ್ಥಿಗಳು ನವೆಂಬರ್ 26ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ತಿಂಗಳಿಗೆ ₹ 10,000, **ಸಂಪರ್ಕ:** https://shorturl.at/mseAp

ಕ್ರೀಡಾಂಗಣವೂ ತುಂಬಲಿ ಟ್ಯೂಷನ್ ಕೇಂದ್ರದಂತೆ!



ಸಂಗ್ರಹ ಚಿತ್ರ

• ನರೇಂದ್ರ ರೈ ದೇರ್ಲ

ಯಾವುದೇ ಮಗುವಿಗೆ ಹನ್ನೆರಡರಿಂದ ಹದಿನೈದರ ಹರೆಯವು ದೇಹದ ಹಾರ್ಮೋನುಗಳು ತ್ವರಿತವಾಗಿ ಬೆಳೆಯುವ, ಮನಸ್ಸು ವಿಕಸಿಸುವ ಸಮಯ. ಈ ಹೊತ್ತಿನಲ್ಲಿ ದೇಹ ದಣಿದರೆ ಮನಸ್ಸು ಹದಗೊಳ್ಳುತ್ತದೆ. ಓದಿನೊಂದಿಗೆ ಓಟ, ಆಟ, ಹಾರಾಟ, ನಗು, ತಮಾಷೆ, ಬೆವರು ಎಲ್ಲವೂ ಸೃಷ್ಟಿಶೀಲತೆಗೆ ಇಂಬು ಕೊಡುತ್ತವೆ. ಅಂಗಳದ ಬಯಲಿನ ಚುರುಕಾದ ಚಟುವಟಿಕೆಯು ದೇಹದ ಎಲುಬಿಗೂ ಮನಸ್ಸಿನ ಮೆದುಳಿಗೂ ಪ್ರಾಣ ತುಂಬುತ್ತದೆ.

ದುರಂತವೆಂದರೆ, ದೇಹದ ಮೂಲಕ ಮನಸ್ಸು ಅರಳುವ, ಕ್ರಿಯಾಶೀಲಗೊಳ್ಳುವ ಇದೇ ಹೊತ್ತಿಗೆ ನಾವು ನಮ್ಮ ಮಕ್ಕಳನ್ನು ಅಂಕದ ಒತ್ತಡದಲ್ಲಿ ಮುಳುಗಿಸುತ್ತೇವೆ. ಬರೀ ಓದು ಓದು ಓದು ಎಂದು ಕಲಿಕೆಯ ಗೋಡೆಯೊಳಗೆ ನಿರ್ಬಂಧಿಸುತ್ತೇವೆ. ಎಂಟು ದಾಟಿ ಒಂಬತ್ತನೇ ತರಗತಿಗೆ ಬಂದರೆ ಸಾಕು, ಮನೆಯೊಳಗೆ ಅಘೋಷಿತ ಸೆಕ್ಷನ್ನೊಂದು ಜಾರಿಯಾಗುತ್ತದೆ. ಮಗು ಆಚೆ ಈಚೆ ನೋಡುವಂತಿಲ್ಲ, ಪಠ್ಯ ಬಿಟ್ಟು ಬೇರೆ ಪುಸ್ತಕ ಇಲ್ಲ, ಗೆಳೆಯರ ಕೂಟ ಸೇರುವಂತಿಲ್ಲ, ಇಷ್ಟದ ಕ್ರಿಕೆಟ್ ಇಲ್ಲವೇ ಇಲ್ಲ, ಸಂಗೀತ, ಸಿನಿಮಾ ದೂರದ ಮಾತು. ಬರೀ ಟೆನ್ಷನ್. ಹೀಗೆ ಅಂಕದ ಮೂಸೆಯಲ್ಲಿ ಎರಕಹೊಯ್ಯುವ ಪ್ರತಿಬಂಧಕಾಜ್ಞೆಯು ನಿತ್ಯ ನಿರಂತರ ಜಾರಿಯಲ್ಲಿದ್ದು, ಮಗುವನ್ನು ಬರೀ ಪುಸ್ತಕಕ್ಕೆ ಅಂಟಿಸಿ ಬಿಡುತ್ತದೆ.

ತಮ್ಮ ಮಗ ಅಥವಾ ಮಗಳನ್ನು ‘ಈಗ 10ನೆಯ ತರಗತಿ’ ಎಂಬ ಹೆಸರಿನಲ್ಲಿ ಮರ್ಯಾದೆಯ ಕಟಕಟೆಯಲ್ಲಿ ನಿಲ್ಲಿಸಲಾಗುತ್ತದೆ! ತಂದೆ ತಾಯಿಯಷ್ಟೇ ಅಲ್ಲ, ಶಿಕ್ಷಕರು, ಸಂಸ್ಥೆಯ ಮಾಲೀಕರು, ಮಾರ್ಗದರ್ಶಕರು ಎಲ್ಲರೂ ಮಗುವಿನ ಜೀವನವನ್ನು ಅಂಕಗಳ ಚೌಕಟ್ಟಿನಲ್ಲಿ ಅಳೆಯತೊಡಗುತ್ತಾರೆ. ವಿದ್ಯಾರ್ಥಿ ಪಡೆಯುವ ಅಂಕವು ಹೆತ್ತವರಿಗಷ್ಟೇ ಅಲ್ಲ ಶಾಲೆಗೂ ಮರ್ಯಾದೆಯ ಪ್ರಶ್ನೆಯಾಗುತ್ತದೆ. ಫಲಿತಾಂಶದ ಲಕ್ಷ್ಮಣರೇಖೆಯ ಒಳಗೆ ಬಂಧಿಸಿ ಮಗುವನ್ನು ಕಾವಲು ಕಾಯಲಾಗುತ್ತದೆ.

> ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಪ್ಪಂದದ 31ನೇ ವಿಧಿಯ ಪ್ರಕಾರ, ಆಟ ಮತ್ತು ವಿಶ್ರಾಂತಿಯು ಮಕ್ಕಳ ಶಾರೀರಿಕ, ಮಾನಸಿಕ ಬೆಳವಣಿಗೆಗೆ ಅತ್ಯವಶ್ಯ. ಆದರೆ ಶಿಕ್ಷಕರು ಮತ್ತು ಶಾಲಾ ಆಡಳಿತ ಮಂಡಳಿಯವರು ಈ ಹಕ್ಕಿನ ಮಹತ್ವ ಅರಿಯದ ಕಾರಣ ಮಕ್ಕಳು ಹಿಂಸೆಗೆ ಒಳಗಾಗುತ್ತಿದ್ದಾರೆ.

ಚಟುವಟಿಕೆ ಹದಗೆಟ್ಟರೆ...

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಮಕ್ಕಳು (ಅದರಲ್ಲೂ ವಿಜ್ಞಾನ ವಿಭಾಗದಲ್ಲಿ ಓದುತ್ತಿರುವವರು) ಸಾಮಾನ್ಯವಾಗಿ ಬೆಳಿಗ್ಗೆ ಶಾಲಾ ಕಾಲೇಜಿಗೆ ಮತ್ತು ಸಂಜೆ ಟ್ಯೂಷನ್‌ಗೆ ಹೋಗುತ್ತಾರೆ, ರಾತ್ರಿ ‘ಪ್ರ್ಯಾಕ್ಟೀಸ್ ಪೇಪರ್’ ಅಭ್ಯಾಸದಲ್ಲಿ ನಿರತರಾಗುತ್ತಾರೆ. ದೇಹಕ್ಕೆ ಚೂರೂ ವ್ಯಾಯಾಮವಿಲ್ಲ, ಕಣ್ಣುಗಳಿಗೆ ವಿಶ್ರಾಂತಿಯಿಲ್ಲ, ಮನಸ್ಸಿಗೆ ಶಾಂತಿಯಿಲ್ಲ.

ನಾವು ಮಗುವಿನ ಓದಿನ ಪ್ರಮಾಣದ ಬಗ್ಗೆ ಮಾತ್ರ ಚಿಂತಿಸುತ್ತೇವೆ. ಶಾಲೆಗಳು, ಪೋಷಕರು ಮತ್ತು ಸಮಾಜ ಎಲ್ಲರೂ ಸೇರಿ ಈ ವಯಸ್ಸಿನ ಮಕ್ಕಳನ್ನು ‘ನೀನು ಈ ಹಂತದಲ್ಲಿ ತಪ್ಪಿದರೆ ಜೀವನವೇ ತಪ್ಪುತ್ತದೆ’ ಎಂಬ ಮನೋಭಾವದೊಳಗೆ ತಳ್ಳುತ್ತಿದ್ದೇವೆ. ಈ ಒತ್ತಡದಿಂದ ಮಕ್ಕಳಲ್ಲಿ ತಾಳ್ಮೆ ಕಡಿಮೆಯಾಗುತ್ತಿದೆ, ಚಟುವಟಿಕೆ ಹದಗೆಡುತ್ತಿದೆ. ಇದನ್ನು ನಾವು ಗಂಭೀರವಾಗಿ ಪರಿಗಣಿಸಬೇಕಿದೆ.

ತಲೆಗಷ್ಟೇ ಒತ್ತಡ ಕೊಡುವ ಈ ಕಲಿಕಾಕ್ರಮ ನಿಧಾನವಾಗಿ ದೇಹದ ವೈಕಲ್ಯಕ್ಕೆ ಕಾರಣವಾಗಬಹುದು ಎನ್ನುತ್ತವೆ ಸಂಶೋಧನೆಗಳು. ಇದನ್ನು ಆಧರಿಸಿಯೇ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಕೆ.ಟಿ. ತಿಪ್ಪೇಸ್ವಾಮಿ ಇತ್ತೀಚೆಗೆ ಶಿಕ್ಷಣ ಇಲಾಖೆಗೆ ಪತ್ರ ಬರೆದು, ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಆಟ ಹಾಗೂ ದೈಹಿಕ ಶಿಕ್ಷಣದ ಅವಕಾಶ ನೀಡಲು ಒತ್ತಾಯಿಸಿದ್ದಾರೆ. ಹತ್ತನೇ ತರಗತಿಯಲ್ಲಿ ಉತ್ತಮ ಅಂಕ ಗಳಿಸಬೇಕು ಎಂಬ ಕಾರಣಕ್ಕಾಗಿ ಸರ್ಕಾರಿ ಶಾಲೆಗಳೂ ಸೇರಿ ಬಹುತೇಕ ಶಿಕ್ಷಣ ಸಂಸ್ಥೆಗಳು ಇಂದು ದೈಹಿಕ ಶಿಕ್ಷಣ ಅಥವಾ ನಿಯತ ಆಟಗಳ ತರಗತಿಗಳನ್ನು ರದ್ದು ಮಾಡುತ್ತಿವೆ. ತಿಪ್ಪೇಸ್ವಾಮಿ ಅವರ ಪ್ರಕಾರ, ಆಟ, ಕಲೆ, ಸಂಗೀತದಂತಹ ಪಠ್ಯೇತರ ಚಟುವಟಿಕೆಗಳು ಮಕ್ಕಳ ಸಮಗ್ರ ವ್ಯಕ್ತಿತ್ವದ ಅಭಿವೃದ್ಧಿಗೆ ಅಗತ್ಯವಾದವು. ಆದರೆ ಅಂಕದ ಒತ್ತಡದ ಕಾರಣದಿಂದ ಅವುಗಳನ್ನು ನಿರ್ಬಂಧಿಸುವುದು ಮಕ್ಕಳ ಕಲಿಕೆಯ ಮೇಲೆ ನೇರವಾಗಿ ದುಷ್ಪರಿಣಾಮ ಬೀರುತ್ತದೆ. ಶಾಲೆಗಳು ವಾರದಲ್ಲಿ ಕಡ್ಡಾಯವಾಗಿ ಕನಿಷ್ಠ ನಾಲ್ಕು ದೈಹಿಕ ಶಿಕ್ಷಣ ತರಗತಿಗಳನ್ನು ನಡೆಸಬೇಕು. ರಾಜ್ಯ ಸರ್ಕಾರದ ಪಠ್ಯಕ್ರಮದಲ್ಲೂ ಇದೇ ನಿಯಮ, ವೇಳಾಪಟ್ಟಿ ಇದೆ. ಶನಿವಾರ ಸಾಮೂಹಿಕ ವ್ಯಾಯಾಮ ಇದೆ. ಆದರೆ ಮಗು ಹತ್ತನೇ ತರಗತಿಗೆ ಬಂದಾಗ ಇವೆಲ್ಲವನ್ನೂ ನಿಲ್ಲಿಸಲಾಗುತ್ತಿದೆ. ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಕಾರ್ಯದರ್ಶಿ ಮಹೇಶ್ ಅವರು ಈ ತಪ್ಪನ್ನು ಸಂಸ್ಥೆಗಳು ಮಾಡುವ ಅಪರಾಧ ಎಂದೇ ನೇರವಾಗಿ ಎತ್ತಿ ತೋರಿಸಿದ್ದಾರೆ.

ಮನೆ ಮತ್ತು ಶಾಲೆಯು ಇಡೀ ದಿನ ಮಗುವನ್ನು ಓದಿಗಾಗಿ ಪೀಡಿಸುವುದರಿಂದ ಅದು ಧೃತಿಗೆಡುವ ಸಾಧ್ಯತೆ ಇರುತ್ತದೆ. ಅದೇ ಒತ್ತಡದಲ್ಲಿ ಮಗುವಿನ ಮನಸ್ಸು ಹೊಸತನವನ್ನು ಕಳೆದುಕೊಳ್ಳುತ್ತದೆ. ದೈಹಿಕ, ಮಾನಸಿಕ ಸ್ವಾಸ್ಥ್ಯಕ್ಕಿಂತ ಅದರ ಬುದ್ಧಿಮತ್ತೆಯ ಫಲಿತಾಂಶದ ನಿರೀಕ್ಷೆಯಲ್ಲಿ ಇರುವವರಿಗೆ ಇದು ಗಣನೀಯ ವಿಷಯವಾಗದೇ ಹೋಗುವುದು ಮಾತ್ರ ದುರಂತ.

ಆಟ ಮತ್ತು ವ್ಯಾಯಾಮವನ್ನು ನಾವು ‘ಓದಿಗೆ ಅಡ್ಡಿ’ ಎಂದೇ ನೋಡುತ್ತಿದ್ದೇವೆ. ಆದರೆ ಅದೇ ಸಮಯದಲ್ಲಿ, ಆಟವೇ ಕಲಿಕೆಯ ಮೂಲಭೂತ ವಿಧಾನದ ಉಪಕ್ರಮ ಎಂಬ ಅಂಶವನ್ನು ಮರೆತೇಬಿಟ್ಟಿದ್ದೇವೆ. ಮಗು ಆಟದ ಮೂಲಕ ಸಹಕಾರ, ಶಿಸ್ತು, ಸಹನೆ, ಸೋಲಿನ ಪಾಠಗಳನ್ನು ಕಲಿಯುತ್ತದೆ. ಈ ಪಾಠಗಳು ಯಾವುದೇ ಪುಸ್ತಕದೊಳಗೆ ಸಿಗುವುದಿಲ್ಲ. ಪರಿಣಾಮವಾಗಿ, ಮಕ್ಕಳ ದೇಹವು ಕಠಿಣವಾಗುವುದಕ್ಕಿಂತ ಮೊದಲು ಮನಸ್ಸೇ ಕಠಿಣವಾಗುತ್ತಿದೆ. ಹತ್ತನೇ ತರಗತಿಯ ಹಂತದಲ್ಲಿ ನಮ್ಮ ಕ್ರೀಡಾಂಗಣ ಖಾಲಿಯಾಗಿದೆ, ಆದರೆ ಟ್ಯೂಷನ್ ಸೆಂಟರ್‌ಗಳು ತುಂಬಿವೆ. ಮಕ್ಕಳ ಬಾಲ್ಯವನ್ನು ನಾವು ವ್ಯಾವಹಾರಿಕ ಆರ್ಥಿಕ ಅಂಕದ ಚೀಲದೊಳಗೆ ತುಂಬಿದ್ದೇವೆ. ಪ್ರೌಢ ಕಲಿಕಾ ಹಂತವನ್ನು ಪರೀಕ್ಷೆಯನ್ನು ಸಿದ್ಧಿಸಿಕೊಳ್ಳುವ ತರಬೇತಿ ಶಿಬಿರವನ್ನಾಗಿ ಮಾಡಿದ್ದೇವೆ. ಕಲಿಕೆಯ ಉದ್ದೇಶವೆಂದರೆ, ವಿಷಯವನ್ನು ತಲಸ್ಪರ್ಶಿಯಾಗಿ ಅರ್ಥೈಸುವುದಲ್ಲ, ಬಾಯಿಪಾಠ ಮಾಡಿ ಉತ್ತರಿಸಲು ತಯಾರಾಗುವುದು ಎಂಬ ಹೊಸ ವಿಕೃತಿ ಬೆಳೆದಿದೆ. ಎಸ್‌ಎಸ್‌ಎಲ್‌ಸಿ ಕಲಿಕೆಯ ಒಂದು ಹಂತ ಮಾತ್ರ. ಅದು ಜೀವನದ ಪರಮ ಅಂತ್ಯವಲ್ಲ. ಆದರೆ ನಮ್ಮ ಸ್ವಾರ್ಥ ಅದನ್ನು ಅಂತಿಮ ತೀರ್ಪನ್ನಾಗಿ ಮಾಡಿದೆ. ಈ ಭಯದ ಸಂಸ್ಕೃತಿಯನ್ನು ಮುರಿಯಬೇಕಾದ ಸಮಯ ಇದು. ಮಗು ಕಲಿಯಬೇಕು, ಬರೆಯುವ ಪರೀಕ್ಷೆ ಯಾವತ್ತೂ ಬದುಕುವ ಪರೀಕ್ಷೆಗಿಂತ ದೊಡ್ಡದಲ್ಲ ಎಂಬ ಅರಿವು ಮೂಡಿಸಬೇಕು. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್‌ಎಸ್‌ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಮೈಸೂರು ಒಡೆಯರು ಹಾಗೂ ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

ಬಹು ಆಯ್ಕೆ ಪ್ರಶ್ನೆಗಳು

1) ದಳವಾಯಿ ಕಾರುಗಳ್ಳಿಯ ಮಾರನಾಯಕನ ಕಾಟದಿಂದ ಬಿಡುಗಡೆ ನೀಡಿ ಶ್ರೀರಂಗಪಟ್ಟಣದ ಮಾಂಡಲಿಕನ ರಾಣಿಗೆ ಸಹಾಯ ಮಾಡಿದ ಯದುರಾಯರು ಎಲ್ಲಿಂದ ಬಂದಿದ್ದರು?
ಎ) ಪುಣೆ ಬಿ) ದ್ವಾರಕಾ
ಸಿ) ಅಯೋಧ್ಯೆ ಡಿ) ಮೇಲಿನ ಯಾವುದೂ ಅಲ್ಲ
ಉತ್ತರ:– ಬಿ

2) ಯದುರಾಯರಿಂದ ಜಯಚಾಮರಾಜ ಒಡೆಯರ್‌ವರೆಗೆ .... ಅರಸರುಗಳು ಆಳಿದರು.
ಎ) 25 ಬಿ) 30
ಸಿ) 40 ಡಿ) 60
ಉತ್ತರ:– ಎ

3) ಶ್ರೀರಂಗಪಟ್ಟಣವನ್ನು ವಿಜಯನಗರದ ರಾಜ ಪ್ರತಿನಿಧಿಯಿಂದ ವಶಪಡಿಸಿಕೊಂಡು ರಾಜಧಾನಿಯನ್ನಾಗಿ ಮಾಡಿದರು. ಸುತ್ತಮುತ್ತಲಿನ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡು ತನ್ನ ರಾಜ್ಯ ವಿಸ್ತರಿಸಿದವರು. ಇವರು ಯಾರು?
ಎ) ಚಿಕ್ಕದೇವರಾಜ ಒಡೆಯರು ಬಿ) ರಾಜ ಒಡೆಯರು
ಸಿ) ಕೃಷ್ಣರಾಯ ಒಡೆಯರು ಡಿ) ಮೇಲಿನ ಯಾರೂ ಅಲ್ಲ
ಉತ್ತರ:– ಬಿ

4) ರಾಜಮುಡಿ ಎಂಬ ಕಿರೀಟವನ್ನು ಮೇಲುಕೋಟೆ ಚೆಲುವನಾರಾಯಣ ಸ್ವಾಮಿಗೆ ಅರ್ಪಿಸಿದವರು ಯಾರು?
ಎ) ರಾಜ ಒಡೆಯರು ಬಿ) ಜಯಚಾಮರಾಜ ಒಡೆಯರು
ಸಿ) ಕೃಷ್ಣರಾಯ ಒಡೆಯರು ಡಿ) ಮೇಲಿನ ಯಾರೂ ಅಲ್ಲ
ಉತ್ತರ:– ಎ

5) ಮೈಸೂರಿನಲ್ಲಿ ನವರಾತ್ರಿ ಉತ್ಸವ ಪ್ರಾರಂಭಿಸಿದವರು ಯಾರು?
ಎ) ಚಿಕ್ಕದೇವರಾಜ ಒಡೆಯರು ಬಿ) ರಾಜ ಒಡೆಯರು
ಸಿ) ಕೃಷ್ಣರಾಯ ಒಡೆಯರು ಡಿ) ಮೇಲಿನ ಯಾರೂ ಅಲ್ಲ
ಉತ್ತರ:–ಬಿ

6) ಈ ಕೆಳಗಿನ ಯಾರು ಶಿವಾಜಿಯ ಸೇನೆಯನ್ನು ಮಧುರೆ, ಇಕ್ಕೇರಿ ಮತ್ತು ಬಿಜಾಪುರಗಳಲ್ಲಿ ಹಿಮ್ಮೆಟ್ಟಿಸಿದರು. ಮಾಗಡಿ, ಮಧುಗಿರಿ, ಕೊರಟಗೆರೆ ಮತ್ತಿತರ ಪ್ರಾಂತ್ಯಗಳನ್ನು ವಶಪಡಿಸಿಕೊಂಡರು?
ಎ) ರಾಜ ಒಡೆಯರು ಬಿ) ಚಿಕ್ಕದೇವರಾಜ ಒಡೆಯರು
ಸಿ) ಕೃಷ್ಣ ರಾಜ ಒಡೆಯರು
ಡಿ) ಜಯಚಾಮರಾಜ ಒಡೆಯರು
ಉತ್ತರ:– ಬಿ

7) ಯಾರಿಗೆ ಕರ್ನಾಟಕ ಕವಿಚಕ್ರವರ್ತಿ, ಅಪ್ರತಿಮ ವೀರ, ತೆಂಕಣರಾಜ, ನವಕೋಟಿ ನಾರಾಯಣ ಎಂಬ ಬಿರುದುಗಳಿದ್ದವು?
ಎ) ಚಿಕ್ಕದೇವರಾಜ ಒಡೆಯರು
ಸಿ) ಕೃಷ್ಣ ರಾಜ ಒಡೆಯರು ಸಿ) ರಾಜ ಒಡೆಯರು
ಡಿ) ಮೇಲಿನ ಯಾರಿಗೂ ಅಲ್ಲ
ಉತ್ತರ:– ಎ

8) ಚಿಕ್ಕದೇವರಾಜ ಒಡೆಯರು ಆಡಳಿತದಲ್ಲಿ ನೆರವು ನೀಡಲು ಒಂದು ಸಚಿವ ಸಂಪುಟವನ್ನು ನೇಮಕ ಮಾಡಿದ್ದರು. ಅದರ ಹೆಸರು?
ಎ) ಅಠಾರ ಕಛೇರಿ ಬಿ) ನವಕೋಟಿ ನಾರಾಯಣ
ಸಿ) ದಶಮಹಾ ದರ್ಶನ ಡಿ) ದಶಕೋಟಿ ನಾರಾಯಣ
ಉತ್ತರ:– ಎ

9) ತಿರುಮಲಾರ್ಯ, ಸಂಚಿ ಹೊನ್ನಮ್ಮ ಮುಂತಾದವರು ಯಾರ ಕಾಲದಲ್ಲಿ ಮೈಸೂರು ಸಾಮ್ರಾಜ್ಯದಲ್ಲಿ ಇದ್ದರು?
ಎ) ಕೃಷ್ಣ ರಾಜ ಒಡೆಯರು ಬಿ) ರಾಜ ಒಡೆಯರು
ಸಿ) ಚಿಕ್ಕದೇವರಾಜ ಒಡೆಯರು
ಡಿ) ಮೇಲಿನ ಯಾರ ಆಸ್ಥಾನದಲ್ಲಿಯೂ ಅಲ್ಲ
ಉತ್ತರ:– ಸಿ

10) ಹೈದರಾಲಿಯು ಯಾವ ಅರಸನನ್ನು ಗೃಹ ಬಂಧನದಲ್ಲಿರಿಸಿ ಅಧಿಕಾರವನ್ನು ತನ್ನ ಕೈಗೆತ್ತಿಕೊಂಡನು.?
ಎ) ಚಿಕ್ಕದೇವರಾಜ ಒಡೆಯರು
ಬಿ) ಎರಡನೇ ಕೃಷ್ಣರಾಜ ಒಡೆಯ
ಸಿ) ಜಯಚಾಮರಾಜ ಒಡೆಯರ್
ಡಿ) ಯದು ರಾಜ ಉತ್ತರ:– ಬಿ

11) ಆರ್ಥಿಕ ವ್ಯವಸ್ಥೆಯನ್ನು ಬಲಗೊಳಿಸಲು ಅನೇಕ ನೀತಿ–ನಿಯಮಗಳನ್ನು ರೂಪಿಸಿದ್ದರು. ಶ್ರೀಗಂಧ ಮತ್ತು ತಂಬಾಕು ಮತ್ತಿತರ ಪದಾರ್ಥಗಳನ್ನು ರಾಜ್ಯದ ಏಕಸ್ವಾಮ್ಯದಡಿಗೆ ತಂದಿದ್ದರು. ಫ್ರೆಂಚ್ ತಂತ್ರಜ್ಞರನ್ನು ಕರೆಯಿಸಿ ಮೈಸೂರಿನ ಸಾಂಪ್ರದಾಯಿಕ ಕರಕುಶಲ ವಸ್ತುಗಳ ಗುಣಮಟ್ಟವನ್ನು ಹೆಚ್ಚಿಸಿ ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ವ್ಯಾಪಾರ ಚಟುವಟಿಕೆಗಳನ್ನು ವೃದ್ಧಿಸುವ ಯೋಜನೆಯಲ್ಲಿದ್ದರು.
ಈ ಮೇಲಿನ ಟಿಪ್ಪಣಿ ಯಾರಿಗೆ ಸರಿ ಹೊಂದುತ್ತದೆ?
ಎ) ಹೈದರಾಲಿ ಬಿ) ಎರಡನೇ ಕೃಷ್ಣರಾಜ ಒಡೆಯರ್
ಸಿ) ಟಿಪ್ಪು ಸುಲ್ತಾನ್ ಡಿ) ಮೇಲಿನ ಯಾರಿಗೂ ಅಲ್ಲ
ಉತ್ತರ:– ಸಿ

12) ಮೂರನೇ ಆಂಗ್ಲೋ ಮೈಸೂರು ಯುದ್ಧದ ಕಾಲದಲ್ಲಿ ಬ್ರಿಟಿಷ್ ಸೈನ್ಯ ಯಾರ ನೇತೃತ್ವದಲ್ಲಿ ಕೋಲಾರ ಮತ್ತು ಹೊಸಕೋಟೆಗಳನ್ನು ವಶಪಡಿಸಿಕೊಂಡಿತು?
ಎ) ಕಾರ್ನ್‌ವಾಲೀಸನ ಬಿ) ಲಾರ್ಡ್ ವೆಲ್ಲೆಸ್ಲಿ
ಸಿ) ಲಾರ್ಡ್ ಮೌಂಟ್ ಬ್ಯಾಟನ್
ಡಿ) ಮೇಲಿನ ಯಾರಿಗೂ ಅಲ್ಲ
ಉತ್ತರ:– ಎ

13) ಮೈಸೂರು ರಾಜ್ಯಗೀತೆ “ಕಾಯೋಶ್ರೀ ಗೌರಿ”ಯನ್ನು ಯಾರು ರಚಿಸಿದವರು.?
ಎ) ಬಸಪ್ಪಶಾಸ್ತ್ರಿ ಬಿ) ಸಂಚಿ ಹೊನ್ನಮ್ಮ
ಸಿ) ಕುಮಾರವ್ಯಾಸ ಡಿ) ಹರಿಹರ
ಉತ್ತರ:– ಎ

14) ಯಾವ ಯುದ್ಧವು 1769ರಲ್ಲಿ ಆದ ಮದ್ರಾಸ್ ಒಪ್ಪಂದದೊಂದಿಗೆ ಕೊನೆಯಾಯಿತು.?
ಎ) ಎರಡನೆಯ ಆಂಗ್ಲೋ–ಮೈಸೂರು ಯುದ್ಧ
ಬಿ) ಮೂರನೇ ಆಂಗ್ಲೋ–ಮೈಸೂರು ಯುದ್ಧ
ಸಿ) ಮೊದಲನೇ ಆಂಗ್ಲೋ–ಮೈಸೂರು ಯುದ್ಧ
ಡಿ) ಯಾವುದೂ ಅಲ್ಲ ಉತ್ತರ:– ಸಿ

15) 1781ರಲ್ಲಿ ಪೋರ್ಟೋನೋವೆ ಎಂಬಲ್ಲಿ ನಡೆದ ಕದನದಲ್ಲಿ ಯಾರು ಪರಾಭವಗೊಂಡನು?
ಎ) ಟಿಪ್ಪು ಸುಲ್ತಾನ್ ಬಿ) ರಾಜ ಒಡೆಯರ್
ಸಿ) ರಾಮಸ್ವಾಮಿ ಮುದಲಿಯಾರ್ ಡಿ) ಹೈದರಾಲಿ
ಉತ್ತರ:– ಡಿ

16) ಟಿಪ್ಪು ತನ್ನ ಅರ್ಧ ರಾಜ್ಯವನ್ನು ಬಿಟ್ಟುಕೊಡುವುದು, ಮೂರು ಕೋಟಿ ರೂಪಾಯಿಗಳನ್ನು ಯುದ್ಧ ನಷ್ಟ ಭರ್ತಿಯಾಗಿ ಕೊಡುವುದು, ಯುದ್ಧ ನಷ್ಟ ಭರ್ತಿಗೆ ಗ್ಯಾರಂಟಿಯಾಗಿ ಟಿಪ್ಪು ಸುಲ್ತಾನ್ ತನ್ನ ಇಬ್ಬರು ಗಂಡು ಮಕ್ಕಳನ್ನು ಒತ್ತೆಯಾಗಿ ನೀಡುವುದು, ಮತ್ತು ಯುದ್ಧದ ಸಂದರ್ಭದಲ್ಲಿ ಸೆರೆ ಹಿಡಿಯಲಾಗಿದ್ದ ಸೈನಿಕರನ್ನು ಬಿಡುಗಡೆಗೊಳಿಸುವುದು.
ಈ ಷರತ್ತುಗಳು ಯಾವ ಒಪ್ಪಂದದಲ್ಲಿ ಇದ್ದವು?
ಎ) ಮದ್ರಾಸ್ ಒಪ್ಪಂದ ಬಿ) ಮಂಗಳೂರು ಒಪ್ಪಂದ
ಸಿ) ಶ್ರೀರಂಗಪಟ್ಟಣ ಒಪ್ಪಂದ ಡಿ) ಮೈಸೂರು ಒಪ್ಪಂದ
ಉತ್ತರ:– ಸಿ

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

PHYSICS

CURRENT ELECTRICITY

7. Define the temperature coefficient of resistance?
Ans:- The temperature coefficient of resistance is defined as the ratio of the change in resistance per degree rise of the temperature to the resistance at 0^0C.

8. How does the resistance vary due to the dimensions of the conductor?
Ans:- The resistance is directly proportional to the length of the conductor and it is inversely proportional to the area of the conductor.

$$R \propto \frac{l}{A}$$

9. Give the expression for the temperature coefficient of resistance?
Ans:-
Ans :– $R_t = R_0 + \alpha (R t_0)$
where, R_t – resistance at temperature t^0C, R_0 – resistance at 0^0C, α – constant for the given material and is the temperature coefficient of resistance of the material of the conductor.

10. Why are the substance like nichrome, magnanin etc., are used in making the standard resistance coils?
Ans:- Because they have high resistivity.

11. Give the expression for α .
Ans:- $$\alpha = \frac{R_2 - R_1}{R_1 t_2 - R_2 t_1}$$

12. What is a Rheostat?
Ans:- A Rheostat is the variable resistor. Using it the resistance can be varied from zero to maximum.

13. **What is a resistance box?**
Ans:- The resistance box consists of a standard resistance coils connected in series. Using which the resistance can be varied in steps.

14. What is volt – ampere?
Ans:- Volt – ampere is the unit of power.

15. What is kilowatt hour?
Ans:- The kilowatt hour is the total electrical energy consumed in one hour at the rate of 1000 joule per second. $1 kWhr = 3.6 \times 10^6 J$

16. Define e.m.f of a cell.
Ans:- The e.m.f of a cell is the work done by it in transferring unit quantity of charge once all round the circuit in which it is connected.

17. Write the colour code for a resistor of resistance 120 Ω
Ans:- The colour code for a resistor of resistance 120 Ω is brown – red – black.

18. **An electrical appliances is marked 220V, 550W. What is the resistance when in use?**

$$\text{Ans :– Power (P)} = V(I) = \frac{V^2}{R} \quad \left(\text{as } I = \frac{V}{R}\right)$$

$$\therefore R = \frac{V^2}{P} = \frac{220^2}{550} = 88$$

The Resistance when in use is 88Ω.

19. Nichrome has a resistivity of 1.2×10^{-6} Ohm – meter. What is the resistance of 10m wire of cross section 1 sq mm. What is the resistance when the wire is folded on itself and the free ends are joined together thus halving the length?
Ans :– Given, $\rho = 1.2 \times 10^{-6}$ ohm – meter,
length of the wire (L) = 10 m
Area of section (A) = 1 Sq.mm

$$R = \rho \frac{L}{A} = \frac{1.2 \times 10^{-6} \times 10}{1 \times 10^{-6}} = 12 \text{ ohms}$$

20. A piece of copper and another of germanium are cooled from room temperature to 100K. What will happen to their conductivities? Explain.
Ans:- Copper possesses positive temperature coefficient, whereas the germanium possesses negative temperature coefficient. Therefore, if they are cooled from the room temperature to the 100 K, the resistance of copper will decrease and that of germanium will increase. In other words, the conductivity of copper increases but that of germanium decreases.


21. Write a brief note on resistor and its colour codes.
Ans:- A resistor is a circuit element that offers resistance to the flow of the charges through it. They are used in the electrical and electronic devices to limit the strength of the current.

The commercial resistors are of two types –
a) wire – wound & b) composition resistors

Wire – wound resistors consists of a resistance wire made up of constantan, nichrome or manganin wound on a suitable base.

Composition resistors (or) carbon resistors consist of fine graphite powder mixed with suitable binding agent moulded into a cylinder.

The mould is enclosed in a plastic or ceramic jacket and is provided with wire leads for electrical connections.



These resistors are commercially available in various shapes and sizes and they are so small that it is not possible to print their values on them. To know their values a colour code in the form of circular colour bands is followed. In the colour band generally we see four colour bands on one end of the resistor. (Contd.....)





ಮೇಳದಲ್ಲಿ ಇರಿಸಲಾಗಿದ್ದ ಹಂಪಿಯ ಕಲ್ಲಿನ ರಥದ ಕಾರ್ಡ್‌ಬೋರ್ಡ್ ಪ್ರತಿಕೃತಿಯ ಅಂದವನ್ನು ಕಣ್ತುಂಬಿಕೊಳ್ಳುವಾಗ ಕ್ಯಾಮೆರಾದಲ್ಲಿ ಸೆರೆಯಾದವರು (ಎಡಚಿತ್ರ) ಹಾವು–ಏಣಿ ಆಟದಲ್ಲಿ ಏರುವವರು ಯಾರು, ಬೀಳುವವರು ಯಾರು.. –ಪ್ರಜಾವಾಣಿ ಚಿತ್ರ

ಕವಡೆ ಕುಲುಕಿ ಹಾಕುವಾಗ...

‘ಕೃಷ್ಣೆಯಿಂದ ಕಾವೇರಿವರೆಗೆ’ ಮೇಳದಲ್ಲಿ ದೇಸಿ ಆಟಗಳಿಗೆ ಮುಗಿಬಿದ್ದ ಚಿಣ್ಣರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಾಭಾರತದಲ್ಲಿ ಶಕುನಿ ಆಡುತ್ತಿದ್ದ ಆಟ ಇದು’. ‘ಅಲ್ಲ, ಅಲ್ಲ. ದ್ರೌಪದಿಯನ್ನು ಧರ್ಮರಾಯ ಪಣಕ್ಕಿಟ್ಟು ಸೋತ ಆಟ. ನೋಡು ಇದು ಡೈಸ್, ಇದನ್ನು ಹಾಕಿ ಆಟವಾಡಬೇಕು’. ‘ಅಯ್ಯೋ ಅದು ಡೈಸ್ ಅಲ್ಲ. ದಾಳ. ಇದು ಪಗಡೆ’.

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ), ನಮ್ಮ ನೆಲದ ಪಾರಂಪರಿಕ ಆಟಗಳನ್ನು ಆಡುವ ಇಂತಹ ಅವಕಾಶವೊಂದನ್ನು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ಭಾನುವಾರ ಕಲ್ಪಿಸಿಕೊಟ್ಟಿತ್ತು. ಬಿಐಸಿಯ ಅಂಗಳದಲ್ಲಿ ಶನಿವಾರ ಮತ್ತು ಭಾನುವಾರ ಆಯೋಜಿಸಿದ್ದ ‘ಕೃಷ್ಣೆಯಿಂದ ಕಾವೇರಿವರೆಗೆ...’ ಕಾರ್ಯಕ್ರಮದಲ್ಲಿ ‘ಕವಡೆ’ ಬಳಗವು ಇಂತಹ ದೇಸಿ ಆಟಗಳ ವೇದಿಕೆಗಳನ್ನು ಸಿದ್ಧಪಡಿಸಿತ್ತು.

ಅಲ್ಲಿ ಹಲವು ಆಟಗಳು ಇದ್ದರೂ, ಹೆಚ್ಚು ಜನರನ್ನು ಆಕರ್ಷಿಸಿದ್ದು ಪಗಡೆ. ನಾಲ್ವರು ವಿದ್ಯಾರ್ಥಿಗಳು ಕೂತು ಪಗಡೆ ಆಡುತ್ತಿದ್ದರೆ, ಅವರ ಗೆಳೆಯರು ಸುತ್ತ ನಿಂತು ಹುರಿದುಂಬಿಸುತ್ತಿದ್ದರು. ‘ಅಯ್ಯೋ ದಾಳ ಸರಿಯಾಗಿ ಹಾಕು’, ‘ಆರು ಬೀಳಬೇಕಿತ್ತು, ಆಗ ಅವನ ಕಾಯಿ ಖತಂ ಆಗುತ್ತಿತ್ತು’, ‘ಪಾಂಡವರು, ಕೌರವರೂ ಇಷ್ಟೊತ್ತು ಆಡಿರಲಿಲ್ಲ-ವೇನೋ, ಇವರು ಇನ್ನೂ ಆಡುತ್ತಲೇ ಇದ್ದಾರೆ’ ಎಂಬ ಮಾತುಗಳು ಪಗಡೆ ಅಂಗಳದಿಂದ ಕೇಳುತ್ತಲೇ ಇದ್ದವು.

ಪಕ್ಕದಲ್ಲೇ ಇದ್ದ ಪುಟ್ಟ ಮೇಜಿನ ಮೇಲೆ ಹಾವು–ಏಣಿ ಆಟದ ಮರದ ಬೋರ್ಡ್ ಇರಿಸಲಾಗಿತ್ತು. ಅಂಗಡಿಗಳಲ್ಲಿ ಸಿಗುವ, ಮೊಬೈಲ್ ಗೇಮ್‌ಗಳಲ್ಲಿ ಇರುವ ಚೌಕಾಕಾರದ ಬೋರ್ಡ್ ಅದಾಗಿರಲಿಲ್ಲ. ಬದಲಿಗೆ ವೃತ್ತಾಕಾರದ-ಲ್ಲಿ ರೂಪಿಸಲಾಗಿದ್ದ, ವಿಶಿಷ್ಟ ವಿನ್ಯಾಸದ ಹಾವು–ಏಣಿ ಆಟದ ಬೋರ್ಡ್ ಅದು. ಪಗಡೆ ಆಡಲು ಅವಕಾಶ ಸಿಗದ ಏಳೆಂಟು ಮಕ್ಕಳ ಗುಂಪು ಇಲ್ಲಿ ಸೇರಿ ಹಾವನ್ನು ತಪ್ಪಿಸಿ, ಏಣಿ ಏರಲು ತೊಡಗಿದವು.

ಇವೆರಡೇ ಆಟವೇ ಅಂದುಕೊಂಡರೆ ಅದು ಸುಳ್ಳು. ಪಕ್ಕದಲ್ಲೇ ಇನ್ನೊಂದು ಮೇಜಿನ ಮೇಲೆ ಎಂಟು ಮನೆಗಳ ಚೌಕಾಬಾರ. ಅಲ್ಲೂ ವಿದ್ಯಾರ್ಥಿಗಳ ಗುಂಪು. ಕವಡೆಗಳನ್ನು ಕುಲುಕಿ ಹಾಕಿದಾಗ ಬಂದ ಅಂಕಿಗಳ ಆಧಾರದಲ್ಲಿ ಮಕ್ಕಳು ಕಾಯಿ ನಡೆಸುತ್ತಿದ್ದರೆ, ಮೇಳಕ್ಕೆ ಬಂದಿದ್ದ ವಿದೇಶಿಯರು ಕುತೂಹಲಕ್ಕೆ ಸಾಕ್ಷಿಯಾಗಿದ್ದರು. ಅಲ್ಲೂ ಅಷ್ಟೆ, ‘ಚೌಕ ಬೀಳಬೇಕಿತ್ತು’, ‘ಒಂದು ಬೀಳುತ್ತಲೇ ಇಲ್ಲ. ಅದೊಂದು ಬಿದ್ದರೆ, ನನ್ನ ಎಲ್ಲ ಕಾಯಿಗಳೂ ಹಣ್ಣಾಗುತ್ತವೆ’ ಎಂಬ ಮಾತುಗಳು ಆಟಕ್ಕೆ ಮೆರುಗು ನೀಡಿದ್ದವು.

ಇನ್ನು ಅಳಗುಳಿ ಮಣೆ ಆಟದಲ್ಲಿ ಮಧ್ಯವಯಸ್ಸಿನ ಮಹಿಳೆಯರು, ಕಾಲೇಜು ವಿದ್ಯಾರ್ಥಿಗಳು ಪೈಪೋಟಿಗೆ ಇಳಿದಿದ್ದರು. ಸಂಜೆ ಮೇಳಕ್ಕೆ ತೆರೆ ಬೀಳುವವರೆಗೂ ದಾಳ, ಕವಡೆ, ಡೈಸು ಉರುಳುತ್ತಲೇ ಇದ್ದವು.

ಚಾಟ್ ಜಿಪಿಟಿ ಮತ್ತು ಸಹಜ ಬೆಳಕು

ವನ್ಯಜೀವಿ ಛಾಯಾಗ್ರಾಹಕ ಅರುಣ್ ಕುಮಾರ್ ಕೃಷ್ಣಯ್ಯ ಅವರ ವನ್ಯಜೀವಿ ಛಾಯಾಚಿತ್ರಗಳ ಪ್ರದರ್ಶನ ನಡೆಯುತ್ತಿತ್ತು. ಕುತೂಹಲದಿಂದ ಚಿತ್ರಗಳನ್ನು ನೋಡುತ್ತಿದ್ದ ಪುಟಾಣಿಯೊಬ್ಬ, ‘ಅಂಕಲ್ ಆ ಬರ್ಡ್‌ನ ಹಿಂದೆ ಲೈಟ್ ಇದೆಯಲ್ಲಾ, ಅದನ್ನು ಚಾಟ್ ಜಿಪಿಟಿಯಲ್ಲಿ ಮಾಡಿದ್ದಾ’ ಎಂದು ಪ್ರಶ್ನಿಸಿದ.

ಹುಡುಗ ಬೊಟ್ಟುಮಾಡಿ ತೋರಿಸಿದ್ದ ಸ್ಪೂನ್‌ಬಿಲ್ ಟೇಕಾಫ್‌ನ ಚಿತ್ರವನ್ನು ಅರುಣ್ ಅವರು ವಿವರಿಸುತ್ತಾ, ‘ಇಲ್ಲ ಪುಟ್ಟ, ಅದು ಆ ಪಕ್ಷಿಯ ರೆಕ್ಕೆಯ ಹಿಂದೆ ಬೆಳಕು ಸಹಜವಾಗಿ ಬರುವಂತೆ ತೆಗೆದ ಫೋಟೊ’ ಎಂದರು.

ಪುಟಾಣಿಯ ಜತೆಗಿದ್ದ ಹಿರಿಯರು ಕುತೂಹಲ ತೋರಿದಾಗ, ‘ವರ್ಷದ ಎಲ್ಲ ಕಾಲದಲ್ಲೂ ಅಂತಹ ಬೆಳಕು ಸಿಗುವುದಿಲ್ಲ. ಡಿಸೆಂಬರ್‌ನಲ್ಲಿ ಮಾತ್ರ ಈ ರೀತಿಯ ಬೆಳಕು ಇರುತ್ತದೆ. ಆದರೆ ಮೋಡ ಇರುವುದರಿಂದ ಸಾಮಾನ್ಯವಾಗಿ ಇಂತಹ ಫೋಟೊ ತೆಗೆಯಲಾಗುವುದಿಲ್ಲ’ ಎಂದು ವಿವರಿಸಿದರು.

ನೆರಳು–ಬೆಳಕನ್ನು ವಿಶಿಷ್ಟವಾಗಿ ಸಂಯೋಜಿಸಿ ವನ್ಯಜೀವಿಗಳ ಚಿತ್ರಗಳನ್ನು ತೆಗೆಯುವ ಸಾಹಸ ಹಾಗೂ ಸವಾಲುಗಳ ಬಗ್ಗೆ ನೋಡುಗರು ಮತ್ತು ಛಾಯಾಗ್ರಾಹಕರ ಮಧ್ಯೆ ಚರ್ಚೆ ನಡೆಯುತ್ತಲೇ ಇತ್ತು.

ಮಕ್ಕಳು ಇಲ್ಲದ್ದಕ್ಕೆ ಕೃತ್ಯ: ₹1.10 ಲಕ್ಷಕ್ಕೆ ಮಾರಾಟ

ಮಗು ಅಪಹರಣ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕು ವರ್ಷದ ಮಗುವನ್ನು ಅಪಹರಿಸಿದ್ದ ಪ್ರಕರಣ ಸಂಬಂಧ ಇಬ್ಬರು ಮಹಿಳೆಯರನ್ನು ಚಿಕ್ಕಜಾಲ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಯಶವಂತಪುರದ ಎಚ್‌ಎಂಟಿ ಕಾಲೊನಿ ನಿವಾಸಿ ಹೇಮಾವತಿ (43) ಮತ್ತು ಹುಣಸಮಾರನ-ಹಳ್ಳಿ ನಿವಾಸಿ ಖುರ್ಷಿದ್ ಅಲಿಯಾಸ್ ಕಮಲಾ (40) ಬಂಧಿತರು. ಮಗುವನ್ನು ಪೋಷಕರ ಮಡಿಲಿಗೆ ಸೇರಿಸಲಾಗಿದೆ.

ಆರೋಪಿಗಳು ಅಕ್ಟೋಬರ್ 25ರಂದು ಯಾದಗಿರಿಯವರಾದ ಅಮರಯ್ಯ ಅವರ ನಾಲ್ಕು ವರ್ಷದ ಮಗು ಸಿದ್ಧಾರ್ಥನನ್ನು ಅಪಹರಿಸಿದ್ದರು. ಆರೋಪಿಗಳ ಪೈಕಿ ಹೇಮಾವತಿಗೆ ಈಗಾಗಲೇ ಎರಡು ಮದುವೆಯಾಗಿದ್ದು, ಇಬ್ಬರು ಸಹ ದೂರವಾಗಿದ್ದಾರೆ. ಇತ್ತೀಚೆಗೆ ಇಬ್ಬರು ಮಕ್ಕಳಿರುವ ವ್ಯಕ್ತಿಯನ್ನು ಮೂರನೇ ಮದುವೆಯಾಗಿದ್ದರು. ಕೌಟುಂಬಿಕ ಕಾರಣಕ್ಕೆ ಆ ವ್ಯಕ್ತಿಯಿಂದಲೂ ದೂರವಾಗಿ ಹುಣಸಮಾರನಹಳ್ಳಿಯಲ್ಲಿರುವ ತನ್ನ ಮನೆಯನ್ನು ಮಾರಾಟ ಮಾಡಿ ಎಚ್‌ಎಂಟಿ ಲೇಔಟ್‌ನಲ್ಲಿ ಒಬ್ಬರೇ ವಾಸವಾಗಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಈ ಮಧ್ಯೆ ಮಕ್ಕಳಾಗದ್ದಕ್ಕೆ ಬೇಸರಗೊಂಡಿದ್ದರಿಂದ ಹೇಮಾವತಿ, ಆಗಾಗ್ಗೆ ಹುಣಸಮಾರನ-ಹಳ್ಳಿಗೆ ಹೋಗುತ್ತಿದ್ದರು. ಆಗ ಖುರ್ಷಿದ್ ಅವರ ಪರಿಚಯವಾಗಿದ್ದು, ‘ಯಾವುದಾದರೂ ಮಗು ಇದ್ದರೆ ಕೊಡಿಸಿ, ದತ್ತು ಪಡೆದುಕೊಳ್ಳುತ್ತೇನೆ’ ಎಂದಿದ್ದರು. ಆಗ ಖುರ್ಷಿದ್, ಅಕ್ಟೋಬರ್ 25ರಂದು ಮನೆ ಮುಂದೆ ಆಟ ವಾಡುತ್ತಿದ್ದ ಅಮರಯ್ಯ ಅವರ ಮಗುವಿಗೆ ಚಾಕೊಲೇಟ್ ತೋರಿಸಿ ಕರೆದೊಯ್ದು ಹೇಮಾವತಿಗೆ ಕೊಟ್ಟಿದ್ದರು. ಈ ದೃಶ್ಯ ಸ್ಥಳೀಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು ಎಂದು ಪೊಲೀಸರು ಹೇಳಿದರು. ಸ್ಥಳೀಯ ಯುವಕನೊಬ್ಬ ಖುರ್ಷಿದ್ ಬಗ್ಗೆ ಮಾಹಿತಿ ನೀಡಿದ್ದ. ಕೂಡಲೇ ಆಕೆಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡಿ-ದ್ದಾಳೆ ಎಂದು ಪೊಲೀಸರು ಹೇಳಿದರು.

ಆರೋಪಿಯು ಮಗುಕೊಡಲು ಹೇಮಾವತಿಯಿಂದ ₹ 1.10 ಲಕ್ಷ ನಗದು ಪಡೆದು ಕೊಂಡಿದ್ದರು. ‘ಮಗುವಿನ ಪೋಷಕರಿಗೆ ಈ ಹಣವನ್ನು ನೀಡುತ್ತೇನೆ. ಮಗು ಕೊಂಡೊಯ್ಯುವುದ ರಿಂದ ತೊಂದರೆ ಇಲ್ಲ ಎಂದು ಹೇಳಿ ಕಳುಹಿಸಿದ್ದರು’ ಎಂದು ಪೊಲೀಸರು ಹೇಳಿದರು.

ಈ ಸಂಬಂಧ ಚಿಕ್ಕಜಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಾಧ ಸುದ್ದಿ

ಮದುವೆಗೆ ಒತ್ತಾಯಿಸಿದ ಮಹಿಳೆಗೆ ಚಾಕು ಇರಿತ

ಬೆಂಗಳೂರು: ಮದುವೆಯಾಗುವಂತೆ ಒತ್ತಾಯಿಸಿದ ಮಹಿಳೆಯನ್ನು ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ಕೆ.ಜಿ.ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಮೃತ ಮಹಿಳೆಯನ್ನು ರೇಣುಕಾ ಎಂದು ಗುರುತಿಸಲಾಗಿದ್ದು, ಈಕೆಯ ಪ್ರಿಯಕರ ಅಂಬೇಡ್ಕರ್ ಅಲಿಯಾಸ್ ಕುಟ್ಟಿ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

ರೇಣುಕಾ ಅವರು ವರ್ಷದ ಹಿಂದೆ ಪತಿಯನ್ನು ತೊರೆದು, ಕೆ.ಜಿ.ಹಳ್ಳಿಯ ಪಿಳ್ಳಣ್ಣ ಗಾರ್ಡನ್‌ನಲ್ಲಿ ಪ್ರತ್ಯೇಕವಾಗಿ ಮಗನ ಜತೆ ವಾಸವಿದ್ದರು. ಈ ವೇಳೆ ಹಣಕಾಸು ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಅಂಬೇಡ್ಕರ್ ಅವರ ಪರಿಚಯವಾಗಿ, ಅದು ಪ್ರೇಮಕ್ಕೆ ತಿರುಗಿದೆ. ಇಬ್ಬರ ನಡುವೆ ಸಲುಗೆ ಬೆಳೆದಿದ್ದು, ಬಳಿಕ ಮದುವೆಯಾಗುವಂತೆ ಒತ್ತಾಯಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಕೆಲಸ ಮುಗಿಸಿಕೊಂಡು ಮನೆಗೆ ಹೋಗುತ್ತಿದ್ದ ರೇಣುಕಾ ಅವರನ್ನು ಮಾತನಾಡುವ ಸಲುವಾಗಿ ಕರೆಯಿಸಿಕೊಂಡ ಕುಟ್ಟಿ, ಪಿಳ್ಳಣ್ಣ ಗಾರ್ಡನ್‌ನ ಸರ್ಕಾರಿ ಶಾಲೆ ಬಳಿ ಕರೆದುಕೊಂಡು ಹೋಗಿ ಜಗಳವಾಡಿದ್ದಾರೆ. ಈ ವೇಳೆ ಚಾಕುವಿನಿಂದ ಅವರಿಗೆ ಆರು ಬಾರಿ ಇರಿದು ಕೊಲೆ ಮಾಡಿ, ಪರಾರಿಯಾಗಿದ್ದಾರೆ. ಇದನ್ನು ಕಂಡ ಸಾರ್ವಜನಿಕರು ಆರೋಪಿ ಹಿಡಿಯಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ.

ಕೆ.ಜಿ.ಹಳ್ಳಿ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ ರೇಣುಕಾ ಅವರನ್ನು ಆಸ್ಪತ್ರೆಗೆ ದಾಖಲಿಸಿದರು. ಆದರೆ ಚಿಕಿತ್ಸೆಗೆ ಸ್ಪಂದಿಸಲಿಲ್ಲ ಮೃತಳ ಸಂಬಂಧಿಕರ ದೂರಿನ ಮೇರೆಗೆ ಆರೋಪಿಯನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ. ಕೆ.ಜಿ.ಹಳ್ಳಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ, ತನಿಖೆ ಕೈಗೊಂಡಿದ್ದಾರೆ.

ರಾಜ್ಯೋತ್ಸವ ಸಂಭ್ರಮ



ವಕೀಲರ ಗಾರ್ಡನ್ ಸಿಟಿಯ ಕನ್ನಡ ಸಂಘ ಭಾನುವಾರ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವದಲ್ಲಿ ಚಲನಚಿತ್ರ ನಟರಾದ ರಮೇಶ್ ಅರವಿಂದ, ರಮೇಶ್ ಭಟ್, ಕಾದಂಬರಿಕಾರ ದ್ವಾರನಕುಂಟೆ ಪಾತಣ್ಣ, ವಾಸು ದೀಕ್ಷಿತ್, ಗಾಯಕಿ ಬಿಂದು ಮಾಲಿನಿ, ಕಲಾವಿದ ಮೋಹನ್ ಕುಮಾರ್ ಉಪಸ್ಥಿತರಿದ್ದರು



ಗಂಗಾನಗರದಲ್ಲಿ ಶನಿವಾರ ನಡೆದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ವೈ.ಎ. ನಾರಾಯಣಸ್ವಾಮಿ ಧ್ವಜಾರೋಹಣ ನೆರವೇರಿಸಿದರು. ಕಾಂಗ್ರೆಸ್ ಮುಖಂಡ ವಿಜಯ್ ಕುಮಾರ್, ಬಿಜೆಪಿ ಮುಖಂಡರಾದ ರವೀಂದ್ರ ಕುಮಾರ್, ಶ್ರೀನಿವಾಸರಾಜು, ಕೇಶವಮೂರ್ತಿ, ಮಾಯಣ್ಣ, ವೇದ್ ಕುಮಾರ್, ಮಧು ಸೂದನ್ ರೆಡ್ಡಿ, ಹೇಮಂತ್ ಕುಮಾರ್, ವಸಂತ್, ಜೆಡಿಎಸ್ ಮುಖಂಡರಾದ ವಿ.ಎಂ. ರಾಜು ಭಾಗವಹಿಸಿದ್ದರು



ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶನಿವಾರ ನಡೆದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಉಪ ಪ್ರಾಂಶುಪಾಲ ಬಿ. ನರಸಿಂಹಮೂರ್ತಿ, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು

ಸಿವಿಲ್ ಕಾಮಗಾರಿ: ಬಿಲ್ ಪಾವತಿಗೆ ನೂತನ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು:ಸಿವಿಲ್ ಕಾಮಗಾರಿಗಳ ಪ್ರಗತಿಗೆ ಸಂಬಂಧಿಸಿದ ವಿವರಗಳನ್ನು ‘ಕಾಂಟ್ರ್ಯಾಕ್ಟ್ ಮ್ಯಾನೇಜ್‌ಮೆಂಟ್ ಮಾಡ್ಯೂಲ್ – ಸಿಎಂಎಂ’ನಲ್ಲಿ ಅಪ್‌ಲೋಡ್ ಮಾಡಿದರಷ್ಟೇ ಗುತ್ತಿಗೆ-ದಾರರಿಗೆ ಹಣ ಪಾವತಿ ಮಾಡುವ ವ್ಯವಸ್ಥೆಯನ್ನು ರಾಜ್ಯ ಸರ್ಕಾರ ಜಾರಿಗೆ ತಂದಿದೆ.

ಬಿಲ್ ಪಾವತಿಯನ್ನು ಪಾರದರ್ಶಕ ವಾಗಿಸಲು ಈ ವ್ಯವಸ್ಥೆ ತರಲಾಗಿದೆ ಎಂದು ಸರ್ಕಾರ ಹೇಳುತ್ತದೆಯಾದರೂ, ಗುತ್ತಿಗೆದಾರರು ಹೊಸ ಸ್ವರೂಪದ ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಸಿಎಂಎಂ ವ್ಯವಸ್ಥೆ 2024ರ ಆಗಸ್ಟ್‌ನಿಂದಲೇ ಜಾರಿಯಲ್ಲಿದೆ. ಈವರೆಗೂ ಅದರಲ್ಲಿ ಗುತ್ತಿಗೆ ಒಪ್ಪಂದ ಪತ್ರವನ್ನು ಅಪ್‌ಲೋಡ್ ಮಾಡಿದರೆ ಸಾಕಿತ್ತು. ಆದರೆ, ಈಗ ಅದರಲ್ಲಿ ಸಿವಿಲ್ ಕಾಮಗಾರಿಗಳ ಪ್ರಗತಿ ವಿವರಗಳ ಜತೆಗೆ ಬಿಲ್ ಅಪ್‌ಲೋಡ್ ಮಾಡಬೇಕು ಎಂದು ಹಣಕಾಸು ಇಲಾಖೆಯು ಈಚೆಗೆ ಆದೇಶಿಸಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಸೂಚನೆ ಮೇರೆಗೆ ಈ ಆದೇಶ ಹೊರಡಿಸಲಾಗಿದೆ.

ರಾಜ್ಯದಲ್ಲಿ 36,709 ಕಾಮಗಾರಿ ಗಳನ್ನು ಟೆಂಡರ್ ಮೂಲಕ ಗುತ್ತಿಗೆ ನೀಡಿದ್ದರೂ, ಸಿಎಂಎಂನಲ್ಲಿ 505 ಗುತ್ತಿಗೆಗಳ ವಿವರಗಳಷ್ಟೇ ಇದ್ದವು. ಸೆಪ್ಟೆಂಬರ್‌ನಲ್ಲಿ ನಡೆದ ಕೆಡಿಪಿ ಸಭೆಯ ವೇಳೆ ಈ ಅಂಶವನ್ನು ಗಮನಿಸಿದ ಮುಖ್ಯ ಕಾರ್ಯದರ್ಶಿಯು, ಕಾಮಗಾರಿಗಳ ಪ್ರಗತಿಯ ವಿವರಗಳನ್ನೂ ಅಪ್‌ಲೋಡ್ ಮಾಡಬೇಕು ಎಂದು ಸೂಚಿಸಿದರು ಎಂದು ಮೂಲಗಳು ತಿಳಿಸಿವೆ.

‘ಸಿಎಂಎಂನಲ್ಲಿ ವಿವರಗಳನ್ನು ಅಪ್‌ಲೋಡ್ ಮಾಡುವುದರಿಂದ ಪಾರದರ್ಶಕತೆ ಬರಲಿದೆ. ಅಧಿಕಾರಿ–ಸಿಬ್ಬಂದಿ ಬಿಲ್‌ಗಳನ್ನು ತಡೆಹಿಡಿಯುವುದು, ಅಕ್ರಮವಾಗಿ ಬಿಲ್ ಪ್ರಕ್ರಿಯೆ ನಡೆಸುವುದಕ್ಕೆ ತಡೆ ಬೀಳಲಿದೆ’ ಎನ್ನುತ್ತಾರೆ ಹಣಕಾಸು ಕಾರ್ಯದರ್ಶಿ (ಬಜಟ್ ಮತ್ತು ಸಂಪನ್ಮೂಲ) ಪಿ.ಸಿ. ಜಾಫರ್.

ಆದರೆ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ (ಕೆಎಸ್‌ಸಿಎ) ಪ್ರತಿನಿಧಿಯೊಬ್ಬರು, ‘ಸರ್ಕಾರವು ನಮಗೆ ಬಿಲ್ ಪಾವತಿ ಮಾಡುವುದೇ 2–3 ವರ್ಷಕ್ಕೆ ಒಮ್ಮೆ. ನಾವು ಕಾಮಗಾರಿಗಳ ಪ್ರಗತಿ ವಿವರಗಳನ್ನು ಅಪ್‌ಲೋಡ್ ಮಾಡುತ್ತಿದ್ದಂತೆಯೇ ಜಿಎಸ್‌ಟಿ ಪಾವತಿಸ ಬೇಕಾಗುತ್ತದೆ. ಬಿಲ್ ಹಣ ಬಿಡುಗಡೆಯಾಗುವುದು 2–3 ವರ್ಷಗಳಾದರೂ, ಮೊದಲೇ ಜಿಎಸ್‌ಟಿ ಪಾವತಿಸ ಬೇಕಾಗುವುದರಿಂದ ನಮಗೆ ವಿಪರೀತ ಹೊರೆಯಾಗಲಿದೆ’ ಎಂದು ಕಳವಳ ವ್ಯಕ್ತಪಡಿಸಿದರು.

ದೇವಾಲಯದ ನಲ್ಲಿಯಲ್ಲಿ ಬಂತು ಹೊಗೆ!

ರಾಮನಗರ: ನಗರದ ಬಲಮುರಿ ಗಣೇಶ ದೇವಾಲಯದ ಬಳಿ ಅಳವಡಿಸಿರುವ ನೀರಿನ ನಲ್ಲಿಯಲ್ಲಿ ಭಾನುವಾರ ಸಂಜೆ ನೀರಿನ ಬದಲು ಹೊಗೆ ಬಂದಿದ್ದು, ಜನರನ್ನು ಆತಂಕಗೊಳಿಸಿದೆ. ಕೂಡಲೇ ಸ್ಥಳೀಯರು ಬೆಸ್ಕಾಂ ಮತ್ತು ಜಲಮಂಡಳಿ ಅಧಿಕಾರಿಗಳಿಗೆ ಕರೆ ಮಾಡಿ ವಿಷಯ ತಿಳಿಸಿದರು. ಸ್ಥಳಕ್ಕೆ ಬಂದ ಅಧಿಕಾರಿಗಳು ನಲ್ಲಿ ಇದ್ದ ಭಾಗದ ವಿದ್ಯುತ್ ಕಡಿತಗೊಳಿಸಿ ಪರಿಶೀಲಿಸಿದರು.

ಬೆಸ್ಕಾಂ ಎಇ ಪ್ರಭಾಕರ್ , ಜಲಮಂಡಳಿ ಅಧಿಕಾರಿ ಶಿವಕುಮಾರ್ ನಗರಸಭೆ ಸದಸ್ಯರಾದ ಮಂಜುಳಾ, ಮಹಾಲಕ್ಷ್ಮಿ ಹಾಗೂ ಸೋಮಶೇಖರ್ ಸಹ ಸ್ಥಳಕ್ಕೆ ಭೇಟಿ ನೀಡಿದರು. ನಗರದ ಮುಖ್ಯರಸ್ತೆಯಲ್ಲಿ ನೀರಿನ ಪೈಪ್‌ಲೈನ್ ಜೊತೆಗೆ ವಿದ್ಯುತ್ ಮಾರ್ಗ ಸಹ ಹಾದು ಹೋಗಿದೆ. ಎರಡೂ ಸಂಪರ್ಕಗಳಲ್ಲಿ ಏನಾದರೂ ವ್ಯತ್ಯಾಸವಾಗಿ ಹೊಗೆ ಬಂದಿರುವ ಸಾಧ್ಯತೆ ಇದೆ. ಈ ಕುರಿತು ಪರಿಶೀಲನೆ ನಡೆಸಿ, ಘಟನೆ ಮರುಕಳಿಸದಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ಹೇಳಿದರು.

ಒಳ ಮೀಸಲು: ತಂತ್ರಾಂಶವೇ ಇಲ್ಲ

ಪರಿಶಿಷ್ಟ ಜಾತಿ ‘ಪ್ರವರ್ಗವಾರು’ ಜಾತಿ ಪ್ರಮಾಣಪತ್ರ ವಿತರಣೆ ಕಗ್ಗಂಟು

• ರಾಜೇಶ್ ರೈ ಚಟ್ಲ

ಬೆಂಗಳೂರು: ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳನ್ನು ಪ್ರವರ್ಗ ಎ, ಪ್ರವರ್ಗ ಬಿ, ಪ್ರವರ್ಗ ಸಿ ಎಂದು ವರ್ಗೀಕರಿಸಿ, ಒಳ ಮೀಸಲಾತಿ ಹಂಚಿಕೆ ಮಾಡಿ ಆದೇಶ ಹೊರಡಿಸಿದ್ದರೂ ಅದಕ್ಕೆ ಪೂರಕವಾಗಿ ಜಾತಿ ಪ್ರಮಾಣ ಪತ್ರ ವಿತರಿಸಲು ಅಗತ್ಯವಾದ ‘ತಂತ್ರಾಂಶ’ವನ್ನು ರಾಜ್ಯ ಸರ್ಕಾರ ಇನ್ನೂ ಅಭಿವೃದ್ಧಿ-ಪಡಿಸಿಲ್ಲ. ಹೀಗಾಗಿ, ಸರ್ಕಾರಿ ಹುದ್ದೆಗಳ ಭರ್ತಿಗೆ ನೇಮಕಾತಿ ಪ್ರಾಧಿಕಾರಗಳು ಅಧಿಸೂಚನೆ ಹೊರಡಿಸಲು ತೊಡಕಾಗಿದೆ.



ಪರಿಶಿಷ್ಟ ಜಾತಿಯಲ್ಲಿ ಪ್ರವರ್ಗವಾರು ಜಾತಿ ಪ್ರಮಾಣಪತ್ರ ವಿತರಿಸಲು ತಂತ್ರಾಂಶ ಇನ್ನೂ ಸಿದ್ಧವಾಗಿಲ್ಲ. ಈ ವಿಷಯವನ್ನು ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೇನೆ

ಎಚ್.ಆಂಜನೇಯ, ಮಾಜಿ ಸಚಿವ




ಎಂ.ಡಿ ಕೋರ್ಸ್‌ಗಳ ಸೀಟು ಹಂಚಿಕೆಗೆ ಇದೇ 6ರಿಂದ ಕೌನ್ಸೆಲಿಂಗ್ ಆರಂಭವಾಗಲಿದೆ. ಪ್ರವರ್ಗವಾರು ಜಾತಿ ಪ್ರಮಾಣಪತ್ರ ಸಲ್ಲಿಸದಿದ್ದರೆ ಎಸ್‌ಸಿ ಸೀಟು ಹಂಚಿಕೆ ಸಾಧ್ಯ ಇಲ್ಲ

ಎಚ್.ಪ್ರಸನ್ನ, ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಇದೇ 6ರಿಂದ ವೈದ್ಯಕೀಯ ಸ್ನಾತಕೋತ್ತರ (ಎಂಡಿ) ಕೋರ್ಸ್‌ಗಳ ಸೀಟು ಹಂಚಿಕೆಗೆ ಕೌನ್ಸೆಲಿಂಗ್ ಆರಂಭಿಸಲಿದೆ. ಪ್ರವರ್ಗವಾರು ಜಾತಿ ಪ್ರಮಾಣಪತ್ರ ವಿತರಣೆ ಆರಂಭವಾಗದೇ ಇದ್ದರೆ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಎಂಡಿ ಸೀಟು ಹಂಚಿಕೆಗೆ ಸಮಸ್ಯೆ ಆಗಲಿದೆ.

ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸಲು, ಜಾತಿ ಪಟ್ಟಿಯಲ್ಲಿರುವ 101 ಜಾತಿಗಳ ಪೈಕಿ 98 ಜಾತಿಗಳನ್ನು ಪ್ರವರ್ಗ ಎ (16 ಜಾತಿಗಳು), ಪ್ರವರ್ಗ ಬಿ (19 ಜಾತಿಗಳು), ಪ್ರವರ್ಗ ಸಿ (63 ಜಾತಿಗಳು) ಎಂದು ವರ್ಗೀಕರಿಸಿ ಆಗಸ್ಟ್ 25ರಂದೇ ಸರ್ಕಾರ ಆದೇಶ ಹೊರಡಿಸಿದೆ. ಆದಿ ಆಂಧ್ರ, ಆದಿ ದ್ರಾವಿಡ, ಆದಿ ಕರ್ನಾಟಕ ಸಮುದಾಯದವರು ತಮ್ಮ ಮೂಲ ಜಾತಿ ನಮೂದಿಸಿ ‘ಪ್ರವರ್ಗ ಎ’ ಅಥವಾ ‘ಪ್ರವರ್ಗ ಬಿ’ ಅಡಿ ಮೀಸಲಾತಿ ಸೌಲಭ್ಯ ಪಡೆಯಬಹುದು. ಮೂಲ ಜಾತಿ ನಮೂದಿಸದವರು ಪ್ರಮಾಣಪತ್ರ ಸಲ್ಲಿಸಿ ‘ಪ್ರವರ್ಗ ಎ’ ಅಥವಾ ‘ಪ್ರವರ್ಗ ಬಿ’ ಅಡಿ ಜಾತಿ ಪ್ರಮಾಣಪತ್ರ ಪಡೆಯಬಹುದು ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ಈ ಆದೇಶಕ್ಕೆ ಪೂರಕವಾಗಿ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಒಳ ಮೀಸಲಾತಿ ಅನ್ವಯಿಸಲು, ಜಾತಿ ಪ್ರಮಾಣಪತ್ರ ನೀಡಲು ಕ್ರಮ ವಹಿಸುವಂತೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೂಚಿಸಿ ಸಮಾಜ ಕಲ್ಯಾಣ ಇಲಾಖೆ ಅ.8ರಂದು ಸುತ್ತೋಲೆ ಹೊರಡಿಸಿದೆ. ಒಳ ಮೀಸಲು ಸೌಲಭ್ಯ ಪಡೆಯಲು ಪರಿಶಿಷ್ಟ ಜಾತಿಯವರು ಸಂಬಂಧಪಟ್ಟ ಪ್ರವರ್ಗ ನಮೂದಿಸಿ ಹೊಸತಾಗಿ ಜಾತಿ ಪ್ರಮಾಣಪತ್ರ ಪಡೆಯಬೇಕು. ಜಾತಿಗಳನ್ನು ಪ್ರವರ್ಗ ಎ, ಬಿ, ಸಿ ಎಂದು ವರ್ಗೀಕರಿಸಿರುವಂತೆ, ಆಯಾ ಜಾತಿಗಳಿಗೆ ಸಂಬಂಧಿಸಿದ ಪ್ರವರ್ಗವನ್ನು ಅಟಲ್‌ಜೀ ಜನಸ್ನೇಹಿ ಕೇಂದ್ರದ ತಂತ್ರಾಂಶದಲ್ಲಿ ಅಳವಡಿಸಬೇಕಿದೆ. ಆದರೆ, ಈ ಆದೇಶ ಹೊರಡಿಸಿ ಒಂದು



ತಿಂಗಳಾಗುತ್ತಾ ಬಂದರೂ ತಂತ್ರಾಂಶದಲ್ಲಿ ಅಳವಡಿಸುವ ಕೆಲಸ ಆಗಿಲ್ಲ. ಹೀಗಾಗಿ ಪ್ರವರ್ಗವಾರು ಜಾತಿ ಪ್ರಮಾಣ ಪತ್ರ ನೀಡುವ ಪ್ರಕ್ರಿಯೆ ಆರಂಭ ಆಗಿಲ್ಲ.

ಎಕೆ, ಎಡಿ, ಎಎ ಗೊಂದಲ: ಒಳ ಮೀಸಲಾತಿ ಕಲ್ಪಿಸಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಆಯೋಗ ನಡೆಸಿದ ಸಮೀಕ್ಷೆಯ ಸಂದರ್ಭದಲ್ಲಿ ಮೂಲ ಜಾತಿಯನ್ನು ತಿಳಿಸದೆ ಆದಿ ಕರ್ನಾಟಕ (ಎಕೆ), ಆದಿ ದ್ರಾವಿಡ (ಎಡಿ), ಆದಿ ಆಂಧ್ರ (ಎಎ) ಎಂದು ನಮೂದಿಸಿರುವ ಈ ಮೂರು ಸಮುದಾಯಗಳು ಪ್ರವರ್ಗ ಎ ಅಥವಾ ಪ್ರವರ್ಗ ಬಿ ಅಡಿ ಮೀಸಲಾತಿ ಪಡೆಯಬಹುದು ಎಂದು ಸರ್ಕಾರ ಹೇಳಿದೆ. ಆಯೋಗ ನಡೆಸಿದ ಸಮೀಕ್ಷೆಯಲ್ಲಿ ಎಕೆ (1,47,199), ಎಡಿ (3,20,641), ಎಎ (7,114) ಎಂದು ಒಟ್ಟು 4,74,954 ಕುಟುಂಬಗಳು ಬರೆಸಿವೆ. ಮೂಲ ಜಾತಿ ತಿಳಿಸದ ಈ ಸಮುದಾಯದವರು ಪ್ರವರ್ಗ ಎ ಅಥವಾ ಪ್ರವರ್ಗ ಬಿ ಆಯ್ಕೆ ಮಾಡಿ ಪ್ರಮಾಣಪತ್ರದ ಜೊತೆ ಜಾತಿ ಪ್ರಮಾಣಪತ್ರಕ್ಕೆ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಲಾಗಿದೆ. ಆದರೆ, ಮೂಲ ಜಾತಿ ತಿಳಿಸದವರಿಗೆ ಅವರು ಸಲ್ಲಿಸುವ ಪ್ರಮಾಣಪತ್ರದಲ್ಲಿ ಘೋಷಿಸಿರುವ ಪ್ರವರ್ಗವನ್ನು ನಮೂದಿಸಿ ಪರಿಶಿಷ್ಟ ಜಾತಿ ಪ್ರಮಾಣಪತ್ರ ನೀಡುವ ವಿಚಾರವು ಗೊಂದಲಕ್ಕೆ ಕಾರಣವಾಗಿದೆ.

ಒಳ ಮೀಸಲಾತಿ ಆದೇಶ ಪರಿಷ್ಕರಿಸಲು ಆಗ್ರಹ: ಒಳ ಮೀಸಲಾತಿ ಅಳವಡಿಸಿಕೊಂಡು ವಿವಿಧ ಇಲಾಖೆಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಪ್ರಕ್ರಿಯೆ ಆರಂಭಿಸುವಂತೆ ಡಿಪಿಎಆರ್ ಆದೇಶ ಹೊರಡಿಸಿದೆ. ಆದರೆ, ಮುಂಬಡ್ತಿಯಲ್ಲಿಯೂ ಒಳ ಮೀಸಲಾತಿ ಅನ್ವಯಿಸಬೇಕೆಂಬ ಅಂಶ ಈ ಆದೇಶದಲ್ಲಿ ಇಲ್ಲ. ಹೀಗಾಗಿ, ಮುಂಬಡ್ತಿಗೂ ಒಳ ಮೀಸಲಾತಿ ಅನ್ವಯಿಸುವಂತೆ ರೋಸ್ಟರ್ ಬಿಂದು ಗುರುತಿಸಿ ಆದೇಶ ಹೊರಡಿಸಬೇಕು. ಅಲ್ಲದೆ, ಸರ್ಕಾರದ ಅಧೀನದಲ್ಲಿರುವ ಎಲ್ಲ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಹಾಗೂ ಕೆಇಎ ವತಿಯಿಂದ ತಾಂತ್ರಿಕ ಮತ್ತು ವೈದ್ಯಕೀಯ ವೃತ್ತಿಪರ ಕೋರ್ಸ್‌ಗಳ ಸೀಟು ಹಂಚಿಕೆಯಲ್ಲಿಯೂ ಒಳ ಮೀಸಲಾತಿ ಅನ್ವಯವಾಗುವಂತೆ ಪರಿಷ್ಕೃತ ಆದೇಶ ಹೊರಡಿಸಬೇಕು ಎಂದು ದಲಿತ ಸಂಘಟನೆಗಳು ಆಗ್ರಹಿಸಿವೆ.

ಪ್ರವರ್ಗವಾರು ಜಾತಿ ಪ್ರಮಾಣಪತ್ರ ವಿತರಣೆ ವಿಳಂಬಕ್ಕೆ ಸಂಬಂಧಿಸಿದಂತೆ ವಿವರಣೆ ಪಡೆಯಲು ಸಮಾಜ ಕಲ್ಯಾಣ ಇಲಾಖೆಯ ಆಯುಕ್ತ ರಾಕೇಶ್ ಕುಮಾರ್ ಅವರಿಗೆ ಕರೆ ಮಾಡಿದರೂ ಅವರು ಸಂಪರ್ಕಕ್ಕೆ ಸಿಗಲಿಲ್ಲ.

ಎಂ.ಡಿ ಸೀಟು ಹಂಚಿಕೆ ಕಗ್ಗಂಟು

ಸಂವಿಧಾನದ ಪರಿಚ್ಛೇದ 15 ಮತ್ತು 16ರ ಅನ್ವಯ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಬೇಕಿದೆ. ರಾಷ್ಟ್ರೀಯ ವೈದ್ಯಕೀಯ ಆಯೋಗದ ನಿರ್ದೇಶನದಂತೆ ವೈದ್ಯಕೀಯ ಸ್ನಾತಕೋತ್ತರ (ಎಂ.ಡಿ) ಸೀಟುಗಳ ಹಂಚಿಕೆಗೆ ಇದೇ 6ರಿಂದ ಕೌನ್ಸೆಲಿಂಗ್ ಆರಂಭಿಸಬೇಕಿದೆ. ರಾಜ್ಯದಲ್ಲಿ 2,400 ಎಂ.ಡಿ ಸೀಟುಗಳಿವೆ. ಈ ಪೈಕಿ ಶೇ 17ರಷ್ಟು ಪರಿಶಿಷ್ಟ ಜಾತಿಯ ಅಭ್ಯ-ರ್ಥಿಗಳಿಗೆ ಮೀಸಲಾಗಿದೆ. ಅವುಗಳನ್ನು ಪ್ರವರ್ಗವಾರು ವರ್ಗೀಕರಿಸಿ ಹಂಚಿಕೆ ಮಾಡಬೇಕಿದೆ. ವೈದ್ಯಕೀಯ ಶಿಕ್ಷಣ ಇಲಾಖೆ ಪ್ರವರ್ಗ ಎ, ಪ್ರವರ್ಗ ಬಿ, ಪ್ರವರ್ಗ ಸಿ ಎಂದು ವರ್ಗೀಕರಿಸಿ ಸೀಟ್ ಮ್ಯಾಟ್ರಿಕ್ಸ್ ನೀಡಿದರೂ ಪ್ರವರ್ಗವಾರು ಜಾತಿ ಪ್ರಮಾಣಪತ್ರವನ್ನು (ಆರ್‌ಡಿ ಸಂಖ್ಯೆ ಸಹಿತ) ಅಭ್ಯರ್ಥಿಗಳು ಸಲ್ಲಿಸದೇ ಇದ್ದರೆ ಸೀಟು ಹಂಚಿಕೆ ಮಾಡಲು ಸಾಧ್ಯ ಇಲ್ಲ. ವೈದ್ಯಕೀಯ ಶಿಕ್ಷಣ ಇಲಾಖೆ ನೀಡಿದ ಸೀಟ್ ಮ್ಯಾಟ್ರಿಕ್ಸ್‌ಗೆ ಅನುಗುಣವಾಗಿ ಕೌನ್ಸೆಲಿಂಗ್ ನಡೆಸಬಹುದು. ಆದರೆ, ದಾಖಲೆಗಳ ಪರಿಶೀಲನೆಗೆ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ಪ್ರವರ್ಗವಾರು ಜಾತಿ ಪ್ರಮಾಣಪತ್ರವ-ನ್ನು ನೀಡಲೇಬೇಕು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಅವರು ತಿಳಿಸಿದರು.

ಇಲಾಖೆಗಳ ನಡುವೆ ಸಮನ್ವಯ ಕೊರತೆ

‘ಒಳ ಮೀಸಲಾತಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಮಾಜ ಕಲ್ಯಾಣ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಮತ್ತು ಕಂದಾಯ ಇಲಾಖೆಯ ನಡುವೆ ಸಮನ್ವಯ ಇಲ್ಲದೇ ಇರುವುದರಿಂದ ಪ್ರವರ್ಗವಾರು ಜಾತಿ ಪ್ರಮಾಣಪತ್ರ ವಿತರಣೆ ವಿಳಂಬ-ವಾಗುತ್ತಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಸಚಿವ ಸಂಪುಟದ ನಿರ್ಣಯದಂತೆ ಒಳ ಮೀಸಲಾತಿ ಜಾರಿಗೊಳಿಸಿ, ಸಮಾಜ ಕಲ್ಯಾಣ ಇಲಾಖೆ ಆದೇಶ ಹೊರಡಿಸಿದೆ. ‘ಪರಿಷ್ಕೃತ ಮೀಸಲಾತಿ ರೋಸ್ಟರ್’ ಅನ್ನು ಈಗಾಗಲೇ ಪ್ರಕಟಿಸಿರುವ ಡಿಪಿಎಆರ್, ವಿವಿಧ ಇಲಾಖೆಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಪ್ರಕ್ರಿಯೆ ಆರಂಭಿಸುವಂತೆ ನೇಮಕಾತಿ ಪ್ರಾಧಿಕಾರಗಳಿಗೆ ಸೂಚನೆ ನೀಡಿದೆ. ಆಯಾ ಜಾತಿಗಳಿಗೆ ಸಂಬಂಧಿಸಿದ ಪ್ರವರ್ಗವನ್ನು ಅಟಲ್‌ಜೀ ಜನಸ್ನೇಹಿ ಕೇಂದ್ರದ ತಂತ್ರಾಂಶದಲ್ಲಿ ಅಳವಡಿಸಿಕೊಂಡು ಜಾತಿ ಪ್ರಮಾಣಪತ್ರದಲ್ಲಿ ನಮೂದಿಸಲು ಕ್ರಮ ತೆಗೆದುಕೊಳ್ಳುವಂತೆ ಕಂದಾಯ ಇಲಾಖೆಗೆ ಸಮಾಜ ಕಲ್ಯಾಣ ಇಲಾಖೆ ಸೂಚಿಸಿದೆ. ಆದರೆ, ಕಂದಾಯ ಇಲಾಖೆಯ ಮೂಲಕ ತಂತ್ರಾಂಶ ಅಭಿವೃದ್ಧಿ ಆಗಿಲ್ಲ’ ಎಂದೂ ವಿವರಿಸಿದರು.

ಪ್ರತಿಭಾ ಪುರಸ್ಕಾರ

-ಪ್ರಜಾವಾಣಿ ಚಿತ್ರ



ದೇವಾಂಗ ಸಂಘ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಸಂಘದ ಅಧ್ಯಕ್ಷ ಜಿ. ರಮೇಶ್, ಉಪಾಧ್ಯಕ್ಷೆ ಎಚ್. ಪಾರ್ವತಿ, ರಾಜ್ಯಸಭಾ ಸದಸ್ಯರಾದ ಕೆ. ನಾರಾಯಣ್, ಸಂಸದ ಪಿ.ಸಿ. ಮೋಹನ್, ಹೈಕೋರ್ಟ್ ನ್ಯಾಯಮೂರ್ತಿ ರಂಗಸ್ವಾಮಿ ನಟರಾಜ್, ಹಿರಿಯ ವಕೀಲ ಪಿ. ಪ್ರಸನ್ನ ಕುಮಾರ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉಪಸ್ಥಿತರಿದ್ದರು

ಮೆಟ್ರೊ: ಬೇರ್ಪಟ್ಟ ಮಗು ತಾಯಿ ಮಡಿಲಿಗೆ

ಬೆಂಗಳೂರು: ಮೆಜೆಸ್ಟಿಕ್‌ನಲ್ಲಿರುವ ನಮ್ಮ ಮೆಟ್ರೊ ನಿಲ್ದಾಣದಲ್ಲಿ ತಾಯಿಯಿಂದ ಬೇರ್ಪಟ್ಟ ಆರು ವರ್ಷದ ಬಾಲಕಿಯನ್ನು ಮೆಟ್ರೊ ಸಿಬ್ಬಂದಿ ಸುರಕ್ಷಿತವಾಗಿ ತಾಯಿಯ ಕೈಗೆ ಒಪ್ಪಿಸಿದ್ದಾರೆ.

ಶನಿವಾರ ಮಧ್ಯಾಹ್ನ 2.30ರ ಹೊತ್ತಿಗೆ ಬಾಲಕಿಯೊಂದಿಗೆ ತಾಯಿ ಮೆಜೆಸ್ಟಿಕ್ ನಿಲ್ದಾಣಕ್ಕೆ ಬಂದಿದ್ದರು. ಆದರೆ, ಮಗು ನಿಲ್ದಾಣದಲ್ಲಿಯೇ ಇತ್ತು, ತಾಯಿ ಮೆಟ್ರೊ ರೈಲಲ್ಲಿ ಮುಂದಕ್ಕೆ ಚಲಿಸಿದ್ದರು. ಪ್ರಯಾಣಿಕರೊಬ್ಬರು ಬಾಲಕಿಯನ್ನು ಭದ್ರತಾ ಸಿಬ್ಬಂದಿಗೆ ಹಸ್ತಾಂತರಿಸಿದ್ದರು. ಮೆಜೆಸ್ಟಿಕ್‌ನಿಂದ ಎಲ್ಲ ನಿಲ್ದಾಣಗಳ ನಿಯಂತ್ರಕರಿಗೆ ಮಾಹಿತಿ ರವಾನಿಸಲಾಯಿತು.

ಆ ನಂತರ ಮೆಜೆಸ್ಟಿಕ್ ನಿಲ್ದಾಣಕ್ಕೆ ವಾಪಸ್ ಬಂದ ತಾಯಿಗೆ ಮಗುವನ್ನು ಹಸ್ತಾಂತರಿಸಲಾಯಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಅಪಘಾತ: ಮಾಜಿ ಕ್ರಿಕೆಟಿಗ ರಾಜೇಶ್ ಸಾವು

ಅಗರ್ತಲಾ (ಪಿಟಿಐ): ತ್ರಿಪುರ ರಣಜಿ ಕ್ರಿಕೆಟ್ ತಂಡದ ಮಾಜಿ ಆಟಗಾರ ರಾಜೇಶ್ ಬಾನಿಕ್ (40) ಅವರು ಅಪಘಾತದಲ್ಲಿ ಸಾವಿಗೀಡಾಗಿದ್ದಾರೆ.



19 ವರ್ಷದೊಳಗಿ-ನವರ ವಿಶ್ವಕಪ್‌ನಲ್ಲಿ ಭಾರತ ತಂಡದಲ್ಲಿ ಆಡಿದ್ದ ಅವರು ತಂದೆ, ತಾಯಿ ಹಾಗೂ ಸಹೋದರನನ್ನು ಅಗಲಿದ್ದಾರೆ. ಆಲ್‌ರೌಂಡ್ ಆಟಗಾರ ಬಾನಿಕ್ ಅವರು 2002–03ನೇ ಋತುವಿನಲ್ಲಿ ತ್ರಿಪುರ ರಣಜಿ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ನಿವೃತ್ತಿಯ ನಂತರ 16 ವರ್ಷದೊಳಗಿನವರ ರಾಜ್ಯ ತಂಡದ ಆಯ್ಕೆಗಾರನಾಗಿ ಕಾರ್ಯನಿ-ರ್ವಹಿಸಿದ್ದರು. ಅವರು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 42 ಪಂದ್ಯಗಳಿಂದ 1,469 ರನ್ ಗಳಿಸಿದ್ದು, 2 ವಿಕೆಟ್ ಪಡೆದಿದ್ದರು.

ಚೆಸ್: ರೋನಕ್, ಕಾರ್ತಿಕ್ ಮುನ್ನಡೆ

ಪಣಜಿ (ಪಿಟಿಐ): ಭಾರತದ ಅನುಭವಿ ಆಟಗಾರ ಸೂರ್ಯಶೇಖರ್ ಗಂಗೂಲಿ ಹಾಗೂ ಗ್ರ್ಯಾಂಡ್‌ಮಾಸ್ಟರ್‌ಗಳಾದ ರೋನಕ್ ಸಾಧ್ವಾನಿ ಮತ್ತು ಕಾರ್ತಿಕ್ ವೆಂಕಟರಾಮನ್ ಅವರು ಭಾನುವಾರ ಗೆಲುವಿನೊಂದಿಗೆ ಫಿಡೆ ಚೆಸ್ ವಿಶ್ವಕಪ್ ಟೂರ್ನಿಯಲ್ಲಿ ಎರಡನೇ ಸುತ್ತಿಗೆ ಮುನ್ನಡೆದರು. ಐಎಂ ಅರಣ್ಯಕ್ ಘೋಷ್ ಅವರು ಪೋಲೆಂಡ್‌ನ ಮ್ಯಾಥ್ಯೂಸ್ ಬಾರ್ಟೆಲ್ ಅವರಿಗೆ ಆಘಾತ ನೀಡಿದರು.



ಸೂರ್ಯಶೇಖರ್ ಅವರು ಅಜರ್‌ಬೈಜಾನ್‌ನ ಅಹಮದ್‌ರ್ಘಾದಾ ಅವರನ್ನು ಸುಲಭವಾಗಿ ಮಣಿಸಿದರೆ, ರೋನಕ್ ಅವರು ಡೇನಿಯರ್ ಬಾರಿಷ್ (ದಕ್ಷಿಣ ಆಫ್ರಿಕಾ) ಎದುರು ನಿರಾಯಾಸ ಗೆಲುವು ಸಾಧಿಸಿದರು. ಇನ್ನೊಂದು ಪಂದ್ಯದಲ್ಲಿ ಕಾರ್ತಿಕ್ ಅವರು ಕ್ಯೂಬಾದ ರಾಬರ್ಟೊ ಗಾರ್ಸಿಯಾ ಪಂಟೋಜಾ ವಿರುದ್ಧ ಜಯಿಸಿದರು.

ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದ ಮಹಿಳಾ ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್ ಅವರು 0–2ರಿಂದ ಗ್ರೀಸ್‌ನ ಆಟಗಾರ್ತಿ ಸ್ಟಾಮಟಿಸ್ ಕೌರ್ಕೊಲಸ್ ಅರ್ಡಿಟಿಸ್ ಎದುರು ಸೋತು ಅಭಿಯಾನ ಮುಗಿಸಿದರು.

ಭುವನೇಶ್ವರದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಚೆಸ್ ಸಮ್ಮೇಳನ

ಬೆಂಗಳೂರು: ಫಿಡೆ ಸಾಮಾಜಿಕ ಮತ್ತು ಶೈಕ್ಷಣಿಕ ಚೆಸ್ ಅಂತರರಾಷ್ಟ್ರೀಯ ಸಮ್ಮೇಳನವು ಭುವನೇಶ್ವರದಲ್ಲಿ 2026ರ ಜನವರಿಯಲ್ಲಿ ನಡೆಯಲಿದೆ. ಫಿಡೆ ಮತ್ತು ಅಖಿಲ ಭಾರತ ಚೆಸ್ ಫೆಡರೇಷನ್ (ಎಐಸಿಎಫ್) ಜಂಟಿಯಾಗಿ ಆಯೋಜಿಸುತ್ತಿರುವ ಈ ಸಮ್ಮೇಳನಕ್ಕೆ ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ (ಕೆಐಐಟಿ) ಆತಿಥ್ಯ ವಹಿಸಲಿದೆ.

ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಚೆಸ್ ಆಟದಲ್ಲಿ ಪಾಲ್ಗೊಳ್ಳುವುದನ್ನು ಪ್ರೋತ್ಸಾಹಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ವಿದ್ಯಾರ್ಥಿಗಳಲ್ಲಿ ಚೆಸ್ ಆಡುವ ಅಭ್ಯಾಸ ಬೆಳೆಸಲು ಹಾಗೂ ಜ್ಞಾನಾರ್ಜನೆಯನ್ನು ಹೆಚ್ಚಿಸಲು ಈ ಸಮ್ಮೇಳನವು ಪೂರಕವಾಗಿದೆ ಎಂದು ಫಿಡೆ ಅಧ್ಯಕ್ಷ ಅರ್ಕಾಡಿ ದ್ವೊರಕೊವಿಚ್ ಹೇಳಿದ್ದಾರೆ.

ಸ್ನೂಕರ್: ಪಂಕಜ್ ನಾಯಕತ್ವ



ಬೆಂಗಳೂರು: ದಿಗ್ಗಜ ಆಟಗಾರ ಪಂಕಜ್ ಅಡ್ವಾಣಿ ಅವರು ದೋಹಾದಲ್ಲಿ ಸೋಮವಾರ ಆರಂಭವಾಗಲಿರುವ ಐಬಿಎಸ್‌ಎಫ್ ವಿಶ್ವ ಸ್ನೂಕರ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ಪುರುಷರ ಸ್ಪರ್ಧೆಗಳು ಎರಡು ಹಂತಗಳಲ್ಲಿ (ನವೆಂಬರ್ 3ರಿಂದ 6ರ ವರೆಗೆ ಹಾಗೂ 7ರಿಂದ 13ರ ವರೆಗೆ) ನಡೆಯಲಿವೆ. ಉನ್ನತ ಶ್ರೇಯಾಂಕದ ಆಟಗಾರರು ನೇರವಾಗಿ ಎರಡನೇ ಹಂತಕ್ಕೆ ಪ್ರವೇಶ ಪಡೆಯಲಿದ್ದಾರೆ. ಮಹಿಳಾ ಸ್ಪರ್ಧೆಗಳು ಶುಕ್ರವಾರ ಆರಂಭವಾಗಲಿವೆ.

ಭಾರತ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಫೆಡರೇಷನ್ ಪ್ರಕಟಿಸಿರುವ ಪುರುಷರ ತಂಡ: ಪಂಕಜ್ ಅಡ್ವಾಣಿ, ಬ್ರಿಜೇಶ್ ದಮಾನಿ, ಪಾರಸ್ ಗುಪ್ತಾ, ಧ್ವಜ್ ಹರಿಯಾ, ಮಲ್ಕೀತ್ ಸಿಂಗ್, ಮೊಹಮ್ಮದ್ ಹುಸೇನ್. ಮಹಿಳೆಯರು: ಅನುಪಮಾ ರಾಮಚಂದ್ರನ್, ಅಮೀ ಕಮಾನಿ, ಕೀರ್ತನಾ ಪಾಂಡ್ಯನ್, ನತಾಶಾ ಚೇತನ್, ಅನನ್ಯಾ ಪಟೇಲ್, ಶ್ರುತಿ ಎಲ್.

‘ಚೇನಂಡ ಹಾಕಿ’ ಟೂರ್ನಿಗೆ ₹1 ಕೋಟಿ ಅನುದಾನ: ಸಿ.ಎಂ

ಬೆಂಗಳೂರು: ‘ಚೇನಂಡ ಕಪ್’ ಕೊಡವ ಕೌಟುಂಬಿಕ ಹಾಕಿ ಉತ್ಸವಕ್ಕೆ ರಾಜ್ಯ ಸರ್ಕಾರದಿಂದ ಒಂದು ಕೋಟಿ ರೂಪಾಯಿ ಅನುದಾನ ನೀಡಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಭಾನುವಾರ ಗೃಹ ಕಚೇರಿ ಕೃಷ್ಣಾದಲ್ಲಿ ‘ಚೇನಂಡ ಹಾಕಿ ಟೂರ್ನಿ’ಯ ಲೋಗೊ ಬಿಡುಗಡೆ ಮಾಡಿ, ‘ಕೊಡವರು ಅಂದ್ರೆ ಹಾಕಿ. ಹಾಕಿ ಅಂದ್ರೆ ಕೊಡವರು’ ಎಂದು ಬಣ್ಣಿಸಿದರು.

2026ರ ಮೇ ತಿಂಗಳಲ್ಲಿ ಈ ಟೂರ್ನಿ ನಡೆಯಲಿದೆ.

‘ಟೂರ್ನಿ ವೀಕ್ಷಿಸಲು ನಾನೂ ಬರುತ್ತೇನೆ’ ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

‘ಕೊಡಗಿನ ಹಾಕಿಪಟುಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಿಂಚಿದ್ದಾರೆ. ದೇಶಕ್ಕೆ ಕೀರ್ತಿ ತಂದಿದ್ದಾರೆ. ಏಷ್ಯಾ ಗೇಮ್ಸ್ ಸೇರಿ ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶಕ್ಕೆ ಹೆಮ್ಮೆ ಮತ್ತು ಘನತೆ ತಂದುಕೊಟ್ಟಿದ್ದಾರೆ’ ಎಂದು ಶ್ಲಾಘಿಸಿದರು.

ರೈಲಿನಿಂದ ಬಿದ್ದು ಆರ್ಚರಿ ಕ್ರೀಡಾಪಟು ಸಾವು

ಕೋಟಾ (ಪಿಟಿಐ): ಮಹಾರಾಷ್ಟ್ರದ ಯುವ ಆರ್ಚರಿ ಪಟು ಅರ್ಜುನ್ ಸೋನವಣೆ ಅವರು ರಾಜಸ್ಥಾನದ ಕೋಟಾ ಜಂಕ್ಷನ್‌ನಲ್ಲಿ ಚಲಿಸುವ ಪ್ಯಾಸೆಂಜರ್ ರೈಲಿನಿಂದ ಬಿದ್ದು ಮೃತಪಟ್ಟಿದ್ದಾರೆ.

ನಾಸಿಕ್‌ನ 20 ವರ್ಷದ ಅರ್ಜುನ್, ರಾಷ್ಟ್ರಮಟ್ಟದ ಆರ್ಚರಿ ಪಟುವಾಗಿದ್ದಾರೆ. ಪಂಜಾಬ್‌ನ ಭಟಿಂಡಾದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ ತನ್ನ ತಂಡದ ಸದಸ್ಯರು, ಕೋಚ್ ಜೊತೆ ತವರಿಗೆ ವಾಪಸಾಗುತ್ತಿದ್ದಾಗ ಈ ಘಟನೆ ನಡೆದಿದೆ.

ಚಿಟಿಕೆ ಸುದ್ದಿ

ಸಾವಿನ ಸಂಖ್ಯೆ ನಾಲ್ಕಕ್ಕೆ ಏರಿಕೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಮಂಡ್ಯಕೊಪ್ಪಲು ಸಮೀಪ ರಾಮಸ್ವಾಮಿ ನಾಲೆಯಲ್ಲಿ ಶನಿವಾರ ಸಂಜೆ ನೀರಿನಲ್ಲಿ ಕೊಚ್ಚಿ ಹೋಗಿದ್ದ ಮೈಸೂರಿನ ಮೂವರು ವಿದ್ಯಾರ್ಥಿಗಳ ಮೃತದೇಹಗಳು ಭಾನುವಾರ ಪತ್ತೆಯಾಗಿವೆ. ಸಾವಿನ ಸಂಖ್ಯೆ ನಾಲ್ಕಕ್ಕೇರಿದೆ.

ಮೈಸೂರಿನ ಉದಯಗಿರಿಯ ಹಾಜಿರ ನಿಶ್ವಾನ್ ಅರೇಬಿಕ್ ಶಾಲೆಯ ತರ್ಬೀನ್ (13) ಮತ್ತು ಅಫ್ರೀನ್ (13) ಅವರ ಮೃತದೇಹಗಳು 20 ಕಿ.ಮೀ. ದೂರದಲ್ಲಿ ಅಂದರೆ, ತಿ.ನರಸೀಪುರ ತಾಲ್ಲೂಕಿನ ಸೋಸಲೆ ಬಳಿ ಸಿಕ್ಕಿವೆ. ಉಮೆ ಹನಿ (14) ಮೃತದೇಹ ಘಟನಾ ಸ್ಥಳದಿಂದ ಒಂದು ಕಿ.ಮೀ. ಅಂತರದಲ್ಲಿ ಪತ್ತೆಯಾಗಿದೆ.

ಆಟವಾಡಲು ನೀರಿಗಿಳಿದಿದ್ದ ಆರು ವಿದ್ಯಾರ್ಥಿಗಳ ಪೈಕಿ, ಸ್ಥಳೀಯರು ರಕ್ಷಿಸಿದ್ದ ಮತ್ತೊಬ್ಬ ವಿದ್ಯಾರ್ಥಿನಿ ಆಯೇಷಾ (13) ಮೈಸೂರಿನ ಆಸ್ಪತ್ರೆಯಲ್ಲಿ ಶನಿವಾರ ಮೃತಪಟ್ಟಿದ್ದರು. ಆಲ್ಬಿಯಾ ಮತ್ತು ಮಹಮದ್ ಗೌಸ್ ಎಂಬ ವಿದ್ಯಾರ್ಥಿಗಳನ್ನು ಸ್ಥಳೀಯರು ರಕ್ಷಿಸಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

‘ರೈಲ್ವೆ ಲೇನ್ ವಿದ್ಯುದೀಕರಣ ಶೇ 97ರಷ್ಟು ಪೂರ್ಣ’



ವಿ.ಸೋಮಣ್ಣ

ಬೀರೂರು (ಚಿಕ್ಕಮಗಳೂರು ಜಿಲ್ಲೆ): ‘ರಾಜ್ಯದಲ್ಲಿ ರೈಲ್ವೆ ಲೈನ್‌ಗಳ ವಿದ್ಯುದೀಕರಣ ಕಾಮಗಾರಿ ಶೇ 97ರಷ್ಟು ಪೂರ್ಣಗೊಂಡಿದ್ದು, ವರ್ಷಾಂತ್ಯಕ್ಕೆ ಶೇ 100 ತಲುಪುವ ಗುರಿ ಇದೆ’ ಎಂದು ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು. ಬೀರೂರು ಪಟ್ಟಣದ ರೈಲು ನಿಲ್ದಾಣದಲ್ಲಿ ಭಾನುವಾರ ನಿಲ್ದಾಣ ಪರಿಶೀಲನೆ ನಡೆಸಿ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ‘ರೈಲು ಪ್ರಯಾಣಿಕರ ಸುರಕ್ಷತೆಗಾಗಿ ವಿನೂತನ ತಂತ್ರಜ್ಞಾನದ ‘ರೈಲ್ವೆ ಕವಚ’ ಅಳವಡಿಸಲಾ ಗುತ್ತಿದ್ದು, ಇದರಿಂದ ಒಂದೇ ಲೈನ್‌ನಲ್ಲಿ 2 ರೈಲುಗಳು ಸಂಚರಿಸಿ ಸಂಭವಿಸಬಹುದಾದ ಅಪಘಾತ ತಪ್ಪಿಸಲು ಸಾಧ್ಯವಾಗಲಿದೆ. 50 ಅಡಿ ದೂರದಲ್ಲಿ ಚಲಿಸುತ್ತಿದ್ದ ರೈಲುಗಳು ಕೂಡ ನಿಲ್ಲುವ ತಂತ್ರಜ್ಞಾನವಿದೆ. ₹3,500 ಕೋಟಿ ವೆಚ್ಚದಲ್ಲಿ 1,700 ಕಿ.ಮೀ ಟ್ರ್ಯಾಕ್ ಗಳಲ್ಲಿ ‘ಕವಚ’ ಅಳವಡಿಸಲಾಗುವುದು’ ಎಂದು ತಿಳಿಸಿದರು.

ಗಾಯಾಳುಗಳು ಚೇತರಿಕೆ

ಬೆಳಗಾವಿ: ಇಲ್ಲಿ ಶನಿವಾರ ರಾಜ್ಯೋತ್ಸವ ಮೆರವಣಿಗೆಗೆ ನುಗ್ಗಿದ ದುಷ್ಕರ್ಮಿಗಳ ಗುಂಪೊಂದು ಚಾಕು–ಜಂಬೆಗಳಿಂದ ಇರಿದ ಕಾರಣ ಗಾಯಗೊಂಡಿದ್ದ ಐವರು ಚೇತರಿಸಿಕೊಂಡಿದ್ದು, ಭಾನುವಾರ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

‘ವೈಯಕ್ತಿಕ ಕಾರಣಕ್ಕೆ ಗಲಾಟೆ ನಡೆದಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಆರೋಪಿಗಳ ಪತ್ತೆಗೆ ಕ್ರಮ ವಹಿಸಿದ್ದೇವೆ’ ಎಂದು ಎಪಿಎಂಸಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಇಬ್ಬರ ಬಂಧನ: ಬೆಳಗಾವಿಯಲ್ಲಿ ನಡೆದ ರಾಜ್ಯೋತ್ಸವ ಮೆರವಣಿಗೆಯಲ್ಲಿ ಕುಣಿಯುತ್ತಿದ್ದ ತಾಲ್ಲೂಕಿನ ಕೆ.ಕೆ.ಕೊಪ್ಪದ ಆದಿತ್ಯ ಬೆಂಡಿಗೇರಿ ಅವರನ್ನು ಅಡ್ಡಗಟ್ಟಿ, ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ ಆರೋಪದಡಿ ಇಬ್ಬರನ್ನು ಮಾರ್ಕೆಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆ.ಕೆ.ಕೊಪ್ಪದ ಕಿರಣ ಕುರುಬರ, ಅರುಣ ಕುರುಬರ ಬಂಧಿತರು. ಈ ಹಿಂದೆ ಆಗಿದ್ದ ತಂಟೆಯ ಹಳೇ ದ್ವೇಷಕ್ಕಾಗಿ ಇಬ್ಬರು ಆರೋಪಿಗಳು ಈ ಕೃತ್ಯ ಎಸಗಿದ್ದಾರೆ. ಅವಾಚ್ಯ ಶಬ್ದ ಬಳಸಿ ನಿಂದಿಸಿ ಜೀವ ಬೆದರಿಕೆ ಹಾಕಿದ್ದಾರೆ. ಕೃತ್ಯಕ್ಕೆ ಬಳಸಿದ ಚಾಕು ವಶಕ್ಕೆ ಪಡೆದಿದ್ದಾಗಿ ಪೊಲೀಸರು ತಿಳಿಸಿದ್ದಾರೆ.

‘ಆಡಳಿತದ ಮೇಲೆ ಪರಿಣಾಮ’

ಸುಬ್ರಹ್ಮಣ್ಯ: ‘ಕಳೆದ ತಿಂಗಳಿನಿಂದ ಆಡಳಿತ ಪಕ್ಷದಲ್ಲಿ ಮುಖ್ಯಮಂತ್ರಿ ಕುರ್ಚಿಗಾಗಿ ಬಹಿರಂಗವಾಗಿ ಪೈಪೋಟಿ ನಡೆಯುತ್ತಿದೆ. ಡಿ.ಕೆ.ಶಿವಕುಮಾರ್ ಸೇರಿ ಏಳೆಂಟು ಹಿರಿಯ ಸಚಿವರು ಮುಖ್ಯ-ಮಂತ್ರಿಯಾಗಲು ಆಸೆ ವ್ಯಕ್ತಪಡಿಸುತ್ತಿದ್ದಾರೆ. ಇದರ ಪರಿಣಾಮ ಆಡಳಿತದ ಮೇಲೂ ಬೀಳುತ್ತಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಭಾನುವಾರ ಇಲ್ಲಿನ ಕುಕ್ಕೆ ಸುಬ್ರಹ್ಮಣ್ಯ ದೇವಾಲಯಕ್ಕೆ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನವೆಂಬರ್ ಕ್ರಾಂತಿ ಎಂದು ಬಿಜೆಪಿಯವರು ಹೇಳಿಲ್ಲ. ಆಡಳಿತ ಪಕ್ಷದ ಸಚಿವರೇ ಹೇಳಿದ್ದು’ ಎಂದ ಅವರು ‘ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯದೆ ಜನರು ಪರದಾಡುತ್ತಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಜನರ ಪಾಲಿಗೆ ಶಾಪವಾಗಿದೆ’ ಎಂದರು.

‘ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಗೆ ಪೂರ್ವ ತಯಾರಿ ಪ್ರಾರಂಭವಾಗಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಯ ತಯಾರಿಯನ್ನು ಸದ್ಯದಲ್ಲೇ ಆರಂಭಿಸಲಿದ್ದೇವೆ. ಮುಂದಿನ ಚುನಾವಣೆ ಎದುರಿಸಲು ಬಿಜೆಪಿ ಸಿದ್ಧವಾಗಿದೆ’ ಎಂದರು.

‘ಸಂಘರ್ಷ’ ತಡೆಗೆ ಎಐ ತಂತ್ರಜ್ಞಾನ

‘ಮಾನವ–ವನ್ಯಜೀವಿ ಸಂಘರ್ಷ’ ಸಭೆಯಲ್ಲಿ ಸಚಿವ ಈಶ್ವರ ಖಂಡ್ರೆ


ಪ್ರಜಾವಾಣಿ ವಾರ್ತೆ

ಚಾಮರಾಜನಗರ: ‘ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಬಂಡೀಪುರ ಅರಣ್ಯದೊಳಗೆ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಆಧಾರಿತ ಡ್ರೋನ್ ಕ್ಯಾಮೆರಾ ಅಳವಡಿಸ ಲಾಗುವುದು. ಕಾಡುಪ್ರಾಣಿಗಳು ನಾಡಿನತ್ತ ಬಾರದಂತೆ ಕ್ರಮ ಕೈಗೊಳ್ಳಲು ಕಮಾಂಡಿಂಗ್ ಸೆಂಟರ್ ತೆರೆಯಲಾಗುವುದು’ ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದರು.

ಮೈಸೂರು ಜಿಲ್ಲೆ ಸರಗೂರು ವ್ಯಾಪ್ತಿಯಲ್ಲಿ ಹುಲಿ ದಾಳಿ ಪ್ರಕರಣಗಳು ನಡೆಯುತ್ತಿರುವ ಕಾರಣದಿಂದ, ಸೂಕ್ತ ಪರಿಹಾರ ಕೈಗೊಳ್ಳುವಂತೆ ಜನರಿಂದ ಒತ್ತಾಯ ಕೇಳಿಬಂದಿತ್ತು. ಜನಾಕ್ರೋಶಕ್ಕೆ ಮಣಿದ ಸಚಿವರು ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಭಾನುವಾರ ರೈತ ಮುಖಂಡರೊಂದಿಗೆ ಸಭೆ ನಡೆಸಿದರು.



ಅರಣ್ಯದೊಳಗಿನ ಹಾಡಿಗಳಿಗೆ ಸೌಕರ್ಯ ಒದಗಿಸಲು ಕೇಂದ್ರ ಹವಾಮಾನ ಬದಲಾವಣೆ, ಅರಣ್ಯ ಸಚಿವಾಲಯ ಹಾಗೂ ಎನ್‌ಟಿಸಿಎಗೆ ಪ್ರಸ್ತಾವ ಸಲ್ಲಿಸಲಾಗಿದೆ
ಈಶ್ವರ ಖಂಡ್ರೆ, ಅರಣ್ಯ ಸಚಿವ



‘ಸಂಘರ್ಷ ತಡೆಗೆ ಸ್ಥಳೀಯರು ಹಾಗೂ ರೈತರ ಸಲಹೆ ಸಹಕಾರ ಪಡೆಯಲಾಗುವುದು. ಸಂಘರ್ಷ ತಡೆ ಸಮಿತಿಗೂ ಸ್ಥಳೀಯರನ್ನು ಸೇರಿಸಿಕೊಳ್ಳಲಾಗುವುದು’ ಎಂದು ಸಚಿವರು ಭರವಸೆ ನೀಡಿದರು.

‘ಅರಣ್ಯದೊಳಗೆ ಅಕ್ರಮ ರೆಸಾರ್ಟ್, ಹೋಂಸ್ಟೇಗಳ ನಿರ್ಮಾಣ, ಗಣಿಗಾರಿಕೆಗೆ ನಮ್ಮ ಸರ್ಕಾರದ ಅವಧಿಯಲ್ಲಿ ಅನುಮತಿ ನೀಡಿಲ್ಲ. ಅಕ್ರಮಗಳ ಕುರಿತು ದೂರುಗಳು ಬಂದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

‘1972ರಲ್ಲಿ ಬಂಡೀಪುರದಲ್ಲಿ 12 ಹುಲಿಗಳಿದ್ದವು. ಪ್ರಸ್ತುತ 153ಕ್ಕೂ ಹೆಚ್ಚು ಹುಲಿಗಳಿವೆ. ಹುಲಿಗಳ ಸಂಖ್ಯೆಗೆ ಅನುಗುಣವಾಗಿ ಅರಣ್ಯ ವಿಸ್ತರಣೆ ಆಗದ ಪರಿಣಾಮ ಮಾನವ– ಪ್ರಾಣಿ ಸಂಘರ್ಷ ಹೆಚ್ಚಾಗಿದೆ. ರಾಜ್ಯದಲ್ಲಿ ವನ್ಯಜೀವಿ ದಾಳಿಯಿಂದ ಪ್ರತಿ ವರ್ಷ ಸರಾಸರಿ 55ರಿಂದ 60 ಮಂದಿ ಸಾವಿಗೀಡಾಗುತ್ತಿದ್ದಾರೆ. 2021-22ರಲ್ಲಿ 41, 2022-23ರಲ್ಲಿ 57, 2023-24ರಲ್ಲಿ 65, 2024-25ರಲ್ಲಿ 46, 2025-26ರಲ್ಲಿ 30 ಮಂದಿ ಮೃತಪಟ್ಟಿದ್ದಾರೆ’ ಎಂದು ಮಾಹಿತಿ ನೀಡಿದರು.

‘ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಯಲ್ಲಿ ಮಾನವ–ಕಾಡುಪ್ರಾಣಿ ಸಂಘರ್ಷ ನಿಯಂತ್ರಣಕ್ಕೆ ಬಾರದಿದ್ದರೆ ಸಫಾರಿ ನಿರ್ಬಂಧಕ್ಕೆ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎಚ್.ಎಂ. ಗಣೇಶ್‌ಪ್ರಸಾದ್, ಎ.ಆರ್. ಕೃಷ್ಣಮೂರ್ತಿ, ಅನಿಲ್ ಚಿಕ್ಕಮಾದು, ದರ್ಶನ್ ಧ್ರುವನಾರಾಯಣ್, ಅಧಿಕಾರಿಗಳು ಪಾಲ್ಗೊಂಡಿದ್ದರು.

‘ಮತ್ತಷ್ಟು ಟ್ರಿಪ್ ಕಡಿತಕ್ಕೆ ಕ್ರಮ’

‘ಬಂಡೀಪುರದಲ್ಲಿ ಸಫಾರಿ ಟ್ರಿಪ್ ಕಡಿತ ಮಾಡಲಾಗಿದೆ. ಅಗತ್ಯ ಬಿದ್ದರೆ ಮತ್ತಷ್ಟು ಕಡಿತಕ್ಕೆ ಕ್ರಮ ಕೈಗೊಳ್ಳಲಾಗುವುದು’ ಎಂದು ಸಚಿವ ಈಶ್ವರ ಖಂಡ್ರೆ ತಿಳಿಸಿದರು.

‘ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳು ಕಚೇರಿಯಲ್ಲಿ ಸಮಯ ಕಳೆಯದೇ, ಸಂಘರ್ಷಪೀಡಿತ ಗ್ರಾಮಗಳಿಗೆ ತೆರಳಿ ಸಮಸ್ಯೆ ಬಗೆಹರಿಸಬೇಕು. ಪ್ರಸ್ತುತ ಪಶುಸಂಗೋಪನಾ ಇಲಾಖೆಯಿಂದ ಪಶುವೈದ್ಯರ ಸೇವೆ ಎರವಲು ಪಡೆಯಲಾಗುತ್ತಿದ್ದು, ವನ್ಯಜೀವಿ ವೈದ್ಯರ ಕೇಡರ್ ಸೃಷ್ಟಿಸಿ ನೇರ ನೇಮಕಾತಿಗೆ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದು ಹೇಳಿದರು.

ಪ್ರಜಾವಾಣಿ- ರಸಪ್ರಶ್ನೆ ನೋಂದಣಿ ಪ್ರಾರಂಭ

ಬೆಂಗಳೂರು: ವಿದ್ಯಾರ್ಥಿಗಳಲ್ಲಿನ ಜ್ಞಾನದ ಮಟ್ಟವನ್ನು ಪರೀಕ್ಷಿಸಲು ‘ಪ್ರಜಾವಾಣಿ–ರಸಪ್ರಶ್ನೆ ಚಾಂಪಿಯನ್‌ಶಿಪ್’ ಮತ್ತೆ ಬಂದಿದ್ದು, ಈ ಸ್ಪರ್ಧೆಯ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಿದೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪ್ರಗತಿದಾಯಕ ಕಲಿಕೆಯ ಅಗತ್ಯವಿದ್ದು, ಆರೋಗ್ಯಕರ ಸ್ಪರ್ಧೆಗಳು ಯುವ ಪ್ರತಿಭೆಗಳ ಜ್ಞಾನಭಂಡಾರವನ್ನು ಮತ್ತಷ್ಟು ವೃದ್ಧಿಸುತ್ತವೆ. ಈ ಉದ್ದೇಶದಿಂದ ‘ಪ್ರಜಾವಾಣಿ’ ರಸಪ್ರಶ್ನೆ ಸ್ಪರ್ಧೆಯನ್ನು ನಡೆಸುತ್ತಿದೆ.

ನೋಂದಣಿಗೆ ಸ್ಕ್ಯಾನ್ ಮಾಡಿ

‘ಪ್ರಜಾವಾಣಿ–ರಸಪ್ರಶ್ನೆ ಚಾಂಪಿಯನ್‌ಶಿಪ್’ನಲ್ಲಿ 7ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಬಹುದಾಗಿದೆ. ಸ್ಪರ್ಧೆಯು ಆರು ವಲಯಗಳಲ್ಲಿ ಮೊದಲ ಹಂತದಲ್ಲಿ ನಡೆಯಲಿದೆ. ಮೈಸೂರು, ಹುಬ್ಬಳ್ಳಿ, ಬಾಗಲಕೋಟೆ, ಬೀದರ್, ದಾವಣಗೆರೆ ಮತ್ತು ಬೆಂಗಳೂರು ವಲಯಗಳಲ್ಲಿ ಗೆಲುವು ಸಾಧಿಸಿದವರು ರಾಜ್ಯಮಟ್ಟದಲ್ಲಿ ಸ್ಪರ್ಧೆಗೆ ಪಾಲ್ಗೊಳ್ಳುವ ಅರ್ಹತೆ ಪಡೆಯಲಿದ್ದಾರೆ.

ವಲಯಗಳಲ್ಲಿ ವಿಜೇತರಾದ ಎಲ್ಲರಿಗೂ ಒಂದು ದಿನದ ಆವಿಷ್ಕಾರ ಕಾರ್ಯಾಗಾರವನ್ನು ಆಯೋಜಿಸಲಾಗುತ್ತದೆ. ಈ ಕಾರ್ಯಾಗಾರದಲ್ಲಿ ಸಮೃದ್ಧ ಕಲಿಕೆಯ ಅನುಭವ ಪಡೆಯಬಹುದು. ವಿದ್ಯಾರ್ಥಿಗಳಲ್ಲಿನ ಸೃಜನಶೀಲತೆ ಹೊರಹೊಮ್ಮಲು ಈ ಆವಿಷ್ಕಾರ ಕಾರ್ಯಾಗಾರವು ಹೊಸ ವೇದಿಕೆಯನ್ನು ಕಲ್ಪಿಸಲಿದೆ.

ಪ್ರಕ್ರಿಯೆ ಹೇಗೆ?: ಇದು ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ರಸಪ್ರಶ್ನೆ ಸ್ಪರ್ಧೆಯಾಗಿದ್ದು, ವಿದ್ಯಾರ್ಥಿಗಳು ಶಾಲೆಗಳ ಮೂಲಕ ತಂಡವಾಗಿ ನೋಂದಾಯಿಸಿಕೊಳ್ಳಬೇಕು. ಪ್ರತಿ ತಂಡದಲ್ಲಿ ಕಡ್ಡಾಯವಾಗಿ ಇಬ್ಬರು ವಿದ್ಯಾರ್ಥಿಗಳು ಇರಬೇಕು. ಬೇರೆ ಬೇರೆ ತರಗತಿಯ ವಿದ್ಯಾರ್ಥಿಗಳೂ ತಂಡವಾಗಿ ಭಾಗವಹಿಸಬಹುದು.

ನೋಂದಾಯಿತ ತಂಡಗಳಿಗೆ ಪ್ರಾಥಮಿಕ ಹಂತದ ಪರೀಕ್ಷೆ ನಡೆಸಲಾಗುತ್ತದೆ. ಪ್ರತಿ ವಲಯದಲ್ಲಿ 6 ಅಗ್ರ ತಂಡಗಳು ವಲಯ ಮಟ್ಟದ ಅಂತಿಮ ಹಂತಕ್ಕೆ ತಲುಪುತ್ತವೆ. ಆರು ವಲಯಗಳ ವಿಜೇತರು ರಾಜ್ಯಮಟ್ಟದ ಸ್ಪರ್ಧೆಗೆ ಅರ್ಹತೆ ಪಡೆಯುತ್ತಾರೆ. ಅಂತಿಮ ಹಂತದ ಎಲ್ಲ ಸ್ಪರ್ಧಿಗಳಿಗೆ ಆವಿಷ್ಕಾರ ಕಾರ್ಯಾಗಾರ ನಡೆಸಲಾಗುತ್ತದೆ. ಬೆಂಗಳೂರಿನಲ್ಲಿ ರಾಜ್ಯಮಟ್ಟದ ಸ್ಪರ್ಧೆ ನಡೆಯಲಿದೆ.

ನೋಂದಣಿ ಉಚಿತವಾಗಿದ್ದು, ಆಸಕ್ತರು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ‘ಪ್ರಜಾವಾಣಿ–ರಸಪ್ರಶ್ನೆ ಚಾಂಪಿಯನ್‌ಶಿಪ್’ಗೆ ನೋಂದಾಯಿಸಿಕೊಳ್ಳಬಹುದು.

ಸಂಪರ್ಕಕ್ಕೆ: 7338018541 (ಕಚೇರಿ ಅವಧಿಯಲ್ಲಿ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಲಭ್ಯ)

ಶೇ 90ರಷ್ಟು ಹಾಜರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಕಾಲೇಜು ಉಪನ್ಯಾಸಕರ ಅರ್ಹತಾ ಪರೀಕ್ಷೆ (ಕೆ-ಸೆಟ್ 2025) ರಾಜ್ಯದ 11 ಜಿಲ್ಲೆಗಳಲ್ಲಿ ಭಾನುವಾರ ಸುಗಮವಾಗಿ ನಡೆಯಿತು.

ಪರೀಕ್ಷಾ ಅಕ್ರಮಗಳನ್ನು ತಡೆಯಲು ಬಿಗಿ ಕ್ರಮಗಳನ್ನು ಕೈಗೊಂಡಿದ್ದರಿಂದ ಯಾವುದೇ ಅಹಿತಕರ ಘಟನೆಗಳು ವರದಿಯಾಗಿಲ್ಲ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ. ಒಟ್ಟು 34 ವಿಷಯಗಳಿಗೆ ನಡೆದ ಕೆ-ಸೆಟ್ ಪರೀಕ್ಷೆಗೆ 1.34 ಲಕ್ಷ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಈ ಪೈಕಿ 1.21 ಲಕ್ಷ (ಶೇ 90) ಮಂದಿ ಹಾಜರಾಗಿದ್ದರು ಎಂದು ಅವರು ವಿವರಿಸಿದ್ದಾರೆ.

ಬೆಂಗಳೂರು, ಬಳ್ಳಾರಿ, ಬೆಳಗಾವಿ, ದಾವಣಗೆರೆ, ಧಾರವಾಡ, ಕಲಬುರಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ತುಮಕೂರು, ವಿಜಯಪುರ ಜಿಲ್ಲೆಗಳ 316 ಕೇಂದ್ರಗಳಲ್ಲಿ ಪರೀಕ್ಷೆ ಯಶಸ್ವಿಯಾಗಿ ನಡೆಯಿತು.

ಕೆ-ಸೆಟ್ ಪರೀಕ್ಷೆ



‘ಪರೀಕ್ಷಾ ಕೇಂದ್ರಗಳಿಂದ ಅಭ್ಯರ್ಥಿಗಳ ಉತ್ತರ ಪತ್ರಿಕೆಗಳು ಕೆಇಎ ಕಚೇರಿಗೆ ಬಂದ ತಕ್ಷಣವೇ ಅವುಗಳನ್ನು ಸ್ಕ್ಯಾನ್ ಮಾಡಿ, ವೆಬ್ ಸೈಟ್‌ನಲ್ಲಿ ಅಪ್‌ಲೋಡ್ ಮಾಡುವ ಕೆಲಸ ಕೂಡ ಸಂಜೆ ವೇಳೆಗೆ ಆರಂಭವಾಯಿತು. ಎಲ್ಲ ವಿಷಯಗಳ ಕೀ ಉತ್ತರಗಳನ್ನು ಕೂಡ ಈ ವಾರದಲ್ಲಿ ಪ್ರಕಟಿಸಲಾಗುವುದು’ ಎಂದೂ ಅವರು ಹೇಳಿದ್ದಾರೆ.


ವಿದ್ಯುತ್ ಸ್ಪರ್ಶ 2 ಆನೆ ಸಾವು

ಪ್ರಜಾವಾಣಿ ವಾರ್ತೆ

ಖಾನಾಪುರ (ಬೆಳಗಾವಿ ಜಿಲ್ಲೆ): ಕೃಷಿಭೂಮಿಯಲ್ಲಿ ತುಂಡರಿಸಿ ಬಿದ್ದಿದ್ದ ತಂತಿಯಲ್ಲಿ ಪ್ರವಹಿಸುತ್ತಿದ್ದ ವಿದ್ಯುತ್ ಸ್ಪರ್ಶಿಸಿ ಎರಡು ಕಾಡಾನೆಗಳು ಸಾವನ್ನಪ್ಪಿದ ಘಟನೆ ತಾಲ್ಲೂಕಿನ ನಾಗರಗಾಳಿ ಅರಣ್ಯ ವ್ಯಾಪ್ತಿಯ ಸುಳ್ಳೇಗಾಳಿ ಬಳಿ ಭಾನುವಾರ ಸಂಭವಿಸಿದೆ.

ಹಲವು ದಿನಗಳ ಹಿಂದೆ ನೆರೆಯ ದಾಂಡೇಲಿ ಕಾಡಿನಿಂದ ಆಹಾರ ಅರಸಿ ತಾಲ್ಲೂಕಿಗೆ ಬಂದಿದ್ದ 20ರಿಂದ 22 ವರ್ಷ ವಯಸ್ಸಿನ ಮತ್ತು 40 ರಿಂದ 45 ವರ್ಷ ವಯಸ್ಸಿನ ಗಂಡಾನೆಗಳು ಅಸುನೀಗಿವೆ.

ಆನೆಗಳ ಕಳೇಬರ ಪತ್ತೆಯಾದ ಜಮೀನಿನ ಮಾಲೀಕರಾದ ಸುಳ್ಳೇಗಾಳಿಯ ಗಣಪತಿ ಗುರವ ಅವರು, ನಾಗರಗಾಳಿ ವಲಯ ಅರಣ್ಯಾಧಿಕಾರಿ ಕಚೇರಿಯಲ್ಲಿ ಹೆಸ್ಕಾಂ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ‘ಮರಣೋತ್ತರ ಪರೀಕ್ಷೆ ನಂತರ ಇಲಾಖೆ ನಿಯಮದಂತೆ ಆನೆಗಳ ಅಂತ್ಯಕ್ರಿಯೆ ಮಾಡಲಾಗುತ್ತದೆ. ಬೆಳೆ ಸಂರಕ್ಷಣೆ ನೆಪದಲ್ಲಿ ಎರಡು ಆನೆಗಳ ಸಾವಿಗೆ ಕಾರಣರಾದವರ ವಿರುದ್ಧ ಅರಣ್ಯ ಇಲಾಖೆ ಅಗತ್ಯ ಕ್ರಮ ಕೈಗೊಳ್ಳಲಿದೆ’ ಎಂದು ನಾಗರಗಾಳಿ ಎಆರ್‌ಎಫ್‌ಒ ಶಿವಾನಂದ ಮಗದುಮ್ ಹೇಳಿದರು.



ಕೃಷಿಭೂಮಿಯಲ್ಲಿ ಭಾನುವಾರ ಪತ್ತೆಯಾದ ಕಾಡಾನೆ ಕಳೇಬರ

‘ನಿರ್ಲಕ್ಷ್ಯ ವಹಿಸಿದವರ ವಿರುದ್ಧ ಕ್ರಮವಾಗಲಿ’

ವಿದ್ಯುತ್ ಸ್ಪರ್ಶದಿಂದ ಆನೆಗಳ ಅಸ್ವಾಭಾವಿಕ ಸಾವಿನ ಪ್ರಕರಣಗಳ ಕುರಿತು ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಸ್ಥಳೀಯರ ಜತೆ ಸಭೆ ನಡೆಸಿ ಉತ್ತಮ ಬಾಂಧವ್ಯ ಇಟ್ಟುಕೊಳ್ಳುವಂತೆ ಸಚಿವ ಈಶ್ವರ್ ಖಂಡ್ರೆ ಲಿಖಿತ ಸೂಚನೆ ನೀಡಿದ ನಂತರವೂ ಇಂಥ ಘಟನೆ ನಡೆದಿರುವುದು ದುರದೃಷ್ಟಕರ. ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಆಗಬೇಕು
ಗಿರಿಧರ ಕುಲಕರ್ಣಿ
ವನ್ಯಜೀವಿ ಸಂರಕ್ಷಣಾವಾದಿ

ರಾಜ್ಯ, ರಾಷ್ಟ್ರೀಯ, ಅಂತರರಾಷ್ಟ್ರೀಯ ಜಲ ವಿವಾದ, ಒಪ್ಪಂದ, ತೀರ್ಪುಗಳ ಗುಚ್ಛ

‘ನೀರಿನ ಹೆಜ್ಜೆ’ 5ರಂದು ಬಿಡುಗಡೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ರಾಜ್ಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಜಲ ವಿವಾದಗಳು, ಒಪ್ಪಂದಗಳು, ನ್ಯಾಯಾಲಯದ ತೀರ್ಪುಗಳು, ನೀರಾವರಿ ಯೋಜನೆಗಳು, ಸಮಸ್ಯೆಗಳು ಮತ್ತು ಪರಿಹಾರಗಳ ಚಿತ್ರಣವಿರುವ ನಾನು ಬರೆದಿರುವ ‘ನೀರಿನ ಹೆಜ್ಜೆ’ ಕೃತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ 5ರಂದು ಬಿಡುಗಡೆ ಮಾಡಲಿದ್ದಾರೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಅಂದು ಸಂಜೆ 4 ಗಂಟೆಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಕಾರ್ಯಕ್ರಮ ನಡೆಯಲಿದೆ.



ಶಿವಕುಮಾರ್

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾದ ಎಚ್.ಕೆ. ಪಾಟೀಲ, ಎಂ.ಬಿ. ಪಾಟೀಲ, ಎನ್.ಎಸ್. ಬೋಸರಾಜು, ಸುಪ್ರೀಂ ಕೋರ್ಟ್ ವಕೀಲ ಮೋಹನ್ ವಿ. ಕಾತರಕಿ ಭಾಗವಹಿಸಲಿದ್ದಾರೆ’ ಎಂದರು.

‘1956 ಆಗಸ್ಟ್ 28ರಂದು ದೇಶದ ನದಿಗಳ ಮತ್ತು ಕಣಿವೆ ವಿವಾದಗಳ ನ್ಯಾಯ ನಿರ್ಣಯಕ್ಕೆ ಜಾರಿಗೊಳಿಸಲಾದ ಅಂತರರಾಷ್ಟ್ರೀಯ ಜಲ ಕಾಯ್ದೆ, ಜಲ ಒಪ್ಪಂದಗಳು ಯಾವುವು, ಆ ದೇಶಗಳು ಕೈಗೊಂಡ ನಿರ್ಧಾರಗಳೇನು? ಭಾರತದ ನಿಲುವುಗಳು ಏನಾಗಿತ್ತು? ದೇಶದ ನದಿಗಳ ಜೋಡಣೆ ಬಿಕ್ಕಟ್ಟು, ಪರಿಹಾರ ಹಾಗೂ ಜೋಡಣೆ ಸಾಧ್ಯವೇ? ದೇಶದಲ್ಲಿನ ನದಿಗಳ ವಿವಾದ ಮತ್ತು ಅಲ್ಲಿನ ಪರಿಸ್ಥಿತಿ ಏನು ಎಂಬುದರ ಬಗ್ಗೆ ಈ ಕೃತಿಯಲ್ಲಿ ದಾಖಲಿಸಿದ್ದೇನೆ. ರಾಜ್ಯದ ಮಹದಾಯಿ ಸೇರಿದಂತೆ ವಿವಿಧ ನೀರಾವರಿ ಯೋಜನೆಗಳ ಬಗ್ಗೆಯೂ ಸಮಗ್ರ ಮಾಹಿತಿಯಿದೆ’ ಎಂದರು.

‘ಬಾಂಗ್ಲಾದೇಶದೊಂದಿಗೆ ಬೇಸಿಗೆ ಅವಧಿಯಲ್ಲಿ ನೀರಿನ ಹರಿವು ಹಂಚಿಕೊಳ್ಳಬೇಕೆಂಬ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಮಹಾನದಿ, ಶಾರದಾ ಒಪ್ಪಂದಕ್ಕೆ ಅಂದಿನ ಪ್ರಧಾನಿ ದೇವೇಗೌಡರು ಸಹಿ ಹಾಕಿ, ಪ್ರಮುಖ 12 ಅಧ್ಯಾಯಗಳನ್ನು ಒಳಗೊಂಡ ನಿಯಮಾವಳಿ ರೂಪಿಸಲಾಗಿತ್ತು. 1971ರಲ್ಲಿ ನೀರಾವರಿ ಯೋಜನೆಗಳಿಗೆ ವಿಶ್ವಬ್ಯಾಂಕ್ ನೆರವು ನೀಡುವುದಕ್ಕೆ ಆರಂಭಿಸಿತ್ತು. ನಂತರದಲ್ಲಿ ದೇಶದ ನದಿ ಜೋಡಣೆ ವಿಚಾರ ಮುನ್ನೆಲೆಗೆ ಬಂತು. ಕೇಂದ್ರ ಸರ್ಕಾರದ ರಾಷ್ಟ್ರೀಯ ನೀರಾವರಿ ಅಭಿವೃದ್ಧಿ ಸಂಸ್ಥೆಯು ಹಿಮಾಲಯದ 14 ನದಿ, ದಕ್ಷಿಣ ಭಾರತದ 16 ನದಿ ಜೋಡಣೆ ಹಾಗೂ ರಾಜ್ಯದ ಒಳಗಿನ 37 ನದಿ ಜೋಡಣೆಗೆ ವರದಿ ನೀಡಿತ್ತು. ಆ ಎಲ್ಲ ವಿಷಯಗಳು ಈ ಕೃತಿಯಲ್ಲಿದೆ’ ಎಂದು ವಿವರಿಸಿದರು.


‘1952ರ ಸೆ. 29ರಂದು ಕೃಷ್ಣಾ ನದಿ ಅಣೆಕಟ್ಟು ನಿರ್ಮಾಣಕ್ಕೆ ಶಂಕುಸ್ಥಾಪನೆಗೆ ಬಂದಿದ್ದ ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಅಣೆಕಟ್ಟುಗಳು ಆಧುನಿಕ ಭಾರತದ ದೇಗುಲಗಳಿದ್ದಂತೆ ಎಂದು ಉಲ್ಲೇಖಿಸಿದ್ದರು. ಅದನ್ನೂ ಉಲ್ಲೇಖಿಸಿದ್ದೇನೆ. ಕೃತಿಯಲ್ಲಿ ಯಾರನ್ನೂ ಟೀಕೆ ಮಾಡಿಲ್ಲ. ರಾಜಕೀಯ ವಿಚಾರಗಳ ಬಗ್ಗೆಯೂ ಪ್ರಸ್ತಾಪ ಮಾಡಿಲ್ಲ. ವಾಸ್ತವಾಂಶಗಳನ್ನಷ್ಟೆ ದಾಖಲಿಸಿದ್ದೇನೆ’ ಎಂದೂ ಅವರು ಸ್ಪಷ್ಟಪಡಿಸಿದರು.

ಎಂಬಿಎ, ಎಂಸಿಎ: 3ನೇ ಸುತ್ತಿನ ಕೌನ್ಸೆಲಿಂಗ್ 4ರಿಂದ

ಬೆಂಗಳೂರು: ‘ಎಂಬಿಎ, ಎಂಸಿಎ, ಎಂಇ, ಎಂ.ಟೆಕ್, ಎಂ.ಆರ್ಕ್ ಕೋರ್ಸ್‌ಗಳ ಪ್ರವೇಶಕ್ಕೆ ಮೂರನೇ ಸುತ್ತಿನ ಸೀಟು ಹಂಚಿಕೆಗೆ ಆಯ್ಕೆಗಳನ್ನು (ಇಚ್ಛೆ) ದಾಖಲಿಸಲು ಇದೇ 4ರಿಂದ 6ರವರೆಗೆ ಅವಕಾಶ ನೀಡಲಾಗಿದೆ’ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

3ನೇ ಸುತ್ತಿನಲ್ಲಿ ಲಭ್ಯವಿರುವ ಸೀಟುಗಳ ವಿವರಗಳನ್ನು 4ರಂದು ಕೆಇಎ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಆಸಕ್ತರು ₹25 ಸಾವಿರ ಕಾಷನ್ ಡೆಪಾಸಿಟ್ ಪಾವತಿಸಿ ಆಯ್ಕೆಗಳನ್ನು ದಾಖಲಿಸಬಹುದು ಎಂದು ತಿಳಿಸಿದ್ದಾರೆ.

ಇದೇ 7ರಂದು ಮಧ್ಯಾಹ್ನ 2ಗಂಟೆಗೆ ತಾತ್ಕಾಲಿಕ ಫಲಿತಾಂಶ ಪ್ರಕಟವಾಗಲಿದೆ. 8ರಂದು ಮಧ್ಯಾಹ್ನ 2 ಗಂಟೆಗೆ ಅಂತಿಮ ಫಲಿತಾಂಶ ಪ್ರಕಟಿಸಲಾಗುವುದು ಎಂದು ಅವರು ಮಾಹಿತಿ ನೀಡಿದ್ದಾರೆ.




ಕ್ರೀಡಾಹಬ್ಬ

ಪ್ರಜಾವಾಣಿ ಚಿತ್ರ
ಪ್ರಶಾಂತ್ ಎಚ್.ಜಿ.

ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ಕರ್ನಾಟಕ ಒಲಿಂಪಿಕ್ ಸಂಸ್ಥೆ ಆಯೋಜಿಸಿದ ಕರ್ನಾಟಕ ಮಿನಿ ಕ್ರೀಡಾಕೂಟದ ಉದ್ಘಾಟನೆ ಸಮಾರಂಭದಲ್ಲಿ ಭಾಗವಹಿಸಿದ್ದ 14 ವರ್ಷದೊಳಗಿನ ಕ್ರೀಡಾಪಟುಗಳು. ಕೂಟವು ನ.9ರವರೆಗೆ ನಡೆಯಲಿದೆ

‘ಪಿಎಫ್‌ಐ ನಿಷೇಧಕ್ಕೆ ಒತ್ತಾಯಿಸಿದ್ದರೇ?’

ಪ್ರಜಾವಾಣಿ ವಾರ್ತೆ



ರವಿಕುಮಾರ್

ಬೆಂಗಳೂರು: ‘ಪಿಎಫ್‌ಐ ಮತ್ತು ಎಸ್‌ಡಿಪಿಐನಂತಹ ಸಮಾಜಘಾತುಕ ಸಂಘಟನೆಗಳನ್ನು ನಿಷೇಧ ಮಾಡಿ ಎಂದು ಮಲ್ಲಿಕಾರ್ಜುನ ಖರ್ಗೆ ಅವರು ಎಂದಾದರೂ ಕೇಳಿದ್ದಾರೆಯೇ’ ಎಂದು ವಿಧಾನ ಪರಿಷತ್ತಿನ ವಿರೋಧಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಪ್ರಶ್ನಿಸಿದ್ದಾರೆ.

ಭಾನುವಾರ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ‘ಆರ್‌ಎಸ್‌ಎಸ್ ನಿಷೇಧಿಸಬೇಕು ಎಂಬ ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆ ಖಂಡನೀಯ. ಸಮಾಜಘಾತುಕ ಸಂಘಟನೆಗಳಾದ ಪಿಎಫ್‌ಐ ಮತ್ತು ಎಸ್‌ಡಿಪಿಐ ಅನ್ನು ನಿಷೇಧಿಸಬೇಕು. ಅದರ ಬದಲಿಗೆ ಈ ಸಂಘಟನೆಗಳ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣಗಳನ್ನು ಕಾಂಗ್ರೆಸ್ ಸರ್ಕಾರ ಹಿಂಪಡೆದಿದೆ’ ಎಂದಿದ್ದಾರೆ.

‘ನೂರು ವರ್ಷಗಳಿಂದ ದೇಶದ ಏಕತೆ, ಸಮಗ್ರತೆ, ಸಮಾಜ ಸೇವೆ ಮತ್ತು ಸಾಮಾಜಿಕ ಸೌಹಾರ್ದಕ್ಕಾಗಿ ಕೆಲಸ ಮಾಡುತ್ತಿರುವ ಆರ್‌ಎಸ್‌ಎಸ್ ಅನ್ನು ನಿಷೇಧಿಸುವಂತೆ ಖರ್ಗೆ ಅವರು ಹೇಳುತ್ತಿರುವುದು ವಿಪರ್ಯಾಸ’ ಎಂದಿದ್ದಾರೆ.

‘ಆರ್‌ಎಸ್‌ಎಸ್ ತೆರಿಗೆ ಪಾವತಿಸುತ್ತಿಲ್ಲ ಏಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರ್‌ಎಸ್‌ಎಸ್ ಆದಾಯ ತೆರಿಗೆ ತಪ್ಪಿಸಿಕೊಳ್ಳುತ್ತಿರುವುದು ಏಕೆ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದ್ದಾರೆ.

ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ತಾನು ನೋಂದಾಯಿತ ಸಂಸ್ಥೆಯಲ್ಲ ಎಂದು ಆರ್‌ಎಸ್‌ಎಸ್ ಲಿಖಿತವಾಗಿ ತಿಳಿಸಿದೆ. ಆರ್‌ಎಸ್‌ಎಸ್ ನಿಸ್ವಾರ್ಥದಿಂದ ದೇಶಸೇವೆ ಮಾಡುತ್ತಿರುವುದು ನಿಜವೇ ಆಗಿದ್ದರೆ, ಇತರ ಎಲ್ಲ ಎನ್‌ಜಿಒಗಳಂತೆ ಪಾರದರ್ಶಕವಾಗಿ ಹಾಗೂ ಕಾನೂನು ಬದ್ಧವಾಗಿ ಏಕೆ ನೋಂದಾಯಿಸಿಕೊಳ್ಳ-ಬಾರದು’ ಎಂದು ಸವಾಲು ಹಾಕಿದ್ದಾರೆ.



ಆರ್‌ಎಸ್‌ಎಸ್‌ನ ದೈನಂದಿನ ಕಾರ್ಯಾಚರಣೆಗಳಿಗೆ ಹಣಕಾಸು ಒದಗಿಸುತ್ತಿರುವವರು ಯಾರು? ಆರ್‌ಎಸ್‌ಎಸ್‌ನ ಪ್ರಚಾರಕರಿಗೆ ಪಾವತಿ ಮಾಡುವವರು ಯಾರು?
ಪ್ರಿಯಾಂಕ್ ಖರ್ಗೆ,
ಮಾಹಿತಿ ತಂತ್ರಜ್ಞಾನ ಸಚಿವ

‘ಆರ್‌ಎಸ್‌ಎಸ್‌ಗೆ ದೇಣಿಗೆ ನೀಡುವವರು ಯಾರು? ದೇಣಿಗೆ ಎಲ್ಲಿಂದ ಬರುತ್ತದೆ? ನೋಂದಣಿ ಇಲ್ಲದ ಸಂಘಟನೆ ಎಂದ ಮೇಲೆ ಲೆಕ್ಕಪತ್ರ ಪರಿಶೀಲನೆ ಮತ್ತು ತೆರಿಗೆ ಪಾವತಿಯ ಪ್ರಶ್ನೆಯೇ ಇರುವುದಿಲ್ಲ. ಹೀಗೆ ದೇಶಸೇವೆ ಎಂದು ಹೇಳುತ್ತಾ ಪರಿಶೀಲನೆ ಮತ್ತು ತೆರಿಗೆ ಪಾವತಿಯಿಂದ ತಪ್ಪಿಸಿಕೊಳ್ಳುತ್ತಿರುವುದು ಏಕೆ? ಹೀಗೆ ತೆರಿಗೆ ತಪ್ಪಿಸುವವರು ದೇಶಭಕ್ತರು ಹೇಗಾಗುತ್ತಾರೆ’ ಎಂದು ಪ್ರಶ್ನಿಸಿದ್ದಾರೆ.

‘ದೇಶದ ಪ್ರಧಾನಿ ಮತ್ತು ಗೃಹ ಸಚಿವರಿಗೆ ನೀಡಿರುವಷ್ಟೇ ಭದ್ರತೆಯನ್ನು ಆರ್‌ಎಸ್‌ಎಸ್‌ನ ಮುಖ್ಯಸ್ಥರಿಗೂ ನೀಡಲಾಗಿದೆ. ನೋಂದಣಿ ಮಾಡಿಕೊಳ್ಳದ ಸಂಸ್ಥೆಯ ಮುಖ್ಯಸ್ಥರ ಭದ್ರತೆಗಾಗಿ ದೇಶದ ಜನರ ತೆರಿಗೆ ಹಣವನ್ನು ಖರ್ಚು ಮಾಡುತ್ತಿರುವುದು ಎಷ್ಟು ಸರಿ’ ಎಂದು ಪ್ರಶ್ನೆಯೊಂದಕ್ಕೆ ಮರುಪ್ರಶ್ನೆ ಹಾಕಿದ್ದಾರೆ.

‘ರಾಜ್ಯ ಜಲ ಆಯೋಗ’ ರಚಿಸಲು ಚಿಂತನೆ

ಒಂದನೇ ಪುಟದಿಂದ...

‘ಆಯೋಗವು ನೀರಾವರಿಗೆ ಸೀಮಿತವಾಗದೆ, ರಾಜ್ಯದ ಜಲ ಸಂಬಂಧಿ ಎಲ್ಲ ವಿಷಯಗಳ ಮೇಲೆ ನಿಗಾ ವಹಿಸಿ, ಸಮಗ್ರ ಅಧ್ಯಯನ ನಡೆಸಿ ಸರ್ಕಾರಕ್ಕೆ ಶಿಫಾರಸು ನೀಡಬೇಕು. ಕುಡಿಯುವ ನೀರು, ವ್ಯವಸಾಯ, ಕೈಗಾರಿಕೆಗಳು ಮತ್ತು ಇತರ ಸೌಲಭ್ಯಗಳಿಗೆ ನೀರಿನ ಬಳಕೆಯ ಪ್ರಮಾಣ ಮತ್ತು ಲಭ್ಯತೆಯ ಸಮಗ್ರ ವಿಶ್ಲೇಷಣೆ ನಡೆಸಬೇಕು. ನಗರ ಪ್ರದೇಶಗಳ ಬೆಳವಣಿಗೆ ಮತ್ತು ವಲಸೆ ಜನಸಂಖ್ಯೆಗೆ ಪೂರಕವಾಗಿ ಮುಂದಿನ 50 ವರ್ಷಗಳ ನೀರಿನ ಅವಶ್ಯಕತೆಯನ್ನು ಅಂದಾಜಿಸಿ, ಅದನ್ನು ಪೂರೈಸಲು ಜಾಗತಿಕ ಮಾನದಂಡವನ್ನು ಅನುಸರಿಸಿ ಮಾರ್ಗೋಪಾಯಗಳ ವರದಿ ತಯಾರಿಸಿ ನೀಡಬೇಕು’ ಎಂದೂ ಅವರು ವಿವರಿಸಿದರು.

ರಾಜ್ಯದಲ್ಲಿನ ಪ್ರಸ್ತುತ ನೀರಾವರಿ ಪದ್ಧತಿ ಮತ್ತು ಅದರಲ್ಲಿ ಮಾಡಬೇಕಾದ ಬದಲಾವಣೆ, ಆಧುನಿಕ ತಂತ್ರಜ್ಞಾನ ಬಳಸಿ ನೀರಿನ ಮಿತವ್ಯಯಕ್ಕೆ ಕೈಗೊಳ್ಳಬೇಕಾದ ಕ್ರಮಗಳು, ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನದಲ್ಲಿನ ಬದಲಾವಣೆಗಳ ಅಧ್ಯಯನ, ಹೆಚ್ಚು ಮಳೆಯಾದಾಗ ನೀರು ಸಂಗ್ರಹಿಸಿಡಲು ಜಲಾಶಯಗಳು ಮತ್ತು ಕೆರೆಕಟ್ಟೆಗಳಲ್ಲಿರುವ ಸಾಮರ್ಥ್ಯದ ಕೊರತೆ ಗುರುತಿಸಿ ಪರಿಹಾರ ಸೂಚಿಸುವುದು, ಜಲಸಂಪನ್ಮೂಲಗಳನ್ನು ಹೆಚ್ಚಿಸುವ ವಿಧಾನಗಳು, ಪ್ರವಾಹ, ಬರಗಾಲದಂಥ ವಿಪತ್ತು ಬಂದಾಗ ನೀರಿನ ನಿರ್ವಹಣೆಯನ್ನು ಯಾವ ರೀತಿ ಮಾಡಬೇಕು ಎಂಬ ಬಗ್ಗೆ ಮತ್ತು ತುರ್ತು ಯೋಜನೆಗಳನ್ನು ರೂಪಿಸುವ ಬಗ್ಗೆಯೂ ಈ ಆಯೋಗ ಶಿಫಾರಸು ಮಾಡಬೇಕು ಎನ್ನುವುದು ನನ್ನ ಯೋಜನೆ’ ಎಂದರು.

ಆಯೋಗದ ಉದ್ದೇಶ–ಅಧ್ಯಯನ ವ್ಯಾಪ್ತಿ

- ಭವಿಷ್ಯದಲ್ಲಿ ನೀರಿನ ಬೇಡಿಕೆ ಮತ್ತು ಲಭ್ಯತೆಯ ಅಂದಾಜು
- ಆಧುನಿಕ ನೀರಾವರಿ ಪದ್ಧತಿ ಮತ್ತು ಮಿತವ್ಯಯ
- ಜಲಸಂಪನ್ಮೂಲಗಳ ಅಭಿವೃದ್ಧಿ ಮತ್ತು ವಿಪತ್ತು ನಿರ್ವಹಣೆ

ಅರಣ್ಯ ಇಲಾಖೆಗೆ ಭಾರತೀಯ ಭೂ ಸರ್ವೇಕ್ಷಣಾ ಸಂಸ್ಥೆ ಪ್ರಸ್ತಾವ

‘ನುಗು’ ಸನಿಹ ಅದಿರು ಶೋಧ

• ಮೋಹನ್ ಕುಮಾರ ಸಿ.

ಮೈಸೂರು: ಜಿಲ್ಲೆಯ ಸರಗೂರು ತಾಲ್ಲೂಕಿನ ನುಗು ಅಭಯಾರಣ್ಯದ ಪರಿಸರ ಸೂಕ್ಷ್ಮ ವಲಯದ ಸನಿಹದಲ್ಲಿರುವ ಅರಣ್ಯ ಪ್ರದೇಶ ಸೇರಿ 13 ಗ್ರಾಮಗಳಲ್ಲಿ ಸಿಲಿಮನೈಟ್ ಮತ್ತು ಕಯನೈಟ್ ಅದಿರಿನ ಶೋಧ ನಡೆಸಲು ಭಾರತೀಯ ಭೂಸರ್ವೇಕ್ಷಣಾ ಸಂಸ್ಥೆಯು (ಜಿಎಸ್‌ಐ) ಅರಣ್ಯ ಇಲಾಖೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ಪ್ರಸ್ತಾವವು ಪರಿಶೀಲನಾ ಹಂತದಲ್ಲಿದೆ.

ಒಂದು ವೇಳೆ ಅನುಮತಿ ದೊರೆತಲ್ಲಿ ಸರಗೂರು ತಾಲ್ಲೂಕಿನ ಹೊನಗನಹಳ್ಳಿ ಮತ್ತು ಶಾಂತಿಪುರ ವಲಯದ 499 ಹೆಕ್ಟೇರ್ ಅರಣ್ಯ ಪ್ರದೇಶ ಹಾಗೂ 1,001 ಅರಣ್ಯೇತರ ಭೂಮಿಯಲ್ಲಿ ಉದ್ದೇಶಿತ ಅದಿರು ಅನ್ವೇಷಣೆ ನಡೆಯಲಿದೆ. ಹಿರಿಯ ಭೂವಿಜ್ಞಾನಿ ನೇತೃತ್ವದ ಮೂವರು ಸಿಬ್ಬಂದಿಯನ್ನು ಅ.16ರಂದು ‘ಜಿಎಸ್‌ಐ’ ನಿಯೋಜಿಸಿದೆ.

ಮುಖ್ಯಾಂಶಗಳು

- 1,500 ಹೆಕ್ಟೇರ್ ಪ್ರದೇಶದಲ್ಲಿ ಅದಿರು ಶೋಧ
- ಅರಣ್ಯ ಪ್ರದೇಶದಲ್ಲಿ 5 ಕಂದಕ ಹಾಗೂ 20 ಕಡೆ ಕೊಳವೆಬಾವಿ
- ಗಣಿ ಹುಡುಕಾಟದಲ್ಲಿ 0.8 ಟನ್ ಅದಿರು ಸಂಗ್ರಹ

‘50 ದಿನಗಳಲ್ಲಿ ಶೋಧ ನಡೆಸಿ, ವರದಿ ತಯಾರಿಸಲಿದ್ದಾರೆ’ ಎಂದು ಅರ್ಜಿಯಲ್ಲಿ ಹೇಳಿದೆ.

ಎಚ್.ಡಿ.ಕೋಟೆ, ಸರಗೂರು ತಾಲ್ಲೂಕುಗಳ ಗಡಿಯಾಗಿ ಹರಿಯುವ ಕಬಿನಿ ನದಿ ತೀರದಲ್ಲಿರುವ ಶಾಂತಿಪುರ ಗ್ರಾಮದ ಎರಡು ಬೃಹತ್ ಬೆಟ್ಟಗಳ ಅರಣ್ಯ ಭೂಮಿ ಹಾಗೂ ಸುತ್ತಲ ಗ್ರಾಮಗಳಲ್ಲಿ ಶೋಧ ನಡೆಯಲಿದೆ.



ಶಾಂತಿಪುರ ವ್ಯಾಪ್ತಿಯ ಅರಣ್ಯ

ಇಲ್ಲಿಂದ ನುಗು ಜಲಾಶಯ 4.5 ಕಿ.ಮೀ ಹಾಗೂ ಕಬಿನಿ ಜಲಾಶಯದ ಅಣೆಕಟ್ಟೆ 6.8 ಕಿ.ಮೀ ದೂರದಲ್ಲಿವೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಹಾಗೂ ನುಗು ವನ್ಯಜೀವಿಧಾಮ ಕೂಡ ಸನಿಹದಲ್ಲಿವೆ. ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಚಿಕ್ಕದೇವಮ್ಮ ಬೆಟ್ಟವೂ 1.5 ಕಿ.ಮೀ ದೂರದಲ್ಲಿದೆ.

‘ಮಾನವ– ವನ್ಯಜೀವಿ ಸಂಘರ್ಷದಲ್ಲಿ ನಲುಗಿರುವ ಪರಿಸರ ಸೂಕ್ಷ್ಮ ವಲಯದ ಈ ಭಾಗದಲ್ಲಿ ಗಣಿಗಾರಿಕೆ ಆರಂಭವಾದರೆ ಪರಿಸ್ಥಿತಿಯು ಮತ್ತಷ್ಟು ಬಿಗಡಾಯಿಸಲಿದೆ’ ಎಂಬ ಆತಂಕವೂ ಇದೇ ವೇಳೆ ಪರಿಸರ ಹೋರಾಟಗಾರರಿಂದ ವ್ಯಕ್ತವಾಗಿದೆ.

‘ವನ್ಯಜೀವಿ ಹಾಗೂ ಜನರ ಮೇಲೆ ಪರಿಣಾಮ ಬೀರುವ ಗಣಿಗಾರಿಕೆ, ವಾಣಿಜ್ಯ ಪ್ರವಾಸೋದ್ಯಮದಂಥ ಯೋಜನೆ ತರುವ ಮೊದಲು ಸ್ಥಳೀಯರು, ಸಂಘ– ಸಂಸ್ಥೆಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಸೂಕ್ತ’ ಎನ್ನುತ್ತಾರೆ ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ.

ಎಲ್ಲೆಲ್ಲಿ ಶೋಧ?: ಸರಗೂರು ಪಟ್ಟಣಕ್ಕೆ ಸಮೀಪದಲ್ಲೇ ಇರುವ ಶಾಂತಿಪುರ ಗ್ರಾಮದ ಸರ್ವೆ ಸಂಖ್ಯೆ 49, ಮಂಚಹಳ್ಳಿಯ ಸರ್ವೆ ಸಂಖ್ಯೆ 7, ಹುಣಸೇಹಳ್ಳಿಯ ಸರ್ವೆ ಸಂಖ್ಯೆ 54ರ ಅರಣ್ಯ ಪ್ರದೇಶ, ಅಡಹಳ್ಳಿ, ಹಳೆ ಮಂಚನಹಳ್ಳಿ, ಹುನುಗಹಳ್ಳಿ, ಇಟ್ನ, ಕಾಟೂರು, ಕೂಲ್ಯ, ಕುಂದಾಪಟ್ಟಣ, ಕೆ.ಬೆಳತೂರು, ಲಕ್ಕೂರು, ಮನುಗನಹಳ್ಳಿಯಲ್ಲಿ ಅದಿರು ಶೋಧ ನಡೆಯಲಿದೆ.

ಅದಿರು ಶೋಧ ಇನ್ನೂ ಪ್ರಸ್ತಾವದ ಹಂತದಲ್ಲಿದ್ದರೂ, ಮಾನವ-ವನ್ಯಜೀವಿ ಸಂಘರ್ಷ ಹೆಚ್ಚಲು ಕಾರಣವಾಗುವ ಇಂಥ ಯೋಜನೆಗಳನ್ನು ಪುರಸ್ಕರಿಸಬಾರದು
ಗಿರಿಧರ ಕುಲಕರ್ಣಿ
ವನ್ಯಜೀವಿ ಸಂರಕ್ಷಣಾವಾದಿ

ಪ್ರಸ್ತಾವಿತ ಅರಣ್ಯ ಪ್ರದೇಶದಲ್ಲಿ ಹುಲಿ, ಚಿರತೆ, ಆನೆಗಳಿದ್ದು, ಗಣಿಗಾರಿಕೆಗೆ ಪರಿಗಣಿಸಲಾಗದು. ಇಲಾಖೆ ಅಭಿಪ್ರಾಯ ಸಲ್ಲಿಸಲಾಗುವುದು. ನಿರ್ಧಾರ ಸರ್ಕಾರಕ್ಕೆ ಬಿಟ್ಟಿದ್ದು
ಕೆ.ಪರಮೇಶ್,
ಡಿಸಿಎಫ್ (ಪ್ರಾದೇಶಿಕ)

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ತಿಳಿದವಗೆ ಜಗವೆಲ್ಲ ರಸದ ಊಟ.

–ಜಿ.ಎಸ್. ಶಿವರುದ್ರಪ್ಪ

ಸಂಪಾದಕೀಯ

ಹೈಕೋರ್ಟ್ ಸ್ಥಳಾಂತರ ಅನಿವಾರ್ಯ ಕಬ್ಬನ್ ಉದ್ಯಾನಕ್ಕೆ ಜೀವಕಳೆ ಬರಲಿ

ಬೆಂಗಳೂರಿನ ಕಬ್ಬನ್ ಪಾರ್ಕ್ ಉದ್ಯಾನದ ಆವರಣದಲ್ಲಿರುವ ಕರ್ನಾಟಕ ಹೈಕೋರ್ಟ್ ಅನ್ನು ಬೇರೆಡೆಗೆ ಸ್ಥಳಾಂತರಿಸುವ ಚಿಂತನೆ, ಉದ್ಯಾನವನ್ನು ಅಭಿವೃದ್ಧಿಪಡಿಸುವ ನಿಟ್ಟಿನಿಂದ ಮಹತ್ವದ್ದಾಗಿದೆ. ನ್ಯಾಯಾಂಗದ ಅಗತ್ಯಗಳನ್ನು ಪೂರೈಸುವುದರ ಜೊತೆಗೆ, ರಾಜಧಾನಿಯ ಪರಿಸರದ ಹಿತಾಸಕ್ತಿಗೆ ತಕ್ಕಂತೆ ಕಬ್ಬನ್ ಉದ್ಯಾನವನ್ನು ಸಂರಕ್ಷಿಸುವ ಉದ್ದೇಶದಿಂದಲೂ ಹೈಕೋರ್ಟ್ ಸ್ಥಳಾಂತರಗೊಳ್ಳುವುದು ಉತ್ತಮ. ದಶಕಗಳ ಕಾಲದಿಂದಲೂ ಕಬ್ಬನ್ ಉದ್ಯಾನ ಬೆಂಗಳೂರಿಗೆ ಜೀವದುಂಬುವ ಹಸುರುತಾಣಗಳಲ್ಲಿ ಒಂದಾಗಿದೆ; ಮಹಾನಗರದ ಶ್ವಾಸಕೋಶ ಎಂದು ಪ್ರಸಿದ್ಧವಾಗಿದೆ. ಆದರೆ, ಉದ್ಯಾನದ ಪರಿಸರದೊಳಗೆ ಕಾರ್ಯ ನಿರ್ವಹಿಸುವ ಹೈಕೋರ್ಟ್ ಚಟುವಟಿಕೆಗಳಿಂದ ಉಂಟಾಗುವ ಒತ್ತಡ ಈ ತಾಣದ ಉಸಿರುಗಟ್ಟಿಸುವಂತಿದೆ. 1870ರಲ್ಲಿ ಮೈಸೂರಿನ ಆಯುಕ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದ ಸರ್ ಜಾನ್ ಮೀಡೆ ಅವರ ಅವಧಿಯಲ್ಲಿ ಹಾಗೂ ಸಂಸ್ಥಾನದ ಮುಖ್ಯ ಎಂಜಿನಿಯರ್ ಮೇಜರ್ ಜನರಲ್ ರಿಚರ್ಡ್ ಸ್ಯಾಂಕಿ ಅವರ ಪರಿಕಲ್ಪನೆಯಲ್ಲಿ ನಿರ್ಮಾಣಗೊಂಡ ಉದ್ಯಾನವನ್ನು, ಸಂಸ್ಥಾನದ ಬ್ರಿಟಿಷ್ ಆಯುಕ್ತರಾಗಿ ದೀರ್ಘ ಕಾಲ ಸೇವೆ ಸಲ್ಲಿಸಿದ ಸರ್ ಮಾರ್ಕ್ ಕಬ್ಬನ್ ಅವರ ಹೆಸರಿನಿಂದ ಕರೆಯಲಾಗಿತ್ತು. ನಂತರದಲ್ಲಿ, ಶ್ರೀ ಚಾಮರಾಜೇಂದ್ರ ಉದ್ಯಾನ ಎಂದು ಮರು ನಾಮಕರಣಗೊಂಡರೂ ಜನಬಳಕೆಯಲ್ಲಿ 'ಕಬ್ಬನ್ ಪಾರ್ಕ್' ಎಂದೇ ಪ್ರಸಿದ್ಧವಾಗಿದೆ. ಸಾರ್ವಜನಿಕ ಕಟ್ಟಡಗಳು ಹಾಗೂ ಕ್ಲಬ್‌ಗಳ ಕಾರ್ಯ ಚಟುವಟಿಕೆಗಳಿಂದಾಗಿ ಮುನ್ನೂರು ಎಕರೆ ಪ್ರದೇಶದಲ್ಲಿದ್ದ ಈ ಉದ್ಯಾನ ಪ್ರಸ್ತುತ 197 ಎಕರೆ ವ್ಯಾಪ್ತಿಗೆ ಸೀಮಿತಗೊಂಡಿದೆ ಹಾಗೂ ಇಲ್ಲಿನ ಪಾರಿಸರಿಕ ಸಮತೋಲನದಲ್ಲೂ ಏರುಪೇರಾಗಿದೆ.



ಸ್ಥಳಾವಕಾಶದ ಕಾರಣದಿಂದ ಕಬ್ಬನ್ ಉದ್ಯಾನದಿಂದ ಬೇರೆಡೆಗೆ ಹೈಕೋರ್ಟ್ ಸ್ಥಳಾಂತರಿಸುವ ಉದ್ದೇಶ ಸ್ವಾಗತಾರ್ಹ. ಇದರಿಂದ ಉದ್ಯಾನದ ಸಂರಕ್ಷಣೆಗೆ ಅನುಕೂಲ ಆಗಲಿದೆ.

ಹೈಕೋರ್ಟ್ ಕಾರ್ಯ ನಿರ್ವಹಿಸುತ್ತಿರುವ ಪ್ರಸಕ್ತ ಕಟ್ಟಡದ ನಿರ್ಮಾಣ ಪೂರ್ಣಗೊಂಡಿದ್ದು 1868ರಲ್ಲಿ. ಹದಿನೆಂಟು ಸರ್ಕಾರಿ ಕಚೇರಿಗಳು ಕಾರ್ಯ ನಿರ್ವಹಿಸುತ್ತಿದ್ದ ಈ ಕಟ್ಟಡವನ್ನು 'ಅಠಾರಾ ಕಚೇರಿ' ಹೆಸರಿನಿಂದ ಕರೆಯಲಾಗುತ್ತಿತ್ತು. 1956ರಲ್ಲಿ ಹೊಸತಾಗಿ ನಿರ್ಮಾಣಗೊಂಡ ವಿಧಾನಸೌಧಕ್ಕೆ ಆಡಳಿತಾತ್ಮಕ ಕಚೇರಿಗಳು ಸ್ಥಳಾಂತರಗೊಂಡ ನಂತರ, ಅಠಾರಾ ಕಚೇರಿ ಕಟ್ಟಡ 'ಮೈಸೂರು ಹೈಕೋರ್ಟ್' ಎಂದು ಕರೆಸಿಕೊಂಡು, ನಂತರದಲ್ಲಿ 'ಕರ್ನಾಟಕ ಹೈಕೋರ್ಟ್' ಎಂದು ಮರು ನಾಮಕರಣಗೊಂಡಿತು. ಕೆಂಪು ಬಣ್ಣದ ಈ ಐತಿಹಾಸಿಕ ಕಟ್ಟಡ ವಸಾಹತು ಯುಗದ ಹೆಗ್ಗುರುತುಗಳಲ್ಲೊಂದಾಗಿ ಉಳಿದುಕೊಂಡಿದೆ. ಆದರೆ, ಸಾವಿರಾರು ವಕೀಲರು, ಕಕ್ಷಿದಾರರು ಹಾಗೂ ವಾಹನಗಳ ನಿಲುಗಡೆಯ ಸದ್ಯದ ಒತ್ತಡವನ್ನು ನಿರ್ವಹಿಸುವ ಧಾರಣಾ ಸಾಮರ್ಥ್ಯ ಈ ಹಳೆಯ ಕಟ್ಟಡ ಹಾಗೂ ಪರಿಸರಕ್ಕಿಲ್ಲ. 2011ರಲ್ಲಿ ವಾಹನಗಳ ನಿಲುಗಡೆಗಾಗಿ ಉದ್ಯಾನದ 4.4 ಎಕರೆ ಪ್ರದೇಶವನ್ನು ನೀಡಿದ್ದ ಸರ್ಕಾರದ ಕ್ರಮವು ಟೀಕೆಗೊಳಗಾಗಿತ್ತು. ಹೈಕೋರ್ಟ್ ಕಟ್ಟಡ ಸಮುಚ್ಚಯವನ್ನು ಉದ್ಯಾನದೊಳಗೆ ವಿಸ್ತರಿಸುವ ಪ್ರಸ್ತಾವವನ್ನು, ಸಾರ್ವಜನಿಕರು ಹಾಗೂ ಪರಿಸರವಾದಿಗಳ ವಿರೋಧದಿಂದ ಕೈಬಿಡಲಾಗಿತ್ತು. ಪ್ರಸ್ತುತ, ಬೇರೊಂದು ಸ್ಥಳದಲ್ಲಿ ನ್ಯಾಯಾಂಗ ಸಮುಚ್ಚಯವನ್ನು ನಿರ್ಮಿಸಬೇಕೆನ್ನುವ ಬೆಂಗಳೂರು ವಕೀಲರ ಸಂಘದ ಚಿಂತನೆ ಸ್ವಾಗತಾರ್ಹ. ಇದರಿಂದಾಗಿ, ಪ್ರಸಕ್ತ ಕಟ್ಟಡದಲ್ಲಿ ಇರುವ ಸ್ಥಳಾವಕಾಶ ಹಾಗೂ ಸೌಲಭ್ಯಗಳ ಕೊರತೆ ನಿವಾರಣೆಯಾಗಲಿದೆ. ಐತಿಹಾಸಿಕ ಕಟ್ಟಡದಲ್ಲಿನ ಧಾರಣಾ ಸಾಮರ್ಥ್ಯದ ಕೊರತೆ, ಹೈಕೋರ್ಟ್ ಸ್ಥಳಾಂತರವನ್ನು ಅನಿವಾರ್ಯವಾಗಿಸಿದೆ.

ಮಹಾನಗರದ ವ್ಯಾಪ್ತಿಯಲ್ಲೇ ಹೈಕೋರ್ಟ್‌ಗೆ ಹೊಸ ಜಾಗ ಗುರ್ತಿಸಬೇಕೆನ್ನುವ ಚಿಂತನೆ ಸರಿಯಾದುದು. ಹಾಗೆಯೇ, ಸ್ಥಳಾಂತರದಿಂದ ತೆರವುಗೊಳ್ಳುವ ಕಟ್ಟಡವನ್ನು ಏನು ಮಾಡಬೇಕೆನ್ನುವ ವಿಷಯವೂ ಮುಖ್ಯವಾದುದು. ಐತಿಹಾಸಿಕ ಸ್ಮಾರಕದ ರೂಪದಲ್ಲಿ ಕೆಂಪು ಕಟ್ಟಡವನ್ನು ಸಂರಕ್ಷಿಸಬಹುದಾಗಿದೆ ಹಾಗೂ ವಾಹನ ನಿಲುಗಡೆ ಪ್ರದೇಶವನ್ನು ತೋಟಗಾರಿಕಾ ಇಲಾಖೆಗೆ ಹಿಂತಿರುಗಿಸಬಹುದಾಗಿದೆ. ಸಂಗ್ರಹಾಲಯದ ರೂಪದಲ್ಲಿಯೂ ಪಾರಂಪರಿಕ ಕಟ್ಟಡವನ್ನು ಬಳಸಿಕೊಳ್ಳಬಹುದಾಗಿದೆ. ತನ್ನ ಹಸುರುವಲಯದಲ್ಲಿ ಒಂದಿಂಚು ಪ್ರದೇಶವನ್ನೂ ಕಳೆದುಕೊಳ್ಳುವ ಸ್ಥಿತಿಯಲ್ಲಿ ಇಂದಿನ ಬೆಂಗಳೂರು ಇಲ್ಲ. ಗಿಡಮರಗಳು, ಜೀವವೈವಿಧ್ಯ ಹಾಗೂ ಸಾರ್ವಜನಿಕರಿಗೆ ಲವಲವಿಕೆಯ ತಾಣವಾಗಿ ಕಬ್ಬನ್ ಉದ್ಯಾನವನ್ನು ಉಳಿಸಿಕೊಳ್ಳುವುದು ಮುಖ್ಯ. ಕಾಂಕ್ರೀಟು ರಚನೆಗಳು ಮತ್ತು ಆಡಳಿತದ ಚಟುವಟಿಕೆಗಳ ದಟ್ಟಣೆಯ ಪ್ರದೇಶವಾಗಿ ಉದ್ಯಾನ ಉಳಿಯಬಾರದು. ಹೈಕೋರ್ಟ್ ಸ್ಥಳಾಂತರ ಆಡಳಿತಾತ್ಮಕ ಅನುಕೂಲದ ವಿಷಯವಷ್ಟೇ ಆಗಿರದೆ, ನ್ಯಾಯಾಂಗ ಪ್ರಕ್ರಿಯೆಯನ್ನು ಹೆಚ್ಚು ಸುರಳೀತಗೊಳಿಸುವ ಹಾಗೂ ಬೆಂಗಳೂರಿನ ಹಸುರು ವಲಯವನ್ನು ಸಂರಕ್ಷಿಸುವ ಮಹತ್ವದ ನಿರ್ಧಾರವೂ ಆಗಲಿದೆ.

ಜಾಲಾಡಿ

ಮಹಿಳಾಶಕ್ತಿ ಮರೆಯದಿರಿ



ಪಟ್ಟಭದ್ರ ಶಕ್ತಿಗಳೆಲ್ಲ ಒಂದಾಗಿ ಮುಖ್ಯಮಂತ್ರಿ ಬದಲಾವಣೆಯ ಸುದ್ದಿಯನ್ನು ಊರ ತುಂಬ ಹಬ್ಬಿಸುತ್ತಿದ್ದಾರೆ. ಸಿದ್ದರಾಮಯ್ಯ ಅವರನ್ನು ಪದಚ್ಯುತಗೊಳಿಸುವ ಶಕ್ತಿಗಳಿಗೆ ರಾಜ್ಯದ ಮಹಿಳೆಯರ ಶಾಪವಿರುತ್ತದೆ. ಇದನ್ನು ತಿಳಿದರೆ ಒಳ್ಳೆಯದು.

ಕೆ.ಪಿ. ನಟರಾಜ್, ಕವಿ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಭಾರತ ಇಬ್ಭಾಗ ಆಗಲು ಮಹಾತ್ಮ ಗಾಂಧಿ ಕಾರಣವೇ ಅಲ್ಲ. ಭಾರತವನ್ನು ಇಬ್ಭಾಗ ಮಾಡಲು ಮೊಟ್ಟ ಮೊದಲ ಬೇಡಿಕೆ ಇಟ್ಟಿದ್ದೇ ಸಾವರ್ಕರ್; ಮಹಾತ್ಮ ಗಾಂಧಿ ಅವರಲ್ಲ.

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಶುಕ್ರವಾರ, 3-11-2000

● **ಮನೆಗೇ ನೇರ ಟಿವಿ ಪ್ರಸಾರಕ್ಕೆ ಸಂಪುಟ ಒಪ್ಪಿಗೆ**

ನವದೆಹಲಿ, ನ. 2 (ಪಿಟಿಐ)– ದೇಶದ ಟಿವಿ ಪ್ರಸಾರದಲ್ಲಿ ಕ್ರಾಂತಿ ಮಾಡಬಹುದಾದ 'ಮನೆಗೇ ನೇರವಾಗಿ ಪ್ರಸಾರ' ಮಾಡುವ (ಡೈರೆಕ್ಟ್ ಟು ಹೋಮ್ ಅಥವಾ ಡಿಟಿಎಚ್) ಟೆಲಿವಿಷನ್ ಸೌಲಭ್ಯಕ್ಕೆ ಕೇಂದ್ರ ಸಚಿವ ಸಂಪುಟ ಇಂದು ಒಪ್ಪಿಗೆ ನೀಡಿತು.

ಈ ಅನುಮತಿಯ ಜತೆಗೆ ಈ ಕ್ಷೇತ್ರಕ್ಕೆ ಆಕರ್ಷಿಸಬಹುದಾದ ವಿದೇಶಿ ನೇರ ಬಂಡವಾಳದ ಮಿತಿಯನ್ನು ಶೇ 49ಕ್ಕೆ ನಿಗದಿ ಮಾಡಲಾಗಿದೆ. ಮಾತ್ರವಲ್ಲದೆ, ರಾಷ್ಟ್ರದ ಭದ್ರತೆ ಮತ್ತು ನೈತಿಕತೆಯನ್ನು ಕಾಪಾಡುವ ರೀತಿಯಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಟೆಲಿವಿಷನ್ ಸೌಲಭ್ಯಗಳ ವಿತರಣೆಯಲ್ಲಿ ಏಕಸ್ವಾಮ್ಯ ತಡೆಯಲು ಕೂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

● **ಸಿದ್ಧ ಉಡುಪು: ನಿರ್ಬಂಧ ರದ್ದು– ಹೊಸ ಜವಳಿ ನೀತಿ**

ನವದೆಹಲಿ, ನ. 2– ಕೇಂದ್ರ ಸರ್ಕಾರ ಇಂದು ಪ್ರಕಟಿಸಿದ ಮಹತ್ವದ ಹೊಸ ಜವಳಿ ನೀತಿಯಲ್ಲಿ, ಸಿದ್ಧ ಉಡುಪುಗಳ ಉದ್ಯಮವನ್ನು ಸಣ್ಣ ಕೈಗಾರಿಕಾ ಕ್ಷೇತ್ರಕ್ಕಷ್ಟೇ ಸೀಮಿತಗೊಳಿಸಿ ಹೇರಲಾಗಿದ್ದ ನಿರ್ಬಂಧ ಮತ್ತು ಆ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ವಿಧಿಸಲಾಗಿದ್ದ ಶೇ 24ರ ಮಿತಿಯನ್ನು ತೆಗೆದು ಹಾಕಲಾಗಿದೆ.

ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಸಚಿವ ಸಂಪುಟದ ಸಭೆ ಈ ಹೊಸ ಜವಳಿ ನೀತಿಗೆ ಅಂಗೀಕಾರ ನೀಡಿತು.

75 ವರ್ಷಗಳ ಹಿಂದೆ

ಶುಕ್ರವಾರ, 3-11-1950

● **ಆಧುನಿಕ ಕ್ರಾಂತಿ ಸಾಹಿತಿ ಜಾರ್ಜ್ ಬರ್ನಾಡ್ ಷಾ ನಿಧನ**

ಅಯಾಟ್-ಸೇಂಟ್ ಲಾರೆನ್ಸ್, ನ. 2– ವಿಲಿಯಂ ಷೇಕ್ಸ್‌ಪಿಯರ್ ನಂತರ ಅತ್ಯಂತ ಪ್ರಸಿದ್ಧ ನಾಟಕಕಾರರಾದ ಜಾರ್ಜ್ ಬರ್ನಾಡ್ ಷಾ ಅವರು, ಈ ದಿನ ಬೆಳಗಿನ ಜಾವ 4 ಗಂಟೆ 59 ನಿಮಿಷಕ್ಕೆ (ಗ್ರೀನ್‌ವಿಚ್ ಕಾಲಮಾನ) ತಮ್ಮ ಗೃಹದಲ್ಲಿ ನಿಧನರಾದರು. ಅವರಿಗೆ 94 ವರ್ಷ ವಯಸ್ಸಾಗಿತ್ತು.

ಕ್ರಿಮಿಯಾ ಯುದ್ಧಕಾಲದ 1856ರಲ್ಲಿ ಜನಿಸಿದ, 'ಜಿಬಿಎಸ್' ಅಣುಬಾಂಬಿನ ನಮ್ಮ ಕಾಲದವರೆಗೂ ಜೀವಿಸಿದ್ದ ಬರ್ನಾಡ್ ಷಾ ಈ ಸುದೀರ್ಘ ಕಾಲದಲ್ಲಿ ಜೀವನದ ಅನೇಕ ಉಬ್ಬರವಿಳಿತಗಳನ್ನು ಎದುರಿಸಿ, ಗೆದ್ದು, 'ಆಂಗ್ಲ ಸಾಹಿತ್ಯ ಋಷಿ' ಎನಿಸಿಕೊಂಡರು.

ಗಾಂಧಿನಿಂದನೆಯ ಅಪ್ರಾಮಾಣಿಕತೆ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

'ಗಾಂಧಿಯನ್ನು ಪ್ರಶ್ನಿಸಬಾರದೇ?' ಎನ್ನುವ ಸಂಘ ಪರಿವಾರ ಮತ್ತು ಪರಿವಾರವಾದಿ ದೃಷ್ಟಿಕೋನದ ಗಾಂಧಿನಿಂದಕರ ಪ್ರಶ್ನೆಗೆ ಉತ್ತರ: ಈಗಷ್ಟೇ ಅಲ್ಲ, ಬದುಕಿದ್ದ ಕಾಲದಲ್ಲೂ ಗಾಂಧಿ ಪ್ರಶ್ನೆಗೊಳಗಾಗಿದ್ದರು. ಈಗಲೂ ಪ್ರಶ್ನೆಗೊಳಗಾಗುತ್ತಿದ್ದಾರೆ.

ಭಗತ್ ಸಿಂಗ್, ಚಂದ್ರಶೇಖರ ಆಜಾದ್, ಅಂಬೇಡ್ಕರ್, ಸುಭಾಷ್‌ಚಂದ್ರ ಬೋಸ್, ಗಾಂಧಿಯವರ ಜೊತೆಯಲ್ಲೇ ಇದ್ದ ಸರೋಜಿನಿ ನಾಯ್ಡು, ರಾಜಾಜಿ, ನೆಹರೂ ಕೂಡ ಪ್ರಶ್ನಿಸಿದ್ದರು. ವಿದೇಶೀಯರೂ ಪ್ರಶ್ನಿಸಿದ್ದರು. ಇವತ್ತಿಗೂ ಮಾರ್ಕ್ಸ್‌ವಾದಿಗಳು ಮತ್ತು ಅಂಬೇಡ್ಕರ್‌ವಾದಿಗಳು ಗಾಂಧಿಯವರನ್ನು ತಮ್ಮದೇ ಕಾರಣ, ದೃಷ್ಟಿಕೋನಗಳ ಆಧಾರದಲ್ಲಿ ಟೀಕಿಸುತ್ತಾರೆ. ಆದರೆ, ಇವರು ಯಾರೂ ಗಾಂಧಿ ನಿಂದಕರಲ್ಲ. ಸಂಘ ಪರಿವಾರದವರೆಲ್ಲರೂ ಹೇಳುವ ವಸ್ತುವನ್ನೇ ಆಧರಿಸಿ ಗಾಂಧಿಯವರನ್ನು ವಿರೋಧಿಸಿದ್ದು ಸಾವರ್ಕರ್ ಮತ್ತು ಹಿಂದೂ ಮಹಾಸಭಾ. ಅವರಲ್ಲೂ ವೈಚಾರಿಕ ಸ್ಪಷ್ಟತೆ ಇದೆ. ಅಸ್ಪಷ್ಟತೆಯನ್ನೇ ಗಾಂಧಿನಿಂದನೆಯ ಕಾಯಂ ವ್ಯವಸ್ಥೆಯಾಗಿ ಮಾಡಿಕೊಂಡಿರುವುದು ಪರಿವಾರ ಮತ್ತು ಪರಿವಾರದ ಬೆಂಬಲಿಗರು.

ಆರ್‌ಎಸ್‌ಎಸ್‌ನ ಹಿರಿಯ ಚಿಂತಕರ ಬಳಿ ಕೇಳಿದರೆ, 'ನಮಗೆ ಗಾಂಧಿಯವರ ಕೆಲವು ವಿಷಯಗಳಲ್ಲಿ ಭಿನ್ನಾಭಿಪ್ರಾಯವಿದೆ. ಆದರೆ, ಗಾಂಧಿಯವರ ಬಗ್ಗೆ ಗೌರವವಿದೆ' ಎನ್ನುತ್ತಾರೆ. ಆದರೆ, ಗಾಂಧಿಯವರ ಮೇಲೆ ಭಿನ್ನಾಭಿಪ್ರಾಯ ಇರುವ ಕೆಲವು ವಿಷಯಗಳು ಯಾವುದು ಎಂದು ಹೇಳುವುದೇ ಇಲ್ಲ. 'ಕೆಲವು' ಅನ್ನುವುದು ಅಸ್ಪಷ್ಟ. 'ನಾವು ಹಿಂಸೆಯನ್ನು ಒಪ್ಪುವುದಿಲ್ಲ. ಆದರೆ, ಕೆಲವೊಮ್ಮೆ ಕ್ರಿಯೆಗೆ ಪ್ರತಿಕ್ರಿಯೆಯಾಗಿ ಹಿಂಸೆ ನಡೆಯುವುದು ಸಹಜ' ಎನ್ನುವ ನಿಲುವನ್ನು ತೆಗೆದುಕೊಳ್ಳುತ್ತಾರೆ. 'ಹಿಂಸೆಯನ್ನು ಒಪ್ಪುವುದಿಲ್ಲ' ಎಂದ ಮೇಲೆ ಹಿಂಸೆಯನ್ನು ವಿರೋಧಿಸಬೇಕಾಗುತ್ತದೆ. ಹಿಂಸೆಯನ್ನು ವಿರೋಧಿಸಿದಾಗಲೂ ಕ್ರಿಯೆಗೆ ಪ್ರತಿಕ್ರಿಯೆಯಾಗಿ ಹಿಂಸೆ ನಡೆದಾಗ ಅದನ್ನು ಸಹಜ ಎನ್ನಬಹುದು. ಆದರೆ, ಹಿಂಸೆಯನ್ನು ಒಪ್ಪುವುದಿಲ್ಲ ಎನ್ನುವವರು ಹಿಂಸೆಯನ್ನು ವಿರೋಧಿಸುತ್ತೇವೆ ಎನ್ನುವುದಿಲ್ಲ. ಆಗ ಕ್ರಿಯೆಗೆ ಪ್ರತಿಕ್ರಿಯೆಯಾಗಿ ಹಿಂಸೆ ನಡೆದಾಗ ಒಂದು ಶಕ್ತಿ ಬಣವಾಗಿ ಪರಿವಾರದ ನಿಲುವು ಏನು? ವಿರೋಧವೋ? ಸಮರ್ಥನೆಯೊ? ನಿಷ್ಕ್ರಿಯತೆಯೊ? ಸೈದ್ಧಾಂತಿಕ ಅಸ್ಪಷ್ಟತೆಯ ನಡುವೆಯೂ ಇಂತಹ ಸಂದರ್ಭದಲ್ಲಿ ಆರ್‌ಎಸ್‌ಎಸ್ ಸಾರ್ವಜನಿಕ ತಟಸ್ಥ ಧೋರಣೆಯನ್ನು ಕಾಪಾಡಿಕೊಂಡರೆ, ಇತರ ಪರಿವಾರ ಸಂಘಟನೆಗಳು ಹಿಂಸೆಯನ್ನು ಸಮರ್ಥಿಸಿಕೊಂಡು ವರ್ತಿಸುತ್ತವೆ. ಆಗ ಆರ್‌ಎಸ್‌ಎಸ್‌ನ ಮೌನವು 'ಮೌನ ಸಮ್ಮತಿ' ಅರ್ಥವನ್ನು ಕೊಡುತ್ತದೆ. ಅಂದಮೇಲೆ, 'ಹಿಂಸೆಯನ್ನು ಒಪ್ಪುವುದಿಲ್ಲ' ಎನ್ನುವ ನಿಲುವು ವಾಸ್ತವದಲ್ಲಿ ಬಿದ್ದು ಹೋಗುತ್ತದೆ. ಇದರ ಬದಲಿಗೆ ಸಾವರ್ಕರ್ ಅವರ ಹಾಗೆ ಉದ್ದೇಶ ಈಡೇರಿಕೆಗೆ ಹಿಂಸೆಯನ್ನು ಒಪ್ಪುತ್ತೇನೆ ಎಂದರೆ ವೈಚಾರಿಕ ಸ್ಪಷ್ಟತೆ ಇರುತ್ತದೆ.

'ಗಾಂಧಿಯವರೂ ವಿಮರ್ಶೆಗೆ ಅರ್ಹರೇ' ಎಂಬ ನಿಲುವು ಸಾರ್ವತ್ರಿಕ ಮಾನ್ಯತೆ ಇರುವಂತಹದ್ದಾಗಿದೆ. ಆದರೆ, ವಿಮರ್ಶೆ 'ನಿಜವಾದದ್ದರ' ಮೇಲಿರುತ್ತದೆಯೇ ಹೊರತು, ಸುಳ್ಳುಗಳನ್ನು ಸೃಷ್ಟಿಸಿ ಆ ಸುಳ್ಳುಗಳನ್ನು ಸತ್ಯವೆಂದು ಪ್ರತಿಪಾದಿಸಿ ವಿಮರ್ಶಿಸುವುದಾಗಿರುವುದಿಲ್ಲ. ಆದರೆ, ಪರಿವಾರ ಮತ್ತು ಪರಿವಾರದ ಬೆಂಬಲಿಗರನೇಕರು ಗಾಂಧಿಯವರ ಕುರಿತ ಸುಳ್ಳುಗಳನ್ನು ಸೃಷ್ಟಿಸಿ ಹಂಚಿಕೊಂಡು, 'ಗಾಂಧಿಯನ್ನು ಪ್ರಶ್ನಿಸಬಾರದಾ?' ಎನ್ನುವವರು. ಈ ಬಗ್ಗೆ ಆರ್‌ಎಸ್‌ಎಸ್‌ನ ಹಿರಿಯರು, 'ಕೆಲವರು ಅಂತಹವರಿದ್ದಾರೆ. ಅಂತಹವರಿಗೆ ಎಷ್ಟೆಂದು ಹೇಳಬಹುದು. ಹೇಳಿ ಸರಿ ಮಾಡಲು ಆಗುವುದಿಲ್ಲ. ತಪ್ಪುಗಳನ್ನು ಸಮಾಜ ಪ್ರಶ್ನಿಸುತ್ತದೆ. ಸಮಾಜ ಪ್ರಶ್ನಿಸಿದಂತೆಲ್ಲ ತಪ್ಪು ಮಾಡುವವರು ಅಲ್ಲಲ್ಲೇ ತಮ್ಮನ್ನು ತಿದ್ದಿಕೊಳ್ಳುತ್ತಾ ಸರಿಹೋಗುತ್ತಾರೆ' ಎಂಬ ಉತ್ತರ ಬರುತ್ತದೆ. ವೈಚಾರಿಕವಾಗಿ ಸಮಂಜಸವಾದ ಉತ್ತರವಿದು. ಆದರೆ ತಪ್ಪು ಮಾಡುವವರನ್ನು ತಿದ್ದಿ ಬುದ್ಧಿ ಹೇಳಿ ಸರಿ ಮಾಡಲು ಆಗುವುದಿಲ್ಲ ಎನ್ನುವುದರ ಅರ್ಥ, ತನ್ನ ನಿಲುವು ಇಂತಹದ್ದೇ ಆಗಿದೆ ಎಂದು ಸ್ಪಷ್ಟಪಡಿಸಲು ಆಗುವುದಿಲ್ಲ ಎಂದಲ್ಲ. ಗಾಂಧಿಯವರ ಮೇಲೆ ಸುಳ್ಳು ಸೃಷ್ಟಿಗಳು ನಡೆದಾಗ, ಸುಳ್ಳು ಸೃಷ್ಟಿಯನ್ನು ತಾನು ಒಪ್ಪುವುದಿಲ್ಲ ಎನ್ನುವ ಜವಾಬ್ದಾರಿ ಆರ್‌ಎಸ್‌ಎಸ್‌ಗೆ ಇರುತ್ತದೆ. ಅಥವಾ ಸುಳ್ಳು ಸೃಷ್ಟಿಯನ್ನು ಒಪ್ಪುತ್ತೇವೆ ಎಂದೂ ಹೇಳಬಹುದು. ಈ ವಿಷಯದಲ್ಲೂ ತಟಸ್ಥ ಧೋರಣೆ! ತಾಟಸ್ಥ್ಯ ಮೌನ ಸಮ್ಮತಿಯಲ್ಲವೇ?

> ಗಾಂಧಿಯನ್ನು ಪ್ರಶ್ನಿಸುವುದು ಸಂವಾದ ಸಂಸ್ಕೃತಿ. ಗಾಂಧಿನಿಂದನೆ ವಿಕೃತಿ. ಗಾಂಧಿನಿಂದನೆಯ ಪರಿವಾರವಾದಿಗಳ ವೈಚಾರಿಕತೆ ಅಪ್ರಾಮಾಣಿಕವಾದುದು. ಇನ್ನೊಬ್ಬರನ್ನು ಹೀಯಾಳಿಸುವ ಮೂಲಕ ತಮ್ಮ ಅಪ್ರಾಮಾಣಿಕತೆ ಮರೆಮಾಚುವ ಪ್ರಯತ್ನ ಅವರದು.

'ಗಾಂಧಿಯವರ ಕೆಲವು ವಿಷಯಗಳನ್ನು ಒಪ್ಪುವುದಿಲ್ಲ' ಎನ್ನುವ ಹೇಳಿಕೆಯಲ್ಲಿ, 'ಮುಸ್ಲಿಂ ಓಲೈಕೆ' ವಿಷಯ ಬರುತ್ತದೆ. ಗಾಂಧಿಯವರು ಬಹುಸಂಖ್ಯಾತರ ಪರಮಾಧಿಕಾರವನ್ನು ಪ್ರತಿಪಾದಿಸಲಿಲ್ಲ ಎನ್ನುವುದು ನಿಜ. ಸಾವರ್ಕರ್ ಬಹುಸಂಖ್ಯಾತರ ಪರಮಾಧಿಕಾರ ಪ್ರತಿಪಾದಿಸಿದ್ದರೆಂಬುದೂ ನಿಜ. ಆದರೆ, ಗಾಂಧಿಯವರು ಮುಸ್ಲಿಂ ಓಲೈಕೆ ಮಾಡಿರಲಿಲ್ಲ. ಖಿಲಾಫತ್ ಚಳವಳಿಯ ವಿಫಲ ಪ್ರಯತ್ನದ ನಂತರ ಆ ಚಳವಳಿಯಲ್ಲಿ ಗಾಂಧಿಯವರೊಂದಿಗಿದ್ದ ಅಲಿ ಸಹೋದರರಿಗೆ ಕಹುಟಾ ಕೋಮುಗಲಭೆಯನ್ನು ನೀವೇ ಮಾಡಿಸಿದ್ದು ಎಂದು ಹೇಳಿದ ಗಾಂಧಿ, ಅವರಿಂದ ದೂರವಾಗುತ್ತಾರೆ. ಜಿನ್ನಾ ಅವರ ದ್ವಿರಾಷ್ಟ್ರ ಸಿದ್ಧಾಂತವನ್ನು ಸಾವರ್ಕರ್ ಒಪ್ಪಿದಾಗಲೂ ಗಾಂಧಿ ಒಪ್ಪಲಿಲ್ಲ. ನೇರ ಕಾರ್ಯಾಚರಣೆಯಲ್ಲಿ ಮತಾಂಧರಿಂದ ಹತ್ಯೆಗಳು ನಡೆದಾಗ ಪೊಲೀಸರನ್ನು ನಿಷ್ಕ್ರಿಯಗೊಳಿಸಿದ್ದ ವೈಸರಾಯ್‌ರನ್ನು ಗಾಂಧಿ ತರಾಟೆಗೆ ತೆಗೆದುಕೊಂಡಿದ್ದರು. ಗಾಂಧಿ ಹತ್ಯೆ ನಡೆಯದೆ ಇದ್ದರೆ ಆಮೇಲಿನ 20 ದಿನಗಳಲ್ಲಿ ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿದ್ದ ಹಿಂಸೆಯನ್ನು ತಡೆಯಲು ಗಾಂಧಿ ಪಾಕಿಸ್ತಾನಕ್ಕೆ ಹೋಗುವವರಿದ್ದರು.

ಪರಿವಾರವಾದಿಗಳು ಗಾಂಧಿಯವರಿಂದ ಮುಸ್ಲಿಂ ಓಲೈಕೆ ಎನ್ನುವುದು ನಿರ್ದಿಷ್ಟ ಸಂದರ್ಭವನ್ನು ನಿಭಾಯಿಸಲು ಅವರಾಡಿದ ಮಾತುಗಳನ್ನು ಮಾತ್ರ. ಉದಾಹರಣೆಗೆ, ಮಾಪಿಳ್ಳೆ ದಂಗೆಯ ಬಗ್ಗೆ, 'ಮಾಪಿಳ್ಳೆಗಳು ತಮ್ಮ ನಂಬಿಕೆಗನುಸಾರವಾಗಿ ನಡೆದುಕೊಂಡರು' ಎಂದು ಗಾಂಧಿ ಹೇಳಿದ್ದರು. ಇದು ಆ ಸಂದರ್ಭದ ಹೇಳಿಕೆ. ಇದನ್ನಷ್ಟೇ ಗಮನಿಸಿದರೆ ಗಾಂಧಿ ಮುಸ್ಲಿಂ ಓಲೈಕೆ ಮಾಡಿದ್ದಾರೆ ಅನಿಸುತ್ತದೆ. ದಂಗೆಯ ನಂತರ, 'ಮುಸ್ಲಿಮರು ಪುಂಡರು. ಹಿಂದೂಗಳು ಪುಕ್ಕಲರು' ಎಂದೂ ಗಾಂಧಿ ಹೇಳಿದ್ದಾರೆ. ಇದೂ ಒಂದು ಸಂದರ್ಭದ ಹೇಳಿಕೆ. ತರಗತಿಯಲ್ಲಿ ಅಧ್ಯಾಪಕರು ವಿದ್ಯಾರ್ಥಿ ತಪ್ಪು ಮಾಡಿದಾಗ, 'ಹೀಗೆ ಮಾಡಿದರೆ ನೀನು ಉದ್ಧಾರ ಆಗುವುದಿಲ್ಲ' ಎಂದರೆ, ಆ ವಿದ್ಯಾರ್ಥಿ ಎಂದೂ ಉದ್ಧಾರ ಆಗಬಾರದು ಎನ್ನುವುದು ಅಧ್ಯಾಪಕರ ಧೋರಣೆಯಾಗಿದೆ ಎಂದರ್ಥವಲ್ಲ. ನಿರ್ದಿಷ್ಟ ಸಂದರ್ಭದ ಮಾತುಗಳು ಸೈದ್ಧಾಂತಿಕ ನಿಲುವು ಆಗಿರುವುದಿಲ್ಲ.


ಗಾಂಧಿ ಹಿಂದೂ ಓಲೈಕೆ ಮಾಡಿದ್ದಾರೆ ಎಂದೂ ವಾದಿಸಬಹುದು. ಸಾವರ್ಕರ್ ಒಪ್ಪದ, ಆದರೆ ಪರಿವಾರವಾದಿಗಳು ಪ್ರತಿಪಾದಿಸುವ ಗೋಹತ್ಯಾ ನಿಷೇಧವನ್ನು ಗಾಂಧಿ ಸೈದ್ಧಾಂತಿಕವಾಗಿಯೇ ಪ್ರತಿಪಾದಿಸುತ್ತಾರೆ. ಹಾಗಿದ್ದರೆ ಅವರು ಹಿಂದೂ ಓಲೈಕೆಯವರೇ?

'ಅಹಿಂಸಾವಾದಿಯಾದ ನೀವು ಯುದ್ಧವನ್ನು ಬೋಧಿಸುವ ಭಗವದ್ಗೀತೆಯನ್ನು ಹೇಗೆ ಒಪ್ಪುತ್ತೀರಿ?' ಎಂದು ಆಚಾರ್ಯ ರಜನೀಶ್ ಕೇಳಿದಾಗ, 'ಭಗವದ್ಗೀತೆಯು ಪ್ರತ್ಯಕ್ಷ ಯುದ್ಧವನ್ನು ಹೇಳುವುದಿಲ್ಲ. ಅದು ಒಬ್ಬನೇ ಮನುಷ್ಯನ ಒಳಗಿನ ಅಂತರಂಗದ ಯುದ್ಧವನ್ನು ಹೇಳುತ್ತದೆ' ಎಂದು ಉತ್ತರಿಸುತ್ತಾರೆ. ಗಾಂಧಿಯವರ ಉತ್ತರವನ್ನು ಸ್ವೀಕರಿಸುವುದು-ಬಿಡುವುದು ಬೇರೆ ಮಾತು. ಆದರೆ ಅವರು ಭಗವದ್ಗೀತೆಯನ್ನು ತಾಯಿ ಎಂದಿದ್ದಾರೆ, ಆದ್ದರಿಂದ ಅವರು ಹಿಂದೂ ಓಲೈಕೆ ಮಾಡುತ್ತಿದ್ದಾರೆ ಎಂದರೆ ಅದೆಷ್ಟು ಅರ್ಥಹೀನವೋ, ಸಾಂದರ್ಭಿಕ ಮಾತುಗಳನ್ನಿರಿಸಿಕೊಂಡು ಗಾಂಧಿ ಮುಸ್ಲಿಂ ಓಲೈಕೆ ಮಾಡಿದ್ದಾರೆ ಎನ್ನುವುದೂ ಅರ್ಥಹೀನ.

ಪಾಕಿಸ್ತಾನಕ್ಕೆ 55 ಕೋಟಿ ರೂಪಾಯಿ ಕೊಡಲು ಗಾಂಧಿ ಉಪವಾಸ ಕೂತರು, ಅದು ಮುಸ್ಲಿಂ ಓಲೈಕೆ ಎನ್ನುವುದೊಂದು ತರ್ಕ. ಭಾರತದ ರಿಸರ್ವ್ ಬ್ಯಾಂಕ್‌ನಲ್ಲಿ ಭದ್ರತಾ ಠೇವಣಿಯಾಗಿ ಇದ್ದ ಹಣದಲ್ಲಿ ಪಾಕಿಸ್ತಾನ ವಿಭಜನೆಯಾದಾಗ ಅದರ ಪಾಲನ್ನು ಕೊಡಬೇಕು ಎನ್ನುವುದು ಭಾರತ ಸ್ವಾತಂತ್ರ್ಯ ಶಾಸನದೊಂದಿಗೆ ಸೇರಿದ ಕಾನೂನು. ಕೊಡಬೇಕಾದ್ದನ್ನು ಕೊಟ್ಟುಬಿಡಿ ಎನ್ನುವುದು ತತ್ವಗಳೇ ತಂತ್ರಗಳೂ ಆಗಿದ್ದ ಗಾಂಧಿಯವರ ಸೈದ್ಧಾಂತಿಕ ನಿಲುವೇ ಹೊರತು ಓಲೈಸುವ ಉದ್ದೇಶದ್ದಲ್ಲ. ಆದರೆ ಪರಿವಾರವಾದಿಗಳು ಅದು ಪಾಕಿಸ್ತಾನಕ್ಕೆ ಸಲ್ಲುವ ಕಾನೂನುರೀತ್ಯ ಧನವಾಗಿತ್ತು ಎಂಬುದನ್ನು ಜಾಣತನದಿಂದ ಮರೆಮಾಚಿಯೇ ಮಾತನಾಡುತ್ತಾರೆ.

ಪರಿವಾರವಾದಿಗಳ ಸಾಮಾನ್ಯ ಲಕ್ಷಣ, ಅವರದೇ ನಿಲುವನ್ನು ಅವರ ಕಡೆಯವರೇ ಉಲ್ಲಂಘಿಸಿದರೆ ಸಮರ್ಥಿಸಿಕೊಳ್ಳುವುದಾಗಿದೆ. ಭ್ರಷ್ಟಾಚಾರದ ವಿಷಯ ಬಂದ ತಕ್ಷಣ ಆಚೆಯವನು ಮಾಡಿಲ್ಲವೇ ಎಂಬ ಸಮರ್ಥನೆ. ಲೈಂಗಿಕ ಹಗರಣಗಳ ವಿಷಯ ಬಂದ ತಕ್ಷಣ ನ್ಯಾಯಾಲಯದಿಂದ ತಡೆಯಾಜ್ಞೆ ತರುವುದು ನಡೆಯುತ್ತದೆ. ಇದೇ ಪರಿವಾರವಾದಿಗಳು ಮಹಿಳೆಯರ ವಸ್ತ್ರಗಳು ಹೇಗಿರಬೇಕು ಎಂದು ಹೇಳುತ್ತಾರೆ ಮತ್ತು ಅದನ್ನು ಧರ್ಮ, ಸಂಸ್ಕೃತಿ ಮತ್ತು ರಾಷ್ಟ್ರೀಯತೆಯೊಂದಿಗೆ ಜೋಡಿಸಿ ವಿವರಿಸುತ್ತಾರೆ. ಎಲ್ಲಕ್ಕೂ ಮುಖ್ಯವಾಗಿ, ಲೈಂಗಿಕ ನೈತಿಕತೆ ಉಳಿಸಿಕೊಳ್ಳದವರನ್ನು ಒಪ್ಪಿಕೊಂಡೇ ಇತರರಿಗೆ ಸಂಸ್ಕೃತಿ, ನೈತಿಕತೆಯ ಪಾಠ ಮಾಡುವುದು ಅಪ್ರಾಮಾಣಿಕತೆ.

ಕುದ್ಮಲ್ ರಂಗರಾವ್ ಅವರನ್ನು ಗುರು ಎಂದು ಕರೆದವರು ಗಾಂಧಿ. ಕುದ್ಮಲ್ ರಂಗರಾಯರನ್ನು ತುಚ್ಛೀಕರಣ ಮಾಡಿದವರಿದ್ದರು. ಗಾಂಧಿಯವರ ಅನುಯಾಯಿ ಕಾರ್ನಾಡ್ ಸದಾಶಿವ ರಾಯರನ್ನೂ ತುಚ್ಛೀಕರಣ ಮಾಡಿದವರಿದ್ದರು. ಆ ತುಚ್ಛೀಕರಣದ ಪ್ರವೃತ್ತಿಯೇ ಪರಿವಾರವಾದಿಗಳಲ್ಲೂ ಇದೆ. ಇನ್ನೊಬ್ಬರನ್ನು ಹೀಯಾಳಿಸಿ ವೈಚಾರಿಕ ಅಪ್ರಾಮಾಣಿಕತೆಯನ್ನು ಮುಚ್ಚಿಡುವುದೇ ಪರಿವಾರವಾದದ ಸಿದ್ಧಾಂತ ಇರುವಂತಿದೆ.



ವಾಚಕರ ವಾಣಿ

ಕಸ ಸುರಿಯುವ ಹಬ್ಬ: ಉಕ್ರೇನ್ ಮಾದರಿ

ಎಲ್ಲೆಂದರಲ್ಲಿ ಕಸ ಎಸೆಯುವವರ ಮನೆಗಳನ್ನು ಗುರುತಿಸಿ ಅಂಥ ಮನೆಯ ಎದುರೇ 'ಕಸ ಸುರಿಯುವ ಹಬ್ಬ'ವನ್ನು ಬೆಂಗಳೂರಿನಲ್ಲಿ ಆರಂಭಿಸಿದ 'ಘನತ್ಯಾಜ್ಯ ನಿರ್ವಹಣಾ ಸಂಸ್ಥೆ'ಯ ನಡೆಯನ್ನು (ಪ್ರ.ವಾ., ಅ. 31) ರಾಜ್ಯದ ಎಲ್ಲ ನಗರ, ಪಟ್ಟಣಗಳ ನಾಗರಿಕರೂ ಸ್ವಾಗತಿಸಲಿಕ್ಕೆ ಸಾಕು. ಅದೆಷ್ಟೊ ಕಡೆ ನಗರಪಾಲಿಕೆ–ಪುರಸಭೆಗಳ ಬೇಜವಾಬ್ದಾರಿ ಜಾಸ್ತಿಯೇ ಇರುತ್ತದೆ. ಕೆಲವೆಡೆ ಪೌರಕಾರ್ಮಿಕರೇ ಕಸದ ರಾಶಿಯನ್ನು ಚರಂಡಿಗೆ ತಳ್ಳುವುದನ್ನು, ಬೆಂಕಿ ಹಚ್ಚುವುದನ್ನು ನಾನೇ ರೆಕಾರ್ಡ್ ಮಾಡಿ ಆರೋಗ್ಯಾಧಿಕಾರಿಗೆ ದೂರು ಕೊಟ್ಟಿದ್ದೇನೆ. ಅವರೋ ತಮಗೆ 'ಕಸ ಎತ್ತುವ ಯಂತ್ರವಿಲ್ಲ, ಬಿಡಿಎ ನಮಗಿನ್ನೂ ಈ ಬಡಾವಣೆಯನ್ನು ಹಸ್ತಾಂತರಿಸಿಲ್ಲ, ಅದಿಲ್ಲ ಇದಿಲ್ಲ'ವೆಂದು ಮೇಲಿನವರತ್ತ ಬೊಟ್ಟು ಮಾಡುವಾಗ ನಾವೇನು ಮಾಡಲು ಸಾಧ್ಯ?

ಉಕ್ರೇನ್ ದೇಶದ ರಾಜಧಾನಿಯಲ್ಲಿ ಸಂಸತ್ ಸದಸ್ಯನನ್ನೇ ಹಿಡಿದು ಕಸದ ತೊಟ್ಟಿಗೆ ಬಿಸಾಕಿ ಆತನ ಮೇಲೆ ಮತ್ತಷ್ಟು ಕಸ ಸುರಿದ ಘಟನೆ 2014ರಲ್ಲಿ ನಡೆದಿತ್ತು (ಅಂತರ್ಜಾಲದಲ್ಲಿ ಅದರ ವಿಡಿಯೊ ಈಗಲೂ ಲಭ್ಯವಿದೆ). ನಮ್ಮಲ್ಲಿ ಅದೆಷ್ಟೊ ವರ್ಷಗಳಿಂದ ಸ್ಥಳೀಯ ಸಂಸ್ಥೆಗಳಿಗೆ ಜನಪ್ರತಿನಿಧಿಗಳೇ ಇಲ್ಲ. ನಾವೂ ಮೇಲಿನವರನ್ನು ಹುಡುಕಿಕೊಂಡು ಹೋಗೋಣವೇ ಉಕ್ರೇನ್ ಮಾದರಿಯ ಕಾರ್ಯಾಚರಣೆಗೆ?

ನಾಗೇಶ ಹೆಗಡೆ, ಕೆಂಗೇರಿ

ಕಡುಬಡತನ ನಿರ್ಮೂಲನದ ಪ್ರಹಸನ

ಕೇರಳ ರಾಜ್ಯವು 2021ರಲ್ಲಿ ಜಾರಿಗೊಳಿಸಿದ್ದ 'ಕಡುಬಡತನ ನಿರ್ಮೂಲನಾ ಕಾರ್ಯಕ್ರಮ'ದ ಫಲವಾಗಿ 2025ರಲ್ಲಿ ಅದು 'ಕಡುಬಡತನ ಮುಕ್ತ ರಾಜ್ಯ'ವಾಗಿದೆ. ಬಡತನಕ್ಕೆ ಕಾರಣವಾಗಿರುವ ಆಹಾರ, ಆರೋಗ್ಯ, ಆಸರೆ ಮತ್ತು ಶಿಕ್ಷಣದಲ್ಲಿನ ಕೊರತೆ ನಿವಾರಿಸಿ, ಸುಮಾರು 1.18 ಲಕ್ಷ ಕುಟುಂಬಗಳ ಕಡುಬಡತನವನ್ನು ಕೇರಳ ಕೊನೆಗಾಣಿಸಿದೆ. ಕೇರಳಕ್ಕೆ ಇದು ವಿಶೇಷ ಸಾಧನೆಯೇನಲ್ಲ. ಏಕೆಂದರೆ, 2019–21ರಲ್ಲಿ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ದತ್ತಾಂಶಗಳ ಆಧಾರದ ಮೇಲೆ ನೀತಿ ಆಯೋಗವು 2023ರಲ್ಲಿ 12 ಸೂಚಿಗಳನ್ನು ಆಧರಿಸಿದ ಬಹು ಆಯಾಮದ ಬಡತನ ಸೂಚ್ಯಂಕದ ವರದಿ ಸಿದ್ಧಪಡಿಸಿದೆ. ಇದರ ಪ್ರಕಾರ, ಕೇರಳದಲ್ಲಿನ ಕಡುಬಡತನದ ಪ್ರಮಾಣ ಶೇ 0.55. ಕೇರಳ ಅನುಸರಿಸುತ್ತಿರುವ ಬಡತನ ನಿವಾರಣಾ ನೀತಿ ಅಳವಡಿಸಿಕೊಂಡರೆ ಬಡತನವು ಅತ್ಯಧಿಕವಾಗಿರುವ ಬಿಹಾರ, ಜಾರ್ಖಂಡ್, ಉತ್ತರಪ್ರದೇಶ ಮಾತ್ರವಲ್ಲದೆ ಕರ್ನಾಟಕವೂ ಬಡತನ ಮುಕ್ತವಾಗಬಹುದು.

ಟಿ.ಆರ್. ಚಂದ್ರಶೇಖರ, ಬೆಂಗಳೂರು

ಕನ್ನಡ ಶಾಲೆ ಉಳಿವೇ ಕನ್ನಡದ ಗೆಲುವು

ಕನ್ನಡದ ಶ್ರೇಷ್ಠ ಸಾಹಿತಿಗಳ ಪರಿಚಯ ಮತ್ತು ಸಾಹಿತ್ಯಕ್ಕೆ ಇರುವ ಶಕ್ತಿಯು ತಂತ್ರಜ್ಞಾನ ಯುಗದಲ್ಲಿ ಕಣ್ಮರೆಯಾಗಬಹುದು ಎನ್ನುವ ಆತಂಕವಿದೆ. ಸದ್ಯ ಕನ್ನಡವನ್ನು ಉಳಿಸಬೇಕಾಗಿರುವುದು ನಾಮಫಲಕದ ಅಳವಡಿಕೆಯಿಂದಲ್ಲ. ಕನ್ನಡ ಮಾಧ್ಯಮ ಶಾಲೆಗಳಿಗೆ ಪ್ರೋತ್ಸಾಹ ನೀಡಿದರಷ್ಟೇ ಕನ್ನಡ ಉಳಿಯಲು ಸಾಧ್ಯ.

ಕಾರ್ತಿಕ್ ಕಾರ್ ಗದ್ದೆ, ಬೆಂಗಳೂರು

ವಿದ್ಯಾರ್ಥಿಗಳಿಗೆ ಆರೋಗ್ಯ ವಿಮೆ ಬೇಕು

ಶಾಲಾ ವಿದ್ಯಾರ್ಥಿಗಳೂ ಹೃದಯಾಘಾತದಿಂದ ಮೃತಪಡುತ್ತಿರುವ ಸುದ್ದಿಗಳು ವರದಿಯಾಗುತ್ತಿವೆ. ಇದು ಸಮಾಜಕ್ಕೆ ಎಚ್ಚರಿಕೆಯ ಗಂಟೆ. ಬದಲಾಗುತ್ತಿರುವ ಜೀವನಶೈಲಿಯಿಂದ ವಿದ್ಯಾರ್ಥಿಗಳಲ್ಲಿ ತೀವ್ರತರವಾದ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ದುರಂತವೆಂದರೆ, ಆರೋಗ್ಯದ ಬಗೆಗಿನ ನಿರ್ಲಕ್ಷ್ಯದಿಂದಲೋ, ಬಡತನದಿಂದಲೋ, ಸೌಲಭ್ಯದ ಕೊರತೆಯಿಂದಲೋ ಕಾಯಿಲೆಗಳನ್ನು ಸರಿಯಾದ ಸಮಯದಲ್ಲಿ ಗುರ್ತಿಸಲು ಸಾಧ್ಯವಾಗುತ್ತಿಲ್ಲ. ಕೆಲವೊಮ್ಮೆ ಗುರುತಿಸಿದರೂ, ಹಣಕಾಸಿನ ಸಮಸ್ಯೆಯಿಂದ ಚಿಕಿತ್ಸೆ ಪಡೆಯಲಾಗುತ್ತಿಲ್ಲ. ಹಾಗಾಗಿ, ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಆರೋಗ್ಯ ವಿಮಾ ಸೌಲಭ್ಯ ಒದಗಿಸಬೇಕಿದೆ.

ಪುನೀತ್ ಬಿ., ಅಜ್ಜಂಪುರ

ವಿಶ್ವವಿದ್ಯಾಲಯಕ್ಕೆ ಶರೀಫರ ಹೆಸರಿಡಲಿ

'ಕನ್ನಡದ ಕಬೀರ' ಎಂದು ಹೆಸರಾದ ಶಿಶುನಾಳ ಶರೀಫ ಸಾಹೇಬರು ನಾಡು ಕಂಡ ಮಹಾಪುರುಷರು. ತತ್ವಪದಗಳ ಮೂಲಕ ಧಾರ್ಮಿಕ ಸಮನ್ವಯ ಸಾರಿದ ಸಂತ. ಹಿಂದೂ–ಮುಸ್ಲಿಮರಿಬ್ಬರಿಗೂ ಅಚ್ಚುಮೆಚ್ಚಿನವರಾಗಿದ್ದಾರೆ. ಆದರೆ, ಕರ್ನಾಟಕದಲ್ಲಿ ಇಲ್ಲಿಯವರೆಗೆ ಅವರಿಗೆ ಸಲ್ಲಬೇಕಾದಷ್ಟು ಗೌರವ ಸರ್ಕಾರದಿಂದ ಸಂದಿಲ್ಲ. ಅವರ ಹೆಸರಿನಲ್ಲಿ ಎದ್ದು ಕಾಣುವ ಯಾವ ಗುರುತೂ ನಾಡಿನಲ್ಲಿಲ್ಲ. ವಿಶ್ವವಿದ್ಯಾಲಯವೊಂದಕ್ಕೆ ಅವರ ಹೆಸರಿಡುವ ಮೂಲಕ ಸೂಕ್ತ ಗೌರವ ಸಲ್ಲಿಸಬೇಕಿದೆ. ಕೋಮುವಾದದ ಕತ್ತಲು ಕವಿದಿರುವ ಈ ಸಮಯದಲ್ಲಿ ಇಂತಹ ದಿಟ್ಟಕ್ರಮ ಅತ್ಯಗತ್ಯವಾಗಿದೆ.

ರೇಷ್ಮಾಬಾನು ದೇಗಿನಾಳ, ಬಬಲೇಶ್ವರ

ನಾಡ ಧ್ವಜಾರೋಹಣ: ಗೊಂದಲ ತಪ್ಪಿಸಿ

ಎಲ್ಲೆಡೆ ಕನ್ನಡ ರಾಜ್ಯೋತ್ಸವ ಆಚರಿಸಲಾಗುತ್ತಿದೆ. ಆದರೆ, ಧ್ವಜಾರೋಹಣ ಕುರಿತಂತೆ ಗೊಂದಲ ತಲೆದೋರಿದೆ. ರಾಷ್ಟ್ರೀಯ ಧ್ವಜಸಂಹಿತೆಯ ಉಲ್ಲೇಖದಂತೆ ಕರ್ನಾಟಕ ಸರ್ಕಾರವು 2008ರಲ್ಲಿ 'ರಾಜ್ಯಗಳು ಪ್ರತ್ಯೇಕ ಧ್ವಜ ಹೊಂದುವುದು ಸಂಕುಚಿತ ಭಾವನೆಗೆ ಎಡೆ ಮಾಡಿಕೊಡುತ್ತದೆ. ಎಲ್ಲಾ ಸರ್ಕಾರಿ ಸಮಾರಂಭದಲ್ಲಿ ರಾಷ್ಟ್ರಧ್ವಜ ಮಾತ್ರ ಹಾರಿಸಬೇಕು' ಎಂದು ಆದೇಶಿಸಿತ್ತು. ಬೆಂಗಳೂರಿನಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರು, ರಾಷ್ಟ್ರಧ್ವಜ ಹಾಗೂ ನಾಡಧ್ವಜ ಹಾರಿಸಿದರು. ಕೆಲವು ಜಿಲ್ಲೆ, ತಾಲ್ಲೂಕಿನಲ್ಲಿ ರಾಷ್ಟ್ರಧ್ವಜ ಮಾತ್ರ ಹಾರಿಸಿದರೆ, ಇನ್ನುಳಿದೆಡೆ ಕೇವಲ ನಾಡಧ್ವಜ ಹಾರಿಸಲಾಗಿದೆ. ಈ ಗೊಂದಲ ಪರಿಹರಿಸಬೇಕಿದೆ.

ಸುರೇಂದ್ರ ಪೈ, ಭಟ್ಕಳ

ಚುರುಮುರಿ



ಸರ್ವಂ ಮಂತ್ರಮಯಂ!

● ಸುಮಂಗಲಾ

'ನಾ ಸಂಸ್ಕೃತ, ಪೂಜೆ ಮಂತ್ರ ಕಲೀತೀನಿ. ನನಗೆ ವೇದ ಪಾಠಶಾಲೆಗೆ ಸೇರಿಸು' ಎಂದು ಬೆಕ್ಕಣ್ಣ ಹೇಳಿದಾಗ ನನಗೆ ಗಾಬರಿಯಾಯಿತು.

'ಮನುಷ್ಯರಲ್ಲೇ ಎಲ್ಲಾ ಜಾತಿಯವರಿಗೆ ಮಂತ್ರ ಕಲಿಸಂಗಿಲ್ಲ. ಅಂತಾದ್ರಾಗೆ ನಿನ್ನ ಯಾವ ವೇದ ಪಾಠಶಾಲೆಯವರು ಸೇರಿಸಿಕೋತಾರೆ?' ಎಂದು ರೇಗಿದೆ.

'ಹಂಗಾರೆ ಯಾವುದಾದರೂ ಸರ್ಕಾರಿ ವೇದ ಪಾಠಶಾಲೆಗೆ ಸೇರಿಸು' ಎಂದು ದುಂಬಾಲು ಬಿದ್ದಿತು.

'ಇರೋ ಸರ್ಕಾರಿ ಶಾಲೆಗಳೇ ಮುಚ್ಚಿ ಹೋಗಾಕೆ ಹತ್ಯಾವು. ಇನ್ನು ಸರ್ಕಾರಿ ವೇದ ಪಾಠಶಾಲೆ ಎಲ್ಲಿ ಐತಲೇ? ಇಲ್ಲದ ಶಾಲೆಗೆ ಎಲ್ಲಿಂದ ಸೇರಿಸಲಿ' ಎಂದೆ.

'ನಾ ಏನೇ ಕಲೀತೀನಿ ಅಂದ್ರೂ ನೀ ಎಲ್ಲಾದಕ್ಕೆ ಅಡ್ಡಗಾಲು ಹಾಕತೀ. ನಾ ಆನ್‌ಲೈನಿನಾಗೆ ಕಲೀತೇನೇಳು' ಎಂದು ಮೂತಿಯುಬ್ಬಿಸಿ, ಲ್ಯಾಪ್‌ಟಾಪಿನಲ್ಲಿ ಮುಖ ಹುದುಗಿಸಿತು.

'ಅದ್ಸರಿ... ಈಗ ಸಂಸ್ಕೃತ, ಪೂಜೆ ಮಂತ್ರ ಕಲಿಯೂ ಹೊಸ ಉತಾವಳಿ ನಿನಗ ಎದಕ್ಕೆ?' ಎಂದು ಕುತೂಹಲದಿಂದ ಕೇಳಿದೆ.

'ಗೃಹಪ್ರವೇಶ, ದೇವರ ವ್ರತಗಳು ಮಾತ್ರವಲ್ಲ, ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಏನರೆ ಹೊಸ ಪ್ರಾಡೆಕ್ಟ್ ಮಾರುಕಟ್ಟೆಗೆ ಬಂದಾಗ, ಅದರ ಪೂಜೆಗೂ ಭಟ್ಟರನ್ನೇ ಕರೀತಾರ' ಎಂದು ಪತ್ರಿಕೆಯ ಪುಟ ತೆರೆಯಿತು.

'ಪೂಜೆಗೆ ಕೈತುಂಬ ರೊಕ್ಕನೂ ಕೊಡತಾರೆ. ಮತ್ತ ಎಲ್ಲಾ ಕ್ಯಾಶ್... ಯಾರೂ ಉದ್ರಿ ಹೇಳಂಗಿಲ್ಲ!' ಎನ್ನುತ್ತ ಭಾರತೀಯ ವಿಜ್ಞಾನ ಸಂಸ್ಥೆಯ ನೇತೃತ್ವದಲ್ಲಿ ಬೆಂಗಳೂರಿನಲ್ಲಿಯೇ ತಯಾರಾಗಿ ಮೊದಲ ಸಲ ರಸ್ತೆಗಿಳಿದ ಚಾಲಕರಹಿತ ಕಾರಿಗೆ ನಾಲ್ಕಾರು ಭಟ್ಟರು ಪೂಜೆ ಮಾಡುತ್ತಿರುವ ಫೋಟೊ ತೋರಿಸಿತು. ಕಾರಿನೊಳಗೂ ಒಂದಿಬ್ಬರು ಸ್ವಾಮಿಗಳಿದ್ದರು.

'ಆಹಾ! ವಿಜ್ಞಾನದ ನವನವೀನ ಆವಿಷ್ಕಾರದಿಂದ ತಯಾರಾದ ಕಾರಿನ ಉದ್ಘಾಟನೆಗೂ ಮಂತ್ರ ಹೇಳಿ ಪೂಜೆ ಮಾಡತೀವಿ ಅಂದ್ರ ನಮ್ಮ ವೈಜ್ಞಾನಿಕ ಮನೋಭಾವನೆಗೆ ಭೋಪರಾಕ್ ಅನ್ನಬಕು' ಎಂದೆ.

'ಹಿಂಗೆ ಮಂತ್ರಘೋಷದೊಂದಿಗೆ ಉದ್ಘಾಟನೆ ಮಾಡೂದು ನಮ್ಮ ವೇದಕಾಲದಿಂದ ನಡೆದು ಬಂದ ಸಂಸ್ಕೃತಿ, ತಿಳಕೋ!' ಎಂದು ಬೆಕ್ಕಣ್ಣ ಮೀಸೆ ತಿರುವುತ್ತ ಗುರುಗುಟ್ಟಿತು.

ಸಂಗತ

ಹುಲಿಗಳ ಸಂಖ್ಯೆ ಹೆಚ್ಚಳ; ನಿರ್ವಹಣೆಯಲ್ಲಿ ವಿಫಲ!

ಕರ್ನಾಟಕದಲ್ಲಿ ಹುಲಿಗಳ ಸಂಖ್ಯೆ ಹೆಚ್ಚುತ್ತಿದೆ. ಆದರೆ, ಅವುಗಳ ಸಂರಕ್ಷಣೆ ಸರಿಯಾಗಿಲ್ಲ. ಅಪಕ್ವ ನಿರ್ಧಾರಗಳ ಫಲವಾಗಿ ಹುಲಿ ಮರಿಗಳ ಸಾವು ಹೆಚ್ಚುತ್ತಿದೆ.


● ಉಮೇಶ ಭಟ್ಟ ಪಿ.ಎಚ್.

ಬಂಡೀಪುರ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯ ನುಗು ವನ್ಯಜೀವಿ ವಲಯದ ಮುಳ್ಳೂರು ಅರಣ್ಯದಂಚಿನ ಪೊದೆಯಲ್ಲಿ ಹೆಣ್ಣು ಹುಲಿಯೊಂದು ತಿಂಗಳ ಕೂಸಿನೊಂದಿಗೆ ಸುರಕ್ಷಿತ ಜಾಗ ಹುಡುಕಿಕೊಂಡಿತ್ತು. ಜಾನುವಾರು ಹುಡುಕಿಕೊಂಡು ಹೋದ ಗ್ರಾಮಸ್ಥರೊಬ್ಬರು ಪೊದೆಯ ಬಳಿ ಹೋದರು. ತಾಯಿ ಹುಲಿಯ ಸಿಟ್ಟಿಗೆ ರೈತ ಸ್ಥಳದಲ್ಲೇ ಮೃತಪಟ್ಟರು.

ಮಲೆಮಹದೇಶ್ವರ ವನ್ಯಜೀವಿ ವಲಯದ ಹೂಗ್ಯಂ ವಲಯ ವ್ಯಾಪ್ತಿಯಲ್ಲಿ ನಾಲ್ಕು ತಿಂಗಳ ಹಿಂದೆ ನಾಲ್ಕು ಮರಿಗಳೊಂದಿಗೆ ತಾಯಿ ಹುಲಿಯ ಸಂಚಾರವಿತ್ತು. ಮರಿಗಳಿಗೆ ನೆಲೆ ಹುಡುಕಿಕೊಡುವ ಸಮಯ. ಆ ವೇಳೆ ಎದುರಾದ ಜಾನುವಾರುಗಳನ್ನು ಹುಲಿ ಕೊಂದಿತ್ತು. ಹುಲಿ ಹಾಗೂ ಮರಿಗಳ ಚಲನವಲನದ ಮಾಹಿತಿ ಅರಿತಿದ್ದ ಸ್ಥಳೀಯರು ವಿಷವಿಕ್ಕಿ ಐದು ಹುಲಿಗಳ ಸಾವಿಗೆ ಕಾರಣವಾದರು.

ಬಂಡೀಪುರ ವ್ಯಾಪ್ತಿಯ ಬಡಗಲಪುರ ಬಳಿಯೂ ಮೂರು ಮರಿಗಳೊಂದಿಗೆ ತಾಯಿ ಸಂಚಾರವಿತ್ತು. ಹುಲಿ ದಾಳಿಗೆ ತುತ್ತಾಗಿ ರೈತ ಕಣ್ಣು ಕಳೆದುಕೊಂಡ. ಸೆರೆಗೆ ಮುಂದಾದ ಅರಣ್ಯ ಇಲಾಖೆಗೆ ಸಿಕ್ಕಿದ್ದು ಮರಿ. ಮತ್ತೊಂದು ದಾಳಿಯಾದ ಮೇಲೆ ಇನ್ನೊಂದು ಹುಲಿಯನ್ನು ಸೆರೆ ಹಿಡಿಯಲಾಯಿತು. ತಾಯಿ ಹಾಗೂ ಮರಿಗಳು ಬೇರ್ಪಟ್ಟವು.

ಮೂರ್ನಾಲ್ಕು ತಿಂಗಳುಗಳಿಂದ ಕರ್ನಾಟಕದಲ್ಲಿ ವರದಿಯಾಗುತ್ತಿರುವ ಹುಲಿ ಮರಿಗಳ ಸಾವಿನ ಪ್ರಕರಣಗಳು ಇವು. ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಯ ಮಲೆ ಮಹದೇಶ್ವರ, ಕಾವೇರಿ, ಬಿಳಿರಂಗನಬೆಟ್ಟ ಹಾಗೂ ಬಂಡೀಪುರ ಭಾಗದಲ್ಲಿಯೇ ಎಂಟು ಹುಲಿ ಮರಿಗಳು ನಿರ್ವಹಣೆಯ ಕೊರತೆಯಿಂದ ಪ್ರಾಣ ಕಳೆದುಕೊಂಡಿವೆ.



ಹೆಚ್ಚು ಹುಲಿಗಳಿರುವ ರಾಜ್ಯಗಳಲ್ಲಿ ಕರ್ನಾಟಕಕ್ಕೆ ಮಧ್ಯಪ್ರದೇಶದ ನಂತರ ದೇಶದಲ್ಲಿ ಎರಡನೇ ಸ್ಥಾನ. ಅರಣ್ಯಪ್ರದೇಶ, ಹುಲಿಗಳ ಆವಾಸಸ್ಥಾನದ ನೆಲೆಯಲ್ಲಿ ನೋಡುವುದಾದರೆ ಹುಲಿಗಳ ಸಾಂದ್ರತೆ ಕರ್ನಾಟಕದಲ್ಲಿಯೇ ಜಾಸ್ತಿಯಿದೆ. 2022ರ ಹುಲಿ ಗಣತಿಯಂತೆ ಬಂಡೀಪುರದಲ್ಲಿ 140 ಹುಲಿಗಳಿದ್ದರೆ, ಅದರಲ್ಲಿ ಮರಿಗಳ ಸಂಖ್ಯೆ 32. ಮೂರು ವರ್ಷದಲ್ಲಿ ಇದು ಮತ್ತಷ್ಟು ಹೆಚ್ಚಾಗಿರುವ ಸಾಧ್ಯತೆ ಇದೆ. ನಾಗರಹೊಳೆಯಲ್ಲಿ 149, ಬಿಳಿಗಿರಿರಂಗನಬೆಟ್ಟ ಹುಲಿಧಾಮದಲ್ಲಿ 39 ಹುಲಿ ಇರುವ ಮಾಹಿತಿ ಬಿಡುಗಡೆ ಮಾಡಲಾಗಿತ್ತು.

ಹುಲಿಗಳ ಸಂಖ್ಯೆ ಹೆಚ್ಚುತ್ತಿರುವುದು ಮುಖ್ಯ ವಿಷಯವಾದರೂ, ಅವುಗಳ ನಿರ್ವಹಣೆಯಲ್ಲಿ ಅರಣ್ಯ ಇಲಾಖೆ ನಿರಂತರವಾಗಿ ಎಡವುತ್ತಿದೆ. ಈಗಿನ ಅಧಿಕಾರಿಗಳು, ಸಿಬ್ಬಂದಿಗೆ ಪುಸ್ತಕ ಆಧಾರಿತ ಮಾಹಿತಿ ಇದೆಯೇ ಹೊರತು, ಸನ್ನಿವೇಶ ಎದುರಿಸಿ ಕೆಳ ಹಂತದಲ್ಲಿ ಪರಿಸ್ಥಿತಿ ಸುಧಾರಿಸುವ, ಹುಲಿ ಸಂತತಿ ರಕ್ಷಿಸುವ ಕೌಶಲದ ಕೊರತೆ ಕಾಡುತ್ತಿದೆ.

ವನ್ಯಜೀವಿಗಳು ಹೆಚ್ಚಿರುವ, ಸಫಾರಿಗೆ ಬೇಡಿಕೆ ಇರುವ ಕರ್ನಾಟಕದ ಬಂಡೀಪುರ, ನಾಗರಹೊಳೆಯಂತಹ ಹುಲಿಧಾಮಗಳಲ್ಲಿ ಈಗ ಸಫಾರಿಗೆ ಹೆಚ್ಚು ಬೇಡಿಕೆಯಿದೆ. ಹಿಂದೆ, ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಆಪ್ತರಾಗಿದ್ದ ಛಾಯಾಗ್ರಾಹಕರಿಗೆ ಮಾತ್ರ ವನ್ಯ ಬದುಕಿನ ಹತ್ತಿರದ ಕ್ಷಣಗಳನ್ನು ಸೆರೆಹಿಡಿಯುವ ಅವಕಾಶವಿತ್ತು. ಹುಲಿಯನ್ನು ಮರಿಗಳೊಂದಿಗೆ ಸೆರೆಹಿಡಿದ ಚಿತ್ರಗಳು ಆಗ ಗಮನ ಸೆಳೆದಿದ್ದವು. ಪರಿಸರ ಪ್ರವಾಸೋದ್ಯಮ, ಸಫಾರಿ ಸೌಲಭ್ಯ ವಿಸ್ತರಣೆಗೊಂಡು ಈಗ ಇಂತಹ ಹೆಚ್ಚಿನ ಛಾಯಾಚಿತ್ರ, ವಿಡಿಯೊಗಳನ್ನು ನೋಡುವ ಅವಕಾಶ ಸಿಗುತ್ತಿರುವುದು ಖುಷಿದಾಯಕವೇ. ಆದರೆ, ಇದರ ಇನ್ನೊಂದು ಆಯಾಮವನ್ನೂ ನೋಡಲೇಬೇಕು.

ತಾಯಿ ಹುಲಿ ಒಂದು ವರ್ಷದವರೆಗೂ ಮರಿಯನ್ನು ಜತನದಿಂದ ಕಾಪಾಡುತ್ತದೆ. ಗಂಡಾದರೆ ಒಂದೂವರೆ ವರ್ಷ, ಹೆಣ್ಣು ಮರಿ ಎರಡು ವರ್ಷದವರೆಗೂ ತಾಯಿಯೊಂದಿಗೆ ಬೆಳೆಯುತ್ತದೆ. ಇದರ ನಡುವೆ ಮರಿಗಳು ಬೇರ್ಪಟ್ಟು ಮನುಷ್ಯ ಸಂಪರ್ಕಕ್ಕೆ ಬಂದಿವೆ ಎನ್ನುವ ಅನುಮಾನ ಬಂದರೆ ಮರಿಗಳನ್ನು ದೂರ ಮಾಡಿಬಿಡುತ್ತದೆ. ಅಂತಹ ಹುಲಿಗಳು ಜೀವಬಿಡುವ ಸನ್ನಿವೇಶವೂ ಎದುರಾಗಬಹುದು.

ಹುಲಿ ಮರಿಗಳ ನಿರ್ವಹಣೆಗೆಂದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ 2015ರಲ್ಲಿ ಪ್ರಮಾಣಿತ ಕಾರ್ಯಾಚರಣಾ ವಿಧಾನವನ್ನು (ಎಸ್‌ಒಪಿ) ಬಿಡುಗಡೆ ಮಾಡಿದೆ. ಇದರಂತೆ ಹುಲಿಯನ್ನು ವನ್ಯ ನೆಲೆಯಲ್ಲಿ ರಕ್ಷಿಸಿದಾಗ ಹೇಗೆ ನಿರ್ವಹಣೆ ಮಾಡಬೇಕು, ಮೃಗಾಲಯದಲ್ಲಿ ಹೇಗೆ ನೋಡಿಕೊಳ್ಳಬೇಕು ಎಂದು ತಿಳಿಸಲಾಗಿದೆ. ದಶಕದ ನಂತರ ಹುಲಿಗಳ ಸಂಖ್ಯೆ ಹೆಚ್ಚಿದೆ. ಇಲಾಖೆಗೆ ಹೊಸ ಅಧಿಕಾರಿಗಳು, ಸಿಬ್ಬಂದಿ ಬಂದಿದ್ದಾರೆ. ಎಲ್ಲವನ್ನೂ ಸೆರೆ ಹಿಡಿದು ಸಾಮಾಜಿಕ ಮಾಧ್ಯಮಕ್ಕೆ ಹಾಕಿ ಬಿಡಬೇಕು ಎನ್ನುವ ಜನರ ಧಾವಂತವೂ ಹೆಚ್ಚಿದೆ. ಹೀಗಿರುವಾಗ ಕರ್ನಾಟಕ ಅರಣ್ಯ ಇಲಾಖೆಯು ಹುಲಿಧಾಮಗಳ ವ್ಯಾಪ್ತಿಯ ಅಧಿಕಾರಿಗಳು, ಸಿಬ್ಬಂದಿಗೆ ಹುಲಿ ಹಾಗೂ ಮರಿಗಳ ನಿರ್ವಹಣೆಯ ಪಾಠವನ್ನು ಹೊಸದಾಗಿ ಹೇಳಿಕೊಡಲೇಬೇಕು.

ಹುಲಿ ಮಾತ್ರವಲ್ಲದೆ, ಜನರನ್ನೂ ನಿಯಂತ್ರಿಸುವ ಸೂಕ್ಷ್ಮಗಳನ್ನೂ ಹೇಳಿಕೊಡುವುದು ಸೂಕ್ತ. ಸಂಘರ್ಷ ಪ್ರಮಾಣ ಮುಂದಿನ ದಿನಗಳಲ್ಲಿ ಹೆಚ್ಚಬಹುದು. ಆಗಲೂ ಇದೆಲ್ಲವನ್ನೂ ಎದುರಿಸಬಲ್ಲ ಕೆಳ ಹಂತದ ಸಿಬ್ಬಂದಿ, ಅನುಭವದ ಪಾಠ ಧಾರೆ ಎರೆಯಬಲ್ಲ ಹಿರಿಯ ಅಧಿಕಾರಿಗಳು, ಪರಿಣತಿ ಇರುವವರ ಪಡೆಯನ್ನು ರೂಪಿಸಿದರೆ ಇದು 'ಕರ್ನಾಟಕದ ಮಾದರಿ'ಯೂ ಆಗಬಹುದು. ಇಲ್ಲದೇ ಇದ್ದರೆ ಹುಲಿ– ಮರಿಗಳ ಸಾವಿನ ಘಟನೆಗಳು, ಅರಣ್ಯದಂಚಿನ ಕುಟುಂಬದವರ ರೋದನದ ಸನ್ನಿವೇಶಗಳೇ ಮತ್ತೆ ಮತ್ತೆ ಎದುರಾಗಬಹುದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ವಿದೇಶಿ ಪ್ರವಾಸಿಗರು: ಹಿಂದೆ ಬಿದ್ದ ರಾಜ್ಯ

ಭಾರತದಲ್ಲಿ ಪ್ರವಾಸಿಗರ ನೆಚ್ಚಿನ ರಾಜ್ಯಗಳ ಪೈಕಿ ಕರ್ನಾಟಕವೂ ಒಂದಾಗಿದೆ. ದೇಶಿ ಪ್ರವಾಸಿಗರನ್ನು ಸೆಳೆಯುವಲ್ಲಿ ಕರ್ನಾಟಕವು ಮುಂದಿದೆ. ಆದರೆ, ರಾಜ್ಯಕ್ಕೆ ಭೇಟಿ ನೀಡುತ್ತಿರುವ ವಿದೇಶಿ ಪ್ರವಾಸಿಗರ ಸಂಖ್ಯೆ ಕಡಿಮೆ ಇದೆ. ಮೂರು ವರ್ಷಗಳಿಂದ ವಿದೇಶಿ ಪ್ರವಾಸಿಗರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದ್ದರೂ ಅದು ಕೋವಿಡ್‌ಪೂರ್ವದ ಸಂಖ್ಯೆಯನ್ನು ಇನ್ನೂ ಮುಟ್ಟಿಲ್ಲ. ಗಮನಾರ್ಹ ಅಂಶವೆಂದರೆ, ಮೈಸೂರು, ಉಡುಪಿ, ಕೊಪ್ಪಳ ಜಿಲ್ಲೆಗಳು ಹೆಚ್ಚು ವಿದೇಶಿ ಪ್ರವಾಸಿಗರನ್ನು ಆಕರ್ಷಿಸುತ್ತಿವೆ

ಪ್ರಜಾವಾಣಿ ವಾರ್ತೆ

‘ಒಂದು ರಾಜ್ಯ, ಹಲವು ಜಗತ್ತುಗಳು’ ಎನ್ನುವ ಧ್ಯೇಯಕ್ಕೆ ತಕ್ಕಂತೆ ಕರ್ನಾಟಕದ ಪ್ರವಾಸಿ ತಾಣಗಳು ವೈವಿಧ್ಯಮಯವಾಗಿವೆ. ಪಾರಂಪರಿಕ ತಾಣಗಳು, ಗಿರಿಧಾಮಗಳು, ಕಡಲ ತೀರಗಳು, ಅರಮನೆ, ಕೋಟೆ ಕೊತ್ತಲಗಳು ರಾಜ್ಯದಲ್ಲಿದ್ದು, ಪ್ರತಿವರ್ಷ ಕೋಟ್ಯಂತರ ಪ್ರವಾಸಿಗರನ್ನು ಆಕರ್ಷಿಸುತ್ತಿವೆ.

ದೇಶದಲ್ಲಿ ಹೆಚ್ಚು ದೇಶಿ ಪ್ರವಾಸಿಗರು ಭೇಟಿ ನೀಡುವ ರಾಜ್ಯಗಳ ಪೈಕಿ ಕರ್ನಾಟಕವು 2024ನೇ ಸಾಲಿನಲ್ಲಿ ಮೂರನೇ ಸ್ಥಾನದಲ್ಲಿದೆ. ಕಳೆದ ವರ್ಷ ರಾಜ್ಯಕ್ಕೆ 30.46 ಕೋಟಿ ದೇಶಿ ಪ್ರವಾಸಿಗರು ಭೇಟಿ ನೀಡಿದ್ದಾರೆ. ಕೋವಿಡ್ ಪೂರ್ವಕ್ಕಿಂತಲೂ ಹೆಚ್ಚು ದೇಶಿ ಪ್ರವಾಸಿಗರು ಈಗ ರಾಜ್ಯಕ್ಕೆ ಭೇಟಿ ನೀಡುತ್ತಿದ್ದಾರೆ. ಆದರೆ, ವಿದೇಶಿ ಪ್ರವಾಸಿಗರನ್ನು ಸೆಳೆಯುವಲ್ಲಿ ಕರ್ನಾಟಕ ಹಿಂದೆ ಬಿದ್ದಿದೆ. ಹೆಚ್ಚು ವಿದೇಶಿ ಪ್ರವಾಸಿಗರು ಭೇಟಿ ನೀಡುವ ಹತ್ತು ರಾಜ್ಯಗಳ ಪಟ್ಟಿಯಲ್ಲಿ ರಾಜ್ಯ ಸ್ಥಾನವನ್ನೇ ಪಡೆದಿಲ್ಲ. ಈ ಪಟ್ಟಿಯಲ್ಲಿ ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ ಮುಂದಿವೆ.

2024ರಲ್ಲಿ ರಾಜ್ಯಕ್ಕೆ 4.85 ಲಕ್ಷ ವಿದೇಶಿ ಪ್ರವಾಸಿಗರು ಬಂದಿದ್ದರು. 2023ರಲ್ಲಿ ಈ ಸಂಖ್ಯೆ 4.09 ಲಕ್ಷ ಆಗಿತ್ತು. ಕೋವಿಡ್ ಸಂದರ್ಭದಲ್ಲಿ ರಾಜ್ಯಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ಸಂಖ್ಯೆ ಕುಸಿದಿತ್ತು. ಮೂರು ವರ್ಷಗಳಿಂದ ಈ ಸಂಖ್ಯೆ ಹೆಚ್ಚುತ್ತಿದ್ದರೂ ಕೋವಿಡ್‌ಪೂರ್ವ ಸಂಖ್ಯೆಯನ್ನು ಇನ್ನೂ ಮುಟ್ಟಿಲ್ಲ. 2019ರಲ್ಲಿ ರಾಜ್ಯಕ್ಕೆ 6.09 ಲಕ್ಷ ವಿದೇಶಿಯರು ಪ್ರವಾಸಕ್ಕಾಗಿ ಬಂದಿದ್ದರು.

ವಿದೇಶಿ ಪ್ರವಾಸಿಗರು ಹೆಚ್ಚು ಭೇಟಿ ನೀಡುವ ಸ್ಥಳಗಳಲ್ಲಿ ಮೈಸೂರು (1.37 ಲಕ್ಷ), ಉಡುಪಿ (89,849) ಮತ್ತು ಕೊಪ್ಪಳ (50,000) ಜಿಲ್ಲೆಗಳು ಮೊದಲ ಮೂರು ಸ್ಥಾನ ಪಡೆದಿವೆ. ರಾಜಧಾನಿ ಬೆಂಗಳೂರಿಗೆ 45,782 ವಿದೇಶಿ ಪ್ರವಾಸಿಗರು ಭೇಟಿ ನೀಡಿದ್ದಾರೆ.

ವಿಜಯನಗರ ಜಿಲ್ಲೆಯ ಹಂಪಿ ಸೇರಿದಂತೆ ಉತ್ತರ ಕರ್ನಾಟಕದ ಹಲವು ತಾಣಗಳು ವಿದೇಶಿಯರನ್ನು ಸೆಳೆಯುವಲ್ಲಿ ಮುಂದಿವೆ. ವಿಶ್ವಪಾರಂಪರಿಕ ತಾಣಗಳ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಹಂಪಿಯ ಜತೆಗೆ, ಐಹೊಳೆಯ ದುರ್ಗಾಂಬಾ ದೇವಸ್ಥಾನ, ಬದಾಮಿಯ ಜೈನ ಮತ್ತು ವೈಷ್ಣವ ಗುಹೆ, ಪಟ್ಟದಕಲ್ಲಿನ ವಿಶ್ವ ಪಾರಂಪರಿಕ ಸ್ಮಾರಕಗಳು, ವಿಜಯಪುರದ ಗೋಲ್‌ಗುಂಬಜ್, ಇಬ್ರಾಹಿಂ ರೋಜಾ, ಲಕ್ಕುಂಡಿಯ ದೇವಾಲಯಗಳು, ಬಳ್ಳಾರಿಯ ಕೋಟೆ, ಬೆಂಗಳೂರು ವಲಯ ವ್ಯಾಪ್ತಿಯ ಟಿಪ್ಪು ಸುಲ್ತಾನನ ಅರಮನೆ, ಚಿತ್ರದುರ್ಗದ ಕೋಟೆ, ದರಿಯಾ ದೌಲತ್, ಕೇಶವ ದೇವಸ್ಥಾನ ಮುಂತಾದವು ಹೆಚ್ಚು ವಿದೇಶಿಯರನ್ನು ಆಕರ್ಷಿಸುತ್ತಿವೆ.



ಆಧಾರ: ಇಂಡಿಯಾ ಟೂರಿಸಂ ಡೇಟಾ ಕಂಪೆಂಡಿಯಮ್, ಪಾಸ್‌ಪೋರ್ಟ್ ಇಂಡೆಕ್ಸ್–2025, ಮಾಧ್ಯಮ ವರದಿಗಳು


ಅಮೆರಿಕದವರೇ ಹೆಚ್ಚು

ದೇಶದ ಚಿತ್ರಣ ಭಿನ್ನವೇನಲ್ಲ.

ಕೋವಿಡ್‌ಪೂರ್ವದಲ್ಲಿ, 2019ರಲ್ಲಿ 1.09 ಕೋಟಿ ವಿದೇಶಿ ಪ್ರವಾಸಿಗರು ಭಾರತಕ್ಕೆ ಭೇಟಿ ನೀಡಿದ್ದರು. ಕೋವಿಡ್ ಕಾಲದಲ್ಲಿ ಈ ಸಂಖ್ಯೆ ಗಣನೀಯವಾಗಿ ಕುಸಿದಿತ್ತು. ನಂತರದ ದಿನಗಳಲ್ಲಿ ಈ ಸಂಖ್ಯೆ ನಿಧಾನಕ್ಕೆ ಹೆಚ್ಚಾಗತೊಡಗಿತು. ವಿದೇಶಿಯರಿಗೆ ಹೋಲಿಸಿದರೆ ಅನಿವಾಸಿ ಭಾರತೀಯರೇ (ಎನ್‌ಆರ್‌ಐ) ಭಾರತಕ್ಕೆ ಹೆಚ್ಚು ಭೇಟಿ ನೀಡುತ್ತಿದ್ದು, ಇವರಿಂದಾಗಿ ಅಂತರರಾಷ್ಟ್ರೀಯ ಪ್ರವಾಸಿಗರ ಒಟ್ಟು ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದೆ.

ಭಾರತಕ್ಕೆ ಭೇಟಿ ನೀಡುವ ವಿದೇಶಿಯರ ಪೈಕಿ ಅಮೆರಿಕದವರು ಮೊದಲ ಸ್ಥಾನದಲ್ಲಿದ್ದಾರೆ. 2024ರಲ್ಲಿ ಇವರ ಸಂಖ್ಯೆಯು 18 ಲಕ್ಷವಿದ್ದು, ಒಟ್ಟು ವಿದೇಶಿ ಪ್ರವಾಸಿಗರಲ್ಲಿ ಇವರ ಪ್ರಮಾಣವು ಶೇ 18.13ರಷ್ಟು ಇದೆ. ಇವರ ನಂತರದ ಸ್ಥಾನದಲ್ಲಿ ಬಾಂಗ್ಲಾದೇಶದವರು (ಶೇ 17.59) ಇದ್ದಾರೆ. ಮೂರನೇ ಸ್ಥಾನದಲ್ಲಿ ಬ್ರಿಟನ್ (ಶೇ 10.28), ನಾಲ್ಕನೇ ಸ್ಥಾನದಲ್ಲಿ ಆಸ್ಟ್ರೇಲಿಯಾ (ಶೇ 5.2) ಇವೆ. ಮಲೇಷ್ಯಾ, ಜರ್ಮನಿ, ಫ್ರಾನ್ಸ್ ಮತ್ತು ಸಿಂಗಪುರಗಳಿಂದಲೂ ಭಾರತಕ್ಕೆ ಹೆಚ್ಚು ಪ್ರವಾಸಿಗರು ಬರುತ್ತಿದ್ದಾರೆ.

ಭಾರತಕ್ಕೆ ಭೇಟಿ ನೀಡಿದ ವಿದೇಶಿ ಮತ್ತು ಎನ್‌ಆರ್‌ಐ ಪ್ರವಾಸಿಗರು (ಕೋಟಿಗಳಲ್ಲಿ)



ವರ್ಷ	ವಿದೇಶಿಯರು	ಎನ್‌ಆರ್‌ಐಗಳು	ಒಟ್ಟು
2019	1.09	0.70	1.79
2020	0.27	0.36	0.63
2021	0.15	0.55	0.70
2022	0.64	0.79	1.43
2023	0.95	0.94	1.89
2024	0.99	1.06	2.05


ವಿದೇಶಿ ಪ್ರವಾಸಿಗರ ಪೈಕಿ ದೇಶಕ್ಕೆ ಭೇಟಿ ನೀಡುವ ಹೆಚ್ಚಿನವರ (ಶೇ 45ರಷ್ಟು) ಉದ್ದೇಶವು ರಜೆ ಕಳೆಯುವುದು, ಹೊಸ ಸ್ಥಳಗಳನ್ನು ನೋಡುವುದು ಮತ್ತು ಮನರಂಜನೆ ಪಡೆಯುವುದು. ಶೇ 28.49ರಷ್ಟು ಮಂದಿ ಭಾರತದಲ್ಲಿರುವ ತಮ್ಮ ಬಂಧುಮಿತ್ರರನ್ನು ಭೇಟಿ ಮಾಡಲು, ಶೇ 10.52ರಷ್ಟು ಮಂದಿ ತಮ್ಮ ಉದ್ಯೋಗ/ವ್ಯಾಪಾರದ ನಿಮಿತ್ತ ದೇಶಕ್ಕೆ ಬರುತ್ತಿದ್ದಾರೆ.



ರಾಜ್ಯಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರು (ಲಕ್ಷಗಳಲ್ಲಿ) / ರಾಜ್ಯಕ್ಕೆ ಭೇಟಿ ನೀಡಿದ ದೇಶೀಯ ಪ್ರವಾಸಿಗರು (ಕೋಟಿಗಳಲ್ಲಿ)


ವರ್ಷ	ವಿದೇಶಿ ಪ್ರವಾಸಿಗರು (ಲಕ್ಷಗಳಲ್ಲಿ)	ದೇಶೀಯ ಪ್ರವಾಸಿಗರು (ಕೋಟಿಗಳಲ್ಲಿ)
2019	6.09	22.79
2020	1.65	7.74
2021	0.72	8.13
2022	1.29	18.24
2023	4.09	28.41
2024	4.85	30.46

2024ರಲ್ಲಿ ಹೆಚ್ಚು ವಿದೇಶಿ ಪ್ರವಾಸಿಗರು ಭೇಟಿ ನೀಡಿದ ರಾಜ್ಯಗಳು (ಲಕ್ಷಗಳಲ್ಲಿ)



ರಾಜ್ಯ	ಸಂಖ್ಯೆ
ಮಹಾರಾಷ್ಟ್ರ	37.1
ಪಶ್ಚಿಮ ಬಂಗಾಳ	31.2
ಉತ್ತರ ಪ್ರದೇಶ	22.7
ಗುಜರಾತ್	22.7
ರಾಜಸ್ಥಾನ	20.7

2024ರಲ್ಲಿ ಹೆಚ್ಚು ದೇಶೀಯ ಪ್ರವಾಸಿಗರು ಭೇಟಿ ನೀಡಿದ ರಾಜ್ಯಗಳು (ಕೋಟಿಗಳಲ್ಲಿ)



ರಾಜ್ಯ	ಸಂಖ್ಯೆ
ಉತ್ತರ ಪ್ರದೇಶ	64.68
ತಮಿಳುನಾಡು	30.68
ಕರ್ನಾಟಕ	30.46
ಆಂಧ್ರಪ್ರದೇಶ	29.03
ರಾಜಸ್ಥಾನ	23.01

ಅವಕಾಶ ಸಾಕಷ್ಟು, ಸುಧಾರಿಸಬೇಕು ಇನ್ನಷ್ಟು

ಕರ್ನಾಟಕವೂ ಸೇರಿ ವಿವಿಧ ರಾಜ್ಯಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ವಿಪುಲ ಅವಕಾಶಗಳಿವೆ. ದೇಶದಲ್ಲಿ ವ್ಯವಸ್ಥೆ ಸುಧಾರಣೆಯಾದರೆ ಇನ್ನಷ್ಟು ವಿದೇಶಿ ಪ್ರವಾಸಿಗರನ್ನು ಸೆಳೆಯಬಹುದು. ಭಾರತವು ಸದ್ಯ 57 ರಾಷ್ಟ್ರಗಳ ಜನರಿಗೆ ಮಾತ್ರ ಬಂದಿಳಿದ ತಕ್ಷಣ ವೀಸಾ ನೀಡುವ ಸೌಲಭ್ಯವನ್ನು ಕಲ್ಪಿಸಿದೆ. ಈ ಕಾರಣಕ್ಕಾಗಿಯೇ ಜಾಗತಿಕ ಹೆನ್ಲೀ ಪಾಸ್‌ಪೋರ್ಟ್ ಸೂಚ್ಯಂಕದಲ್ಲಿ ಭಾರತದ ಸ್ಥಾನ ತುಂಬಾ ಕೆಳಮಟ್ಟದಲ್ಲಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಸೂಚ್ಯಂಕದಲ್ಲಿ ಈ ವರ್ಷ ದೇಶವು ಐದು ಸ್ಥಾನ ಕುಸಿದಿದೆ. 199 ರಾಷ್ಟ್ರಗಳ ಪಾಸ್‌ಪೋರ್ಟ್‌ಗಳ ಪೈಕಿ ಭಾರತದ ಪಾಸ್‌ಪೋರ್ಟ್ 85ನೇ ಸ್ಥಾನ ಪಡೆದಿದೆ. ಕಳೆದ ವರ್ಷ 80ನೇ ಸ್ಥಾನ ಪಡೆದಿತ್ತು. ಏಷ್ಯಾದ ಸಿಂಗಪುರ (ಮೊದಲ ಸ್ಥಾನ), ದಕ್ಷಿಣ ಕೊರಿಯಾ (2ನೇ ಸ್ಥಾನ) ಜಪಾನ್‌ಗಳಿಗೆ (ಮೂರನೇ ಸ್ಥಾನ) ಹೋಲಿಸಿದರೆ ಭಾರತದ ಸ್ಥಾನ ನಗಣ್ಯ.

ನಿರ್ದಿಷ್ಟ ದೇಶಕ್ಕೆ ಭೇಟಿ ನೀಡುವುದಕ್ಕೂ ಮೊದಲು ಅಲ್ಲಿನ ವೀಸಾಕ್ಕೆ ಅರ್ಜಿ ಸಲ್ಲಿಸುವುದು, ಪೂರಕ ದಾಖಲೆಗಳನ್ನು ಒದಗಿಸುವುದು, ಒಪ್ಪಿಗೆ ಪಡೆಯುವುದು ಈ ಪ್ರಕ್ರಿಯೆಗಳು ಹೆಚ್ಚು ಸಮಯ ಬೇಡುತ್ತವೆ. ಇವು ಪ್ರವಾಸಿಗರಿಗೆ ಕಿರಿಕಿರಿಯಾಗಿ ಅವರು ಆ ದೇಶಕ್ಕೆ ಭೇಟಿ ನೀಡಲು ಹಿಂಜರಿಯುತ್ತಾರೆ. ಒಂದು ವೇಳೆ ವೀಸಾ ಇಲ್ಲದೆ, ದೇಶ ಪ್ರವೇಶಿಸಲು ಅವಕಾಶ ಕೊಟ್ಟು, ನಂತರ ವೀಸಾ ನೀಡುವ ವ್ಯವಸ್ಥೆ ಮಾಡಿದರೆ ಆ ದೇಶಕ್ಕೆ ಇನ್ನಷ್ಟು ಪ್ರವಾಸಿಗರು ಭೇಟಿ ನೀಡಬಹುದು. ಕೇಂದ್ರ ಸರ್ಕಾರವು ಇಂಥ ಕ್ರಮ ಕೈಗೊಂಡರೆ ದೇಶಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯಲ್ಲಿ ಏರಿಕೆ ಕಾಣಬಹುದು ಎಂಬುದು ಪ್ರವಾಸೋದ್ಯಮ ಕ್ಷೇತ್ರದಲ್ಲಿ ತೊಡಗಿರುವವರ ಮಾತು.

ದೇಶ ಮತ್ತು ಕರ್ನಾಟಕದ ಕೆಲವೇ ಕೆಲವು ಪ್ರವಾಸಿ ತಾಣಗಳನ್ನು ಬಿಟ್ಟು ಉಳಿದ ಕಡೆಗಳಲ್ಲಿ ಮೂಲಸೌಕರ್ಯಗಳ ಕೊರತೆ ಕಾಡುತ್ತಿದೆ. ಕೆಲವೆಡೆ ತಂಗುವ ಸೌಲಭ್ಯಗಳೂ ಇಲ್ಲ. ಸಾರಿಗೆ, ಶೌಚಾಲಯ, ನೀರು ಮುಂತಾದ ವ್ಯವಸ್ಥೆಗಳ ಕೊರತೆಯೂ ಇದೆ. ಬಹುಪಾಲು ತಾಣಗಳಲ್ಲಿ ಸ್ವಚ್ಛ ವಾತಾವರಣವೂ ಕಾಣಸಿಗುವುದಿಲ್ಲ. ಕೇಂದ್ರ ಹಾಗೂ ಆಯಾ ರಾಜ್ಯಗಳ ಪ್ರವಾಸೋದ್ಯಮ ಇಲಾಖೆಗಳು ಇವುಗಳ ಸುಧಾರಣೆಗೆ ಗಮನ ಹರಿಸಿದರೆ ಪ್ರವಾಸಿಗರ ಸಂಖ್ಯೆ ಹೆಚ್ಚುವುದು ಖಚಿತ.

ರಾಷ್ಟ್ರೀಯ

ಒತ್ತಡ ತರುವ ಉದ್ದೇಶವಿತ್ತು: ಎನ್‌.ವಿ.ರಮಣ

‘ಕ್ರಿಮಿನಲ್ ಪ್ರಕರಣ ದಾಖಲಿಸಿ ಬೆದರಿಸಲು ಯತ್ನಿಸಿದ್ದರು’

ಅಮರಾವತಿ (ಪಿಟಿಐ): ‘ನನ್ನ ಮೇಲೆ ಒತ್ತಡ ತರುವ ಉದ್ದೇಶದಿಂದ ನನ್ನ ಕುಟುಂಬವನ್ನು ಗುರಿಯಾಗಿಸಿಕೊಂಡು ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿತ್ತು’ ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎನ್‌.ವಿ.ರಮಣ ಅವರು ಹಿಂದಿನ ವೈಎಸ್‌ಆರ್‌ಸಿಪಿ ಸರ್ಕಾರದ ಹೆಸರು ಪ್ರಸ್ತಾಪಿಸದೆಯೇ ಹೇಳಿದರು.

ವಿಐಟಿ–ಎಪಿ ವಿಶ್ವವಿದ್ಯಾಲಯದ 5ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ‘ನನ್ನನ್ನು ಬೆದರಿಸುವ ಉದ್ದೇಶದಿಂದಲೇ ನನ್ನ ಕುಟುಂಬದ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರ ಬಗ್ಗೆ ನೀವೆಲ್ಲರೂ ಬಲ್ಲಿರಿ. ಆದರೆ, ನಾನು ಒಬ್ಬಂಟಿಯಾಗಿರಲಿಲ್ಲ. ಆ ಕಠಿಣ ರೈತರ ಬಗ್ಗೆ ಸಹಾನುಭೂತಿ ಹೊಂದಿದ್ದ ಎಲ್ಲರೂ ಈ ಬೆದರಿಕೆ ಹಾಗೂ ಬಲವಂತವನ್ನು ಎದುರಿಸಿದರು’ ಎಂದು ಹೇಳಿದರು.

‘ಸಾಂವಿಧಾನಿಕ ತತ್ವಗಳನ್ನು ಪಾಲಿಸಿದ ನ್ಯಾಯಾಂಗ ಸದಸ್ಯರ ಮೇಲೆ ಒತ್ತಡ ಹೇರಲು ಕಿರುಕುಳ ನೀಡಲಾಗಿತ್ತು. ಯಾವುದೇ ಪಾತ್ರವಿಲ್ಲದ ನ್ಯಾಯಾಧೀಶರ ಕುಟುಂಬಗಳು ರಾಜಕೀಯ ಪಕ್ಷಗಳ ಪಿತೂರಿಗೆ ಬಲಿಯಾದವು’ ಎಂದು ಆರೋಪಿಸಿದರು.

‘ಸ್ವಾತಂತ್ರ್ಯ ಹೋರಾಟದ ನಂತರ ದಕ್ಷಿಣ ಭಾರತದಲ್ಲಿ ನಡೆದ ಸುದೀರ್ಘ ಹೋರಾಟವಿದು. ಸರ್ಕಾರದಿಂದ ಒತ್ತಡ ಬಂದರೂ ಹಿಂದೆ ಸರಿಯದ ಅಮರಾವತಿ ರೈತರ ಧೈರ್ಯಕ್ಕೆ ಸೆಲ್ಯೂಟ್. ನ್ಯಾಯಾಂಗ ವ್ಯವಸ್ಥೆ ಮೇಲೆ ನಂಬಿಕೆ ಇಟ್ಟ ಅವರಿಗೆ ಕೃತಜ್ಞತೆಗಳು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಸರ್ಕಾರಗಳು ಬದಲಾಗಬಹುದು. ಆದರೆ, ನ್ಯಾಯಾಲಯಗಳು ಹಾಗೂ ಕಾನೂನಿನ ನಿಯಮಗಳು ಸ್ಥಿರತೆಯ ಆಧಾರಸ್ತಂಭಗಳಾಗಿ ಉಳಿಯುತ್ತವೆ. ಜನರು ಅದರಲ್ಲಿ ನಂಬಿಕೆ ಇರಿಸಿದಾಗ ಹಾಗೂ ಅನುಕೂಲಕ್ಕಾಗಿ ತಮ್ಮ ಸಮಗ್ರತೆಯನ್ನು ತ್ಯಜಿಸಲು ನಿರಾಕರಿಸಿದಾಗ ಮಾತ್ರ ಕಾನೂನಿನ ನಿಯಮಗಳು ಉಳಿಯುತ್ತವೆ’ ಎಂದು ಹೇಳಿದರು.



ಅನೇಕ ರಾಜಕೀಯ ನಾಯಕರು ಮೌನ ವಹಿಸಿದ್ದಾಗ ನ್ಯಾಯಮೂರ್ತಿಗಳು, ವಕೀಲರು ಸಾಂವಿಧಾನಿಕ ತತ್ವಗಳನ್ನು ಎತ್ತಿ ಹಿಡಿದರು

ಎನ್‌.ವಿ.ರಮಣ, ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ

ಆಂಧ್ರಪ್ರದೇಶದ ಏಕೈಕ ರಾಜಧಾನಿಯಾಗಿದ್ದ ಅಮರಾವತಿಯನ್ನು ರದ್ದುಗೊಳಿಸಿದ್ದಕ್ಕಾಗಿ ಮತ್ತು ವಿಶಾಖಪಟ್ಟಣವನ್ನು ಆಡಳಿತಾತ್ಮಕ ರಾಜಧಾನಿ, ಅಮರಾವತಿ ಶಾಸಕಾಂಗದ ರಾಜಧಾನಿ, ಕರ್ನೂಲ್ ಅನ್ನು ನ್ಯಾಯಾಂಗದ ರಾಜಧಾನಿಯಾಗಿ ಮಾಡುವ ‘ಮೂರು ರಾಜಧಾನಿ’ಗಳ ಸೂತ್ರವನ್ನು ಪ್ರತಿಪಾದಿಸಿದ್ದಕ್ಕಾಗಿ ಅಂದಿನ ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ್ ರೆಡ್ಡಿ ನೇತೃತ್ವದ ಸರ್ಕಾರದ ವಿರುದ್ಧ ರೈತರು ಪ್ರತಿಭಟನೆ ನಡೆಸಿದ್ದನ್ನು ಎನ್‌.ವಿ. ರಮಣ ಉಲ್ಲೇಖಿಸಿದರು.

ಆನಂತರ, ಅಧಿಕಾರಕ್ಕೆ ಬಂದ ಎನ್. ಚಂದ್ರಬಾಬು ನಾಯ್ಡು ನೇತೃತ್ವದ ಸರ್ಕಾರವು ಅಮರಾವತಿ ರಾಜಧಾನಿ ಯೋಜನೆಗೆ ಮರುಜೀವ ನೀಡಿತು. ಈಗ ಕಾಮಗಾರಿಗಳು ಪ್ರಗತಿಯಲ್ಲಿ ಸಾಗಿವೆ.

ಭಾರತ ತೊರೆಯುತ್ತಿದ್ದ 48 ಬಾಂಗ್ಲಾ ವಲಸಿಗರ ಬಂಧನ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಬಶೀರ್‌ಹಾಟ್ ಗಡಿ ಭಾಗದಲ್ಲಿ ಅಕ್ರಮವಾಗಿ ಹೊರ ಹೋಗುತ್ತಿದ್ದ 48 ಮಂದಿ ಬಾಂಗ್ಲಾದೇಶಿ ನುಸುಳುಕೋರರನ್ನು ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಬಿಎಸ್‌ಎಫ್ ಅಧಿಕಾರಿಯೊಬ್ಬರ ಪ್ರಕಾರ, ಚುನಾವಣಾ ಆಯೋಗ ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಐಆರ್) ಘೋಷಿಸಿದ ಬೆನ್ನಲ್ಲೇ ಇವರೆಲ್ಲಾ ಭಾರತವನ್ನು ತೊರೆಯುತ್ತಿದ್ದರು.

‘ಶನಿವಾರ ರಾತ್ರಿ 15 ಮಂದಿ, ಭಾನುವಾರ 33 ಮಂದಿಯನ್ನು ವಶಕ್ಕೆ ಪಡೆದ ಬಿಎಸ್‌ಎಫ್ ಅಧಿಕಾರಿಗಳು ಸ್ವರೂಪ್ ನಗರ ಪೊಲೀಸ್ ಠಾಣೆಗೆ ಒಪ್ಪಿಸಿದ್ದಾರೆ’ ಎಂದು ಹಿರಿಯ ಅಧಿಕಾರಿ ತಿಳಿಸಿದ್ದಾರೆ.

‘ಪಶ್ಚಿಮ ಬಂಗಾಳ ಮತ್ತು ಇತರೆ ರಾಜ್ಯಗಳಲ್ಲಿ ಕಾರ್ಮಿಕರಾಗಿ ಇವರು ಕೆಲಸ ಮಾಡುತ್ತಿದ್ದರು. ಮತಗಟ್ಟೆ ಅಧಿಕಾರಿಗಳು ಮನೆ–ಮನೆಗೆ ಭೇಟಿ ನೀಡಿ ದಾಖಲೆ ಪರಿಶೀಲಿಸಿದರೆ ಸಿಕ್ಕಿಬೀಳಬಹುದು. ಬಂಧನ ಅಥವಾ ಗಡಿಪಾರು ಆಗುವ ಭೀತಿಯಿಂದ ಗಡಿದಾಟಿ ಹೋಗುತ್ತಿದ್ದರು’ ಎಂದು ಹೇಳಿದ್ದಾರೆ.

‘ಕಳೆದ ಮೂರು ದಿನಗಳಲ್ಲಿ ಇದೇ ಮಾರ್ಗವಾಗಿ ಹೊರ ಹೋಗುತ್ತಿದ್ದ 89 ಮಂದಿ ಬಾಂಗ್ಲಾದೇಶಿ ಅಕ್ರಮ ವಲಸಿಗರನ್ನು ಬಂಧಿಸಿ ಪೊಲೀಸ್ ವಶಕ್ಕೆ ನೀಡಲಾಗಿದೆ’ ಎಂದು ಅಧಿಕಾರಿ ತಿಳಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256



ಮದ್ಯ ಕುಡಿದ ವ್ಯಕ್ತಿಯೊಬ್ಬರು ರಾತ್ರಿಯಲ್ಲಿ ರಸ್ತೆಯಲ್ಲಿ ಹುಲಿಯೊಂದರ ಕತ್ತನ್ನು ಸವರುವುದು, ಅದಕ್ಕೆ ತನ್ನ ಬಾಟಲಿಯಲ್ಲಿದ್ದ ದ್ರವ ವಸ್ತುವನ್ನು ಕುಡಿಸುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಕೆಲವು ದಿನಗಳಿಂದ ಹರಿದಾಡುತ್ತಿದೆ. ಇದು ಮಧ್ಯ ಪ್ರದೇಶದ ಪೆಂಚ್‌ನಲ್ಲಿ ನಡೆದ ಘಟನೆ ಎಂದೂ ಮದ್ಯದ ಅಮಲಿನಲ್ಲಿ ರಾಜು ಪಟೇಲ್ ಎಂಬ ವ್ಯಕ್ತಿ ಹುಲಿಯನ್ನು ಬೆಕ್ಕು ಎಂದು ಭಾವಿಸಿ ಅದರ ಕತ್ತನ್ನು ಸವರಿದ್ದಾರೆ. ಅದಕ್ಕೆ ತನ್ನ ಕೈಲಿದ್ದ ಮದ್ಯವನ್ನು ಕುಡಿಸಿದ್ದಾರೆ. ಅಕ್ಟೋಬರ್ 4ರಂದು ನಡೆದ ಈ ವಿಲಕ್ಷಣ ಘಟನೆಯು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ ಎಂದೂ ಪ್ರತಿಪಾದಿಸಲಾಗುತ್ತಿದೆ. ಆದರೆ, ಇದು ಸುಳ್ಳು.

ಈ ಘಟನೆ ಕುರಿತಂತೆ ಗೂಗಲ್‌ನಲ್ಲಿ ಹುಡುಕಿದಾಗ ವಿಶ್ವಾಸಾರ್ಹವಾದಂತಹ ಯಾವ ಪತ್ರಿಕಾ ವರದಿಯೂ ಸಿಗಲಿಲ್ಲ. ಮಧ್ಯ ಪ್ರದೇಶದ ಸಿಯೋನಿಯಲ್ಲಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯನ್ನು ಸಂಪರ್ಕಿಸಿದಾಗ ಅಂತಹ ಘಟನೆ ನಡೆದಿರುವ ಬಗ್ಗೆ ಮಾಹಿತಿ ಇಲ್ಲ ಎಂಬ ಪ್ರತಿಕ್ರಿಯೆ ಸಿಕ್ಕಿತು. ‘ದಿ ಸುಟೂರ್’ ಎಂಬ ಮಾಧ್ಯಮ ಸಂಸ್ಥೆ ಪೆಂಚ್ ಹುಲಿ ಸಂರಕ್ಷಿತ ಪ್ರದೇಶದ ಉಪ ನಿರ್ದೇಶಕ ರಜನೀಶ್ ಸಿಂಗ್ ಅವರನ್ನು ಸಂಪರ್ಕಿಸಿ ವರದಿ ಮಾಡಿದ್ದು, ಈ ಘಟನೆಯು ತಮ್ಮ ವ್ಯಾಪ್ತಿಯಲ್ಲಿ ನಡೆದುದಲ್ಲ ಎಂಬ ಅವರ ಸ್ಪಷ್ಟನೆಯಲ್ಲಿ ಉಲ್ಲೇಖಿಸಿದೆ. ವಿಡಿಯೊವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಅದರ ಅಸಲಿತನದ ಬಗ್ಗೆ ಅನುಮಾನ ಬಂತು. ಮುಂದಿನ ಹಂತವಾಗಿ ಡೀಪ್‌ಫೇಕ್ ಒ–ಮೀಟರ್ ಎಂಬ ಎಐ ಪತ್ತೆ ಟೂಲ್‌ನಲ್ಲಿ ವಿಡಿಯೊವನ್ನು ಹಾಕಿ ಪರಿಶೀಲಿಸಿದಾಗ, ವಿಡಿಯೊ ಎಐ ತಂತ್ರಜ್ಞಾನದಲ್ಲಿ ಸೃಷ್ಟಿಸಿದ್ದು ಎಂಬುದಕ್ಕೆ ಹಲವು ಸುಳಿವುಗಳು ಸಿಕ್ಕವು. ಈ ಟೂಲ್ ಅಭಿವೃದ್ಧಿ ಪಡಿಸಿದ ತಂತ್ರಜ್ಞರನ್ನು ಸಂಪರ್ಕಿಸಿದಾಗ, ಅವರು ‘ಈಸ್ ಇಟ್ ಎಐ’ ಮತ್ತು ‘ಎಐ ಓರ್ ನಾಟ್’ ಎಂಬ ಟೂಲ್‌ಗಳ ಮೂಲಕ ಪರಿಶೀಲನೆ ನಡೆಸಿ, ಆ ವಿಡಿಯೊ ಎಐ ಸೃಷ್ಟಿ ಎಂಬುದನ್ನು ದೃಢಪಡಿಸಿದರು ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಹೆಚ್ಚುತ್ತಿರುವ ಅನಾಗರಿಕತೆ

ನುಡಿ ಬೆಳಗು — ದಾದಾಪೀರ್ ನವಿಲೇಹಾಳ್



ದೃಶ್ಯ 1: ಸೂಟು ಬೂಟು ಹಾಕಿಕೊಂಡು ಮದುವೆ ಊಟ ಮುಗಿಸಿದ ಒಬ್ಬ ಬಾಳೆಹಣ್ಣನ್ನು ಸುಲಿದು ಸಿಪ್ಪೆಯನ್ನು ಕಲ್ಯಾಣ ಮಂಟಪದಲ್ಲಿ ಬಿಸಾಕಿದ.

ದೃಶ್ಯ 2: ಕಚ್ಚೆ ಪಂಚೆ ಉಟ್ಟ ಎಂಬತ್ತರ ಆಸುಪಾಸಿನ ಯಜಮಾನರೊಬ್ಬರು ಅಲ್ಲಿ ಬಿದ್ದಿದ್ದ ಬಾಳೆಹಣ್ಣಿನ ಸಿಪ್ಪೆಯನ್ನು ಕೈಯಲ್ಲಿ ಎತ್ತಿಕೊಂಡು ಸೂಟು ಬೂಟಿನ ವ್ಯಕ್ತಿಗೆ ಎದುರಾಗಿ ನಿಂತು ‘ನೀವೇನು ಓದಿದ್ದೀರಿ?’ ಎಂದು ಕೇಳಿದರು. ಆತ ‘ನೆಟ್ಟು ಸ್ಲೆಟ್ಟು, ಎಂ ಎ, ಎಂ ಫಿಲ್ಲು, ಬಿಎಡ್ಡು ಮುಗಿಸಿ ಪಿಎಚ್ಡಿ ಕೂಡ ಮಾಡ್ತಿದೀನಿ’ ಅಂತ ಠೀವಿಯಿಂದ ಹೇಳಿದ. ‘ಬಾಳ ಓದಿದೀರಿ ಬಿಡಿ’ ಅಂತ ಹೇಳಿದ ಯಜಮಾನರು ಬಾಳೆಹಣ್ಣಿನ ಸಿಪ್ಪೆ ಹಾಕಲು ಡಸ್ಟ್ ಬಿನ್ ಹುಡುಕುತ್ತಾ ಹೊರಟರು.

ದೃಶ್ಯ 3: ಸಂಚಾರ ದಟ್ಟಣೆಯ ರಸ್ತೆಯಲ್ಲಿ ಕಾರು ನಿಲ್ಲಿಸಿದ ವ್ಯಕ್ತಿ ಬಲಭಾಗಕ್ಕೆ ಡೋರ್ ಓಪನ್ ಮಾಡಿಕೊಂಡು ಇನ್ನೊಬ್ಬನ ಜೊತೆ ಲೋಕಾಭಿರಾಮದ ಮಾತಾಡುತ್ತಿದ್ದ. ಹಿಂದೆ ಮುಂದೆ ಬರುತ್ತಿದ್ದ ವಾಹನಗಳ ಚಾಲಕರು ಆ ಕಾರಿನವನಿಗೆ ಏನನ್ನೂ ಪ್ರಶ್ನಿಸದೇ ಸೈಡಿಗೆ ಸಾಗುತ್ತಿದ್ದರು.

ಮೇಲಿನ ದೃಶ್ಯಗಳಲ್ಲಿರುವ ವ್ಯಕ್ತಿಗಳ ಮಾತು ಮತ್ತು ವರ್ತನೆಗಳನ್ನು ಗಮನಿಸಿ. ಪ್ರತಿನಿತ್ಯ ಇಂತಹ ಹತ್ತಾರು ದೃಶ್ಯಗಳನ್ನು ನಾವು ನೋಡುತ್ತಿದ್ದೇವೆ. ಇದು ಸಾರ್ವಜನಿಕವಾಗಿ ಲಜ್ಜೆ ಮರೆಯಾಗಿರುವುದರ ನಿದರ್ಶನ. ಪ್ರಜ್ಞಾವಂತರಿಗೆ ಅಸಹ್ಯ ಹುಟ್ಟಿಸುವ ಇಂತಹ ನಡವಳಿಕೆಗಳು ನಾಗರಿಕ ಸಮಾಜವೊಂದರ ಉತ್ಪನ್ನಗಳಲ್ಲ. ಬದಲಾಗಿ ಆಧುನಿಕ ಜಗತ್ತಿನ ವಾರಸುದಾರರು ಎಂದು ತಮ್ಮ ಹೆಗಲನ್ನು ತಾವೇ ತಟ್ಟಿಕೊಳ್ಳುವ ಕೆಲವು ಬುದ್ಧಿವಂತರ ವಿಕೃತ ಚೇಷ್ಟೆಗಳು, ಅನಾಗರಿಕ ಪ್ರದರ್ಶನಗಳು.

ದೊಡ್ಡ ನಗರಗಳಲ್ಲಿ ಬದುಕಿದ್ದೇವೆ. ದುಬಾರಿ ಉಡುಪು ಧರಿಸುತ್ತಿದ್ದೇವೆ. ಬಂಗಲೆ, ಬಂಗಾರ, ಕಾರುಗಳ ದರಬಾರು ನಡೆಸಿದ್ದೇವೆ. ಒಂದೊಳಲೆ ಹಾಲಿಲ್ಲದ ಹಸುಳೆಯ ಮುಂದೆ ನಾಯಿಗಳನ್ನು ಮುದ್ದಾಡುತ್ತಾ ಬ್ರೆಡ್ಡು ಬಿಸ್ಕತ್ತು ಬಿಸಾಕುತ್ತಿದ್ದೇವೆ. ದೊಡ್ಡ ದೊಡ್ಡ ಪದವಿ ಅಧಿಕಾರ ಪಡೆದಿದ್ದೇವೆ. ಎಲ್ಲಾ ನಿಜ, ನಾಗರಿಕರಾಗಿದ್ದೇವೆಯೇ ಎಂದು ಪ್ರಶ್ನಿಸಿಕೊಳ್ಳೋಣ. ಈ ಆಡಂಬರಗಳು ಇಲ್ಲದ ಸಾದಾಸೀದಾ ವ್ಯಕ್ತಿಯು ಅತ್ಯುಚ್ಚ ನಾಗರಿಕನಂತೆ ನಡೆದುಕೊಳ್ಳುತ್ತಾನೆ. ನಮಗೇಕೆ ಸಾಧ್ಯವಿಲ್ಲ? ನಾಗರಿಕತೆ ಅನ್ನುವುದು ಪಿತ್ರಾರ್ಜಿತವಾಗಿ ಬರುವ ಸಲೀಸು ಸಂಪತ್ತಲ್ಲ. ವಿಲಾಸೀ ಕಾರು ಬಂಗಲೆಗಳಲ್ಲಿ ಬೆಳೆಯುವುದಿಲ್ಲ. ಕೊಂಡುಕೊಂಡ ಅಥವಾ ಹೊಡೆದುಕೊಂಡ ಪದವಿ, ಅಧಿಕಾರಗಳಲ್ಲಿಯೂ ಇರುವುದಿಲ್ಲ. ಅದು ವ್ಯಕ್ತಿಯು ತನ್ನ ಅಪರಿಮಿತ ಪರಿಶ್ರಮದಿಂದ ಸಂಪಾದಿಸಿಕೊಳ್ಳಬೇಕಾದ ಪ್ರಾಮಾಣಿಕತೆ ಮತ್ತು ನಿಯತ್ತಿನ ಉತ್ಕೃಷ್ಟ ಫಲ. ಅದು ಅತ್ಯಮೂಲ್ಯವೂ ಸುದೀರ್ಘವೂ ಆದ ಕಠಿಣ ಶ್ರದ್ಧೆ ಮತ್ತು ಸಮಯವನ್ನು ಅಪೇಕ್ಷಿಸುತ್ತದೆ. ನಾವು ಪಡೆದ ವಿದ್ಯೆಗೆ ವಿವೇಕ ತುಂಬುವುದೇ ನಾಗರಿಕತೆ. ವಿಲಾಸಕ್ಕೆ ವಿನಯವೂ ಪದವಿಗೆ ಸರಳತೆಯೂ ಅಧಿಕಾರಕ್ಕೆ ಅಂತಃಕರಣವೂ ಭೂಷಣ. ಯಾರೋ ತಿಂದು ಬಿಸಾಕಿದ ಹಣ್ಣಿನ ಸಿಪ್ಪೆಯನ್ನು ಕೈಯಲ್ಲಿ ಎತ್ತಿಕೊಂಡು ಡಸ್ಟ್ ಬಿನ್ ಹುಡುಕುತ್ತಾ ಹೊರಟ ಯಜಮಾನನ ನಡವಳಿಕೆ ಗಾಂಧೀಜಿಯವರ ಕರುಳಕಾಳಜಿಯ ಪಾಠವಾಗಿದೆ.

ನಾಗರಿಕತೆಯು ನಾವು ಕಟ್ಟಿಕೊಂಡ ಸಮಾಜದ ಅತ್ಯುತ್ತಮ ಅಭಿರುಚಿಯಾಗಿದೆ. ಬೀದಿಗಳಲ್ಲಿ ಪೊರಕೆ ಹಿಡಿದ ಫೋಟೊಗಳನ್ನು ಸೋಷಿಯಲ್ ಮೀಡಿಯಾಗಳಲ್ಲಿ ಹಂಚುವುದು ಸ್ವಚ್ಛತೆಯ ಮಾದರಿಯಲ್ಲ. ಮನೋಮಾಲಿನ್ಯವೇ ಸಮಾಜ ಕಂಟಕವಾಗಿರುವಾಗ ನಮ್ಮ ಉದ್ದೇಶ, ಆಲೋಚನೆ, ಮತ್ತು ನಡವಳಿಕೆಗಳಲ್ಲಿ ಸ್ವಚ್ಛತೆ ತಂದುಕೊಳ್ಳುವುದು ನಾಗರಿಕತೆ.

ಪದಬಂಧ 6212


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪುರದ ಹತ್ತಿರದಲ್ಲೇ ರಾಣಿವಾಸವಿದೆ (4)
3.ಸೊಟ್ಟಗಿರುವ ಸೊಂಡಿಲುಳ್ಳವನು (4)
5.ವಾರಾಂತ್ಯಕ್ಕೆ ಬಂದಿಳಿದ ಆರೋಹಿ! (3)
6.ನೀರಿನಲ್ಲಿಯೇ ಹುಟ್ಟಿರುವುದು (3)
8.ಜರೂರಿದ್ದಾಗ ಬಾರಿಸಿರುವ ಚರ್ಮವಾದ್ಯ (3)
9.ರಾಷ್ಟ್ರದ ಮುಖ್ಯಮಂತ್ರಿ (3)
10.ಮಯನಲ್ಲಿರುವ ತಿಳಿಗೇಡಿ! (3)
11.ಕಸ್ತೂರಿ ಕಂಪಿನ ನಮ್ಮ ಭಾಷೆ (3)
12.ನಯ ನಾಜೂಕನ್ನು ರೂಢಿಸಿಕೊಂಡಿರುವ ಮಗ (3)
14.ಆಸ್ತಿಯಲ್ಲಿ ಭಾಗ ಪಡೆಯುವವ ಜ್ಞಾತಿ (3)
16.ಮಲಗುವ ಕೋಣೆಯಿದು (4)
17.ಉಗುರಿನಿಂದಾದ ಪೆಟ್ಟು (4)

ಮೇಲಿಂದ ಕೆಳಕ್ಕೆ

1.ತತ್ತಿಯೊಡೆದು ಹುಟ್ಟುವ ಪ್ರಾಣಿ (3)
2.ನೀರು ಹಾಲು ಮುಂತಾದ ದ್ರವ ಪದಾರ್ಥ (2)
3.ವಠಾರದಲ್ಲಿರುವ ಮದುವೆ ಗಂಡು (2)
4.ಅಗಲ ಬಾಯುಳ್ಳ ಪಾತ್ರೆ (3)
7.ಜನರಿಂದ ಕಿಕ್ಕಿರಿದು ತುಂಬಿದುದು (5)
8.ಜನನಕ್ಕೆ ಕಾರಣನಾದ ತಂದೆ (5)
11.ಗೋಪುರಕ್ಕೆ ಹಾಕುವ ಶಿಖರ (3)
13.ದೇವಯಾನಿ ಮತ್ತು ಶರ್ಮಿಷ್ಠೆಯ ಪತಿ (3)
14.ಹರಿದಾರಿಯಲ್ಲಿ ಸಾಗುತ್ತಿರುವಾಗಿನ ತೃಷೆ (2)
15.ಇಪ್ಪತ್ತು ನಾಲ್ಕು ಗಂಟೆಗಳ ಕಾಲ (2)



6211ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಸಾರ 3.ಅಜರಾಮರ 6.ಸಲ್ಲಾಪ 7.ಯವನ 8.ಸರ 10.ಅಶನ 12.ನಗಾಣಗು 14.ನಳಪಾಕ 16.ಖುರಮ 18.ಕಸ 20.ವಲ್ಮೀಕ 22.ಭಾಮಿನಿ 23.ಕನಕದಾಸ 24.ತಡಿಕೆ

ಮೇಲಿಂದ ಕೆಳಕ್ಕೆ: 1.ಸಹಾಯಧನ 2.ರಸನ 3.ಅಪಭ್ರಂಶ 4.ರಾಯಸ 5.ರಚ್ಚು 9.ರಮಪಾ 10.ಅಗುಳು 11.ನನಮ 13.ಗಾಯಕ 15.ಕರ್ಣಾಕರ್ಣಿಕೆ 17.ರಸಾಭಾಸ 19.ಸರೀಕ 20.ವನಿತ 21.ಕಾಕ

ಸುಡೊಕು 6596

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

8	7			2		3		
3		6	5		8			
	4			7		2		6
	6				5			9
9		1		8			6	2
4			2			1	3	
		2	3		7		5	4
7	1					6		
5		3	4		2			1

6595 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

03 ನವೆಂಬರ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಚತುರ್ದಶಿ ಗಂ. 22-37 **ನಕ್ಷತ್ರ:** ರೇವತಿ ಗಂ 12-35 **ಯೋಗ:** ವಜ್ರ ಗಂ 15-43 **ಕರಣ:** ಗರ ಗಂ. 12-24 ತುಲಾ ಮಾಸದ 17 ನೇ ದಿನ. ಮಳೆ ನಕ್ಷತ್ರ : ಸ್ವಾತಿ 4 ನೇ ಪಾದ. **ರಾಹುಕಾಲ :** ಬೆಳಿಗ್ಗೆ 07-30 - 09-00 **ಸೂರ್ಯೋದಯ :** 06-29 **ಸೂರ್ಯಾಸ್ತ :** 05-59 ಮುಸ್ಲಿಂ ದಿನಾಂಕ : 11 ಜುಮಾದುಲ್ಲಾವಲ್, ದಿನ ವಿಶೇಷ : ವೈಕುಂಠ ಚತುರ್ದಶಿ, **ಅದೃಷ್ಟ ಸಂಖ್ಯೆ :** 4, 10

ಮೇಷ: ಸ್ನೇಹಪರ ಸ್ವಭಾವ, ಪರೋಪಕಾರ, ನಿರ್ಲಿಪ್ತತೆಯಿಂದಾಗಿ ವೈಯಕ್ತಿಕ ಸ್ಥಾನಮಾನಗಳು ಲಭಿಸಲಿವೆ. ಕೆಲಸಕಾರ್ಯಗಳಿಗೆ ಅಪೇಕ್ಷಿಸಿದ ಬೆಂಬಲ ದೊರೆಯಲಿದೆ.

ವೃಷಭ: ಸ್ತ್ರೀಸಂಬಂಧಿ ಸಮಸ್ಯೆಗಳು ಕೋರ್ಟು ಕಚೇರಿಗಳ ಮೆಟ್ಟಿಲನ್ನು ಹತ್ತುವಂತೆ ಮಾಡುವುದು. ಎಚ್ಚರವಾಗಿರಿ. ಸಂಘ ಸಂಸ್ಥೆಗಳಲ್ಲಿ ಅಧಿಕಾರ ಹೊಂದಿದವರು ಲೆಕ್ಕಪತ್ರಗಳ ಪರಿಶೋಧನೆ ಮಾಡುವುದು ಉತ್ತಮ.

ಮಿಥುನ: ಕೆಲವೊಂದು ಅನಿರೀಕ್ಷಿತ ಘಟನೆಗಳಿಂದ ಸುತ್ತಮುತ್ತಲಿನ ವಾತಾವರಣವೂ ಧನಾತ್ಮಕವಾಗಿ ಬದಲಾವಣೆಯಾಗುವುದು. ಪಾಲುದಾರಿಕೆಯ ವ್ಯವಹಾರದಲ್ಲಿ ಲಾಭವಾಗಲಿದೆ.

ಕರ್ಕಾಟಕ: ಹಣಕಾಸಿನ ಜವಾಬ್ದಾರಿಯ ಕೆಲಸ ಮಾಡುವವರಿಗೆ ವ್ಯತ್ಯಾಸಗಳಾಗುವ ಸಾಧ್ಯತೆಗಳಿವೆ. ಮಗನ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಪರಿಣಾಮಕಾರಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಅಗತ್ಯ.

ಸಿಂಹ: ಮಿತ್ರರೊಬ್ಬರು ಎಲ್ಲ ವಿಧದಲ್ಲಿಯೂ ಕುಟುಂಬದವರಿಗಿಂತಲು ಸಹಾಯವಾಗಲಿದ್ದಾರೆ. ಆತ್ಮೀಯರೊಂದಿಗೆ ವ್ಯವಹಾರಗಳ ಕುರಿತು ಆಳವಾದ ಚರ್ಚೆಯನ್ನು ನಡೆಸಿ.

ಕನ್ಯಾ: ವೈಯಕ್ತಿಕ ವಿಚಾರವನ್ನು ಆಪ್ತರೊಬ್ಬರ ಬಳಿ ಹೇಳಿಕೊಳ್ಳುವುದರಿಂದ ಮಾನಸಿಕ ದುಃಖ ಕಡಿಮೆಯಾಗಲಿದೆ. ಊರಿನ ಅಥವಾ ಪರ ಊರಿನ ಉತ್ಸವದಲ್ಲಿ ಭಾಗವಹಿಸುವುದರಿಂದ ಸಂತುಷ್ಟರಾಗುವಿರಿ.

ತುಲಾ: ರಾಜಕೀಯ ಭವಿಷ್ಯದಲ್ಲಿ ಜನಪ್ರಿಯತೆ ಹೆಚ್ಚಿಸಿಕೊಳ್ಳಲು ಸ್ವಂತ ಊರಿನಲ್ಲಿ ಬೇಕಾದ ಪ್ರಯತ್ನ ಮಾಡಿ. ಹಲವು ನಿರೀಕ್ಷೆಗಳೊಂದಿಗೆ ಬಂಧುಗಳು ಮನೆಗೆ ಪ್ರಯಾಣ ಬೆಳೆಸುವರು.

ವೃಶ್ಚಿಕ: ಎಲೆಕ್ಟ್ರಿಕಲ್ ಕಂಟ್ರಾಕ್ಟರ್‌ಗಳಿಗೆ ಉತ್ತಮ ಅವಕಾಶಗಳು ಸಿಗಲಿವೆ. ಅದೇ ರೀತಿಯಾಗಿ ಗ್ರಾಹಕರಿಂದ ದೂರುಗಳನ್ನು ಕೇಳುವ ಸಂಭವ ಇದೆ. ಧರ್ಮ ಕಾರ್ಯಗಳಲ್ಲಿ ಮಾರ್ಗದರ್ಶನದಿಂದ ಆಸಕ್ತಿ ಹೆಚ್ಚುವುದು.


ಧನು: ಸ್ವತ್ತು ಮಾರಾಟ ಅಥವಾ ಖರೀದಿಯ ವಿಚಾರದಲ್ಲಿ ಸೋದರರ ಅಭಿಪ್ರಾಯವನ್ನು ಪಡೆದು ಮುಂದುವರಿಯುವುದು ಉತ್ತಮ. ರೈತರು ಉತ್ತಮ ತಳಿಯ ಬೆಳೆಯಿಂದ ಸಂತೋಷ ಹೊಂದುವರು.

ಮಕರ: ಕೆಲ ನಿರ್ಧಾರಗಳು ಸರಿಯಾಗಿ ಕಂಡು ಬಂದರೂ ಸಭೆಯಲ್ಲಿ ದೃಷ್ಟಿಕೋನವನ್ನು ನೋಡಿ ಬದಲಿಸಿಕೊಳ್ಳಬೇಕಾಗಬಹುದು. ಮೊಮ್ಮಕ್ಕಳ ಬಹಳ ದಿನದ ನಂತರದ ಭೇಟಿ ಸಂತಸ ತರುತ್ತದೆ.

ಕುಂಭ: ನೀತಿ ನಿಯಮಗಳಿಗೆ ಬದ್ಧರಾದರೆ, ಸತ್ಯ ನಿಮ್ಮದಾಗಿದ್ದರೆ ಉದ್ಯೋಗದಲ್ಲಿ ಹೆದರುವ ಅವಶ್ಯಕತೆ ಕಂಡುಬಾರದು. ಬೇರೆ ಬೇರೆ ಕಾರಣಗಳಿಗಾಗಿ ಒಂದೇ ಸ್ಥಳಕ್ಕೆ ಪುನಃ ಭೇಟಿ ನೀಡುವಂತಾಗುತ್ತದೆ.

ಮೀನ: ನಿಕಟ ಸಂಬಂಧಿಗಳೊಂದಿಗೆ ಬದುಕಿನ ದುರ್ಘಟನೆಯ ವಿಷಯಗಳನ್ನು ಹಂಚಿಕೊಳ್ಳುವುದರಿಂದ ಉತ್ತಮ ಸಲಹೆಯನ್ನು ಪಡೆಯುವಿರಿ. ನಿರುದ್ಯೋಗಿಗಳಿಗೆ ಉದ್ಯೋಗದ ಭರವಸೆ ದೇವತಾನುಗ್ರಹದಿಂದ ಸಿಗಲಿದೆ.

ಗುಂಡಣ್ಣ



ಅಕ್ಟೋಬರ್‌ನಲ್ಲಿ ಹೂಡಿಕೆದಾರರ ನಿಲುವು ಬದಲು

₹14 ಸಾವಿರ ಕೋಟಿ ವಿದೇಶಿ ಹೂಡಿಕೆ

ನವದೆಹಲಿ (ಪಿಟಿಐ): ಸತತ ಮೂರು ತಿಂಗಳುಗಳಿಂದ ದೇಶದ ಬಂಡವಾಳ ಮಾರುಕಟ್ಟೆಗಳಿಂದ ಹಣವನ್ನು ಹಿಂದಕ್ಕೆ ಪಡೆಯುತ್ತಿದ್ದ ವಿದೇಶಿ ಹೂಡಿಕೆದಾರರು (ಎಫ್‌ಪಿಐ) ಅಕ್ಟೋಬರ್ ತಿಂಗಳಲ್ಲಿ ನಿವ್ವಳ ₹14,610 ಕೋಟಿ ಹೂಡಿಕೆ ಮಾಡಿದ್ದಾರೆ.

ದೇಶದ ಕಾರ್ಪೊರೇಟ್ ಕಂಪನಿಗಳ ವರಮಾನ ಗಳಿಕೆಯು ಚೆನ್ನಾಗಿ ಇರುವುದು, ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರವನ್ನು ಇಳಿಕೆ ಮಾಡಿರುವುದು ಮತ್ತು ಭಾರತ–ಅಮೆರಿಕ ನಡುವೆ ವಾಣಿಜ್ಯ ಒಪ್ಪಂದವೊಂದು ಶೀಘ್ರವೇ ಸಾಧ್ಯವಾಗಬಹುದು ಎಂಬ ಆಶಾಭಾವನೆಯಲ್ಲಿ ಅವರು ಈ ಹೂಡಿಕೆ ಮಾಡಿದ್ದಾರೆ.

ವಿದೇಶಿ ಹೂಡಿಕೆದಾರರು ಸೆಪ್ಟೆಂಬರ್‌ನಲ್ಲಿ ₹23,885 ಕೋಟಿ, ಆಗಸ್ಟ್‌ನಲ್ಲಿ ₹34,990 ಕೋಟಿ ಹಾಗೂ ಜುಲೈನಲ್ಲಿ ₹17,700 ಕೋಟಿ ಹೂಡಿಕೆಯನ್ನು ಹಿಂಪಡೆದಿದ್ದರು. ಅಕ್ಟೋಬರ್ ತಿಂಗಳಲ್ಲಿ ವಿದೇಶಿ ಹೂಡಿಕೆದಾರರ ನಿಲುವು ಬದಲಾಗಿದೆ. ಅಂದರೆ, ಜಾಗತಿಕ ಹೂಡಿಕೆದಾರರಿಗೆ ಭಾರತದ ಬಂಡವಾಳ ಮಾರುಕಟ್ಟೆಗಳ ಮೇಲೆ ಹೊಸದಾಗಿ ವಿಶ್ವಾಸ ಮೂಡಿದೆ.

ದೇಶದ ಷೇರುಪೇಟೆಗಳಲ್ಲಿ ಈಚೆಗೆ ಕಂಡುಬಂದ ಇಳಿಕೆ ಹಾಗೂ ಕಾರ್ಪೊರೇಟ್ ಕಂಪನಿಗಳು ಉತ್ತಮ ಫಲಿತಾಂಶ ತೋರಿರುವ ಕಾರಣದಿಂದಾಗಿ ದೇಶದ ಷೇರುಗಳ ಮೌಲ್ಯವು ಆಕರ್ಷಕವಾಗಿ ಕಾಣಲಾರಂಭಿಸಿದೆ. ವಿದೇಶಿ ಹೂಡಿಕೆದಾರರು ಭಾರತದ ಮಾರುಕಟ್ಟೆಗಳತ್ತ ಮತ್ತೆ ಮರಳಿರುವುದಕ್ಕೆ ಇದೂ ಒಂದು ಕಾರಣ ಎಂದು ಮಾರ್ನಿಂಗ್‌ಸ್ಟಾರ್ ಇನ್ವೆಸ್ಟ್‌ಮೆಂಟ್ ರಿಸರ್ಚ್ ಇಂಡಿಯಾ ಸಂಸ್ಥೆಯ ಸಂಶೋಧನಾ ನಿರ್ವಾಹಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ದೇಶದ ಅರ್ಥ ವ್ಯವಸ್ಥೆಯಲ್ಲಿನ ಸ್ಥಿರತೆ, ಜಾಗತಿಕ ಮಟ್ಟದಲ್ಲಿ ಪೂರಕ ಪರಿಸ್ಥಿತಿ ಹಾಗೂ ದೇಶದ ಕಾರ್ಪೊರೇಟ್ ಕಂಪನಿಗಳ ವರಮಾನದಲ್ಲಿ ಸ್ಥಿರತೆ ಕಂಡುಬಂದರೆ ಮುಂದಿನ ದಿನಗಳಲ್ಲಿಯೂ ವಿದೇಶಿ ಹೂಡಿಕೆದಾರರು ಹೂಡಿಕೆಯನ್ನು ಮುಂದುವರಿಸಬಹುದು ಎಂದು ಶ್ರೀವಾಸ್ತವ ಹೇಳಿದ್ದಾರೆ.

‘ಕಾರ್ಪೊರೇಟ್ ಕಂಪನಿಗಳ ವರಮಾನವು ಸುಧಾರಿಸಿದ ಸ್ಪಷ್ಟ ಲಕ್ಷಣಗಳು ಇವೆ. ಬೇಡಿಕೆಯಲ್ಲಿ ಉತ್ತಮ ಮಟ್ಟವು ಮುಂದುವರಿದರೆ ವರಮಾನವು ಇನ್ನಷ್ಟು ಹೆಚ್ಚಾಗುತ್ತದೆ. ಆಗ ಷೇರುಗಳ ಮೌಲ್ಯವು ಇನ್ನಷ್ಟು ಸಮಾಧಾನಕರವಾಗುತ್ತದೆ. ಹಾಗೆ ಆದಾಗ ವಿದೇಶಿ ಹೂಡಿಕೆದಾರರು ಹೂಡಿಕೆ ಮುಂದುವರಿಸುವ ಸಾಧ್ಯತೆ ಇದೆ’ ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಸಂಸ್ಥೆಯ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಹಬ್ಬಗಳ ಹೊತ್ತಿನಲ್ಲಿ ಪೆಟ್ರೋಲ್ ಮಾರಾಟ ಹೆಚ್ಚಳ



ನವದೆಹಲಿ (ಪಿಟಿಐ): ಅಕ್ಟೋಬರ್ ತಿಂಗಳಿನಲ್ಲಿ 36.5 ಲಕ್ಷ ಟನ್ ಪೆಟ್ರೋಲ್ ದೇಶದಲ್ಲಿ ಮಾರಾಟವಾಗಿದೆ. ಈ ಮಾರಾಟವು ಐದು ತಿಂಗಳ ಗರಿಷ್ಠ ಎಂದು ಕೇಂದ್ರ ಸರ್ಕಾರ ಭಾನುವಾರ ತಿಳಿಸಿದೆ.

ಕಳೆದ ವರ್ಷದ ಅಕ್ಟೋಬರ್‌ಗೆ ಹೋಲಿಸಿದರೆ ಈ ಅಕ್ಟೋಬರ್‌ನಲ್ಲಿನ ಪೆಟ್ರೋಲ್ ಮಾರಾಟದಲ್ಲಿ ಶೇ 7ರಷ್ಟು ಹೆಚ್ಚಳವಾಗಿದೆ. ಆದರೆ, ಡೀಸೆಲ್ ಮಾರಾಟ ಇಳಿಕೆಯಾಗಿದೆ ಎಂದು ಸರ್ಕಾರದ ಅಂಕಿ–ಅಂಶಗಳು ಹೇಳಿವೆ.

ಹಬ್ಬಗಳ ಕಾರಣದಿಂದಾಗಿ ಜನರ ಪ್ರಯಾಣ ಹೆಚ್ಚಳವಾಯಿತು. ಇದು ಪೆಟ್ರೋಲ್ ಮಾರಾಟ ಏರಿಕೆಗೆ ಕಾರಣವಾಗಿದೆ ಎಂದು ತಿಳಿಸಿದೆ. ಸೆಪ್ಟೆಂಬರ್ ತಿಂಗಳಿನಲ್ಲಿ 34 ಲಕ್ಷ ಟನ್ ಪೆಟ್ರೋಲ್ ಮಾರಾಟವಾಗಿತ್ತು.

ಅಕ್ಟೋಬರ್‌ನಲ್ಲಿ 76 ಲಕ್ಷ ಟನ್ ಡೀಸೆಲ್ ಮಾರಾಟವಾಗಿದೆ. ಕಳೆದ ಅಕ್ಟೋಬರ್‌ನಲ್ಲಿ 76.4 ಲಕ್ಷ ಟನ್ ಮಾರಾಟವಾಗಿತ್ತು. ಸಾಮಾನ್ಯವಾಗಿ ಮಳೆ ಶುರುವಾದ ನಂತರ ಡೀಸೆಲ್ ಬಳಕೆ ಕಡಿಮೆ ಆಗುತ್ತದೆ. ನೀರಾವರಿ ಪಂಪ್‌ಸೆಟ್‌ಗಳ ಬಳಕೆಯಲ್ಲಿ ಇಳಿಕೆ ಮತ್ತು ವಾಣಿಜ್ಯ ವಾಹನಗಳ ಸಂಚಾರ ಮಂದಗೊಳ್ಳುವುದರಿಂದ ಹೀಗಾಗುತ್ತದೆ. ದೇಶದ ಒಟ್ಟು ಇಂಧನದ ಬಳಕೆಯಲ್ಲಿ ಡೀಸೆಲ್ ಬಳಕೆ ಪ್ರಮಾಣ ಶೇ 40ರಷ್ಟಿದೆ.

ವಿಮಾನಗಳಲ್ಲಿ ಬಳಸುವ ಇಂಧನ (ಎಟಿಎಫ್) ಬಳಕೆ ಶೇ 1.6ರಷ್ಟು ಹೆಚ್ಚಳವಾಗಿ, 7.69 ಲಕ್ಷ ಟನ್ ಆಗಿದೆ. ಎಲ್‌ಪಿಜಿ ಮಾರಾಟವು ಶೇ 5.4ರಷ್ಟು ಏರಿಕೆಯಾಗಿ, 30 ಲಕ್ಷ ಟನ್‌ನಷ್ಟಾಗಿದೆ. ಮನೆಗಳಲ್ಲಿ ಬಳಸುವ ಅಡುಗೆ ಅನಿಲ ಸಿಲಿಂಡರ್ ಬಳಕೆ ಹೆಚ್ಚಾಗಿರುವುದೇ ಎಲ್‌ಪಿಜಿ ಮಾರಾಟ ಏರಿಕೆಗೆ ಕಾರಣವಾಗಿದೆ.

ಬ್ಯಾಂಕಿಂಗ್ ವಂಚನೆ ತಡೆಗೆ ಆರ್‌ಬಿಐ ಹೆಜ್ಜೆ

ಬಂಡವಾಳ ಮಾರುಕಟ್ಟೆ



ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ಭಾರತದಲ್ಲಿ ಡಿಜಿಟಲ್ ಬ್ಯಾಂಕಿಂಗ್ ವಂಚನೆ ಪ್ರಕರಣಗಳು ಗಣನೀಯವಾಗಿ ಏರಿಕೆಯಾಗುತ್ತಿವೆ. ಪ್ರತಿದಿನ ಜನರು ಯುಪಿಐ ಆ್ಯಪ್‌ಗಳು, ಸಾಲದ ನಕಲಿ ಆ್ಯಪ್‌ಗಳು, ಅಪರಿಚಿತ ಲಿಂಕ್‌ಗಳು (ಕೊಂಡಿ), ಡಿಜಿಟಲ್ ಅರೆಸ್ಟ್, ಸ್ಕ್ರೀನ್ ಷೇರಿಂಗ್ ಆ್ಯಪ್ ವಂಚನೆಗಳಿಗೆ ಸಿಲುಕಿ ಹಣ ಕಳೆದುಕೊಳ್ಳುತ್ತಿದ್ದಾರೆ. ಮತ್ತೊಂದು ಆತಂಕಕಾರಿ ವಿಷಯ ಅಂದರೆ ಜನರಿಗೆ ನಷ್ಟವಾಗುತ್ತಿರುವ ಮೊತ್ತ ಸಾವಿರ ರೂಪಾಯಿಗಳ ಲೆಕ್ಕದಲ್ಲಿ ಇಲ್ಲ; ಅದು ಲಕ್ಷ ಮತ್ತು ಕೋಟಿ ರೂಪಾಯಿಗಳ ಲೆಕ್ಕಾಚಾರಕ್ಕೆ ಬರುತ್ತಿದೆ. ಹೀಗೆ ಸೈಬರ್ ವಂಚನೆಗಳಲ್ಲಿ ಗಣನೀಯ ಏರಿಕೆ ಆಗುತ್ತಿರುವುದರಿಂದ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) 2026ರ ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಸಾಕಷ್ಟು ಬದಲಾವಣೆಗಳನ್ನು ತರುತ್ತಿದೆ. ಆರ್‌ಬಿಐ ತರುತ್ತಿರುವ ಮಹತ್ವದ ಸುಧಾರಣೆಗಳೇನು ಎನ್ನುವುದರ ಬಗ್ಗೆ ವಿವರವಾಗಿ ತಿಳಿಯುವುದು ಅಗತ್ಯ.

ಆತಂಕ ಹುಟ್ಟಿಸುವ ಆನ್‌ಲೈನ್ ವಂಚನೆಗಳು: 2022-23ರಲ್ಲಿ 13,494 ಆನ್‌ಲೈನ್ ವಂಚನೆ ಪ್ರಕರಣಗಳು ದಾಖಲಾಗಿದ್ದು, ಸುಮಾರು ₹18,981 ಕೋಟಿಯನ್ನು ಜನಸಾಮಾನ್ಯರು ಕಳೆದುಕೊಂಡಿದ್ದರು. 2023-24ರಲ್ಲಿ 36,060 ವಂಚನೆ ಪ್ರಕರಣಗಳಿಂದ ₹12,230 ಕೋಟಿ ಆನ್‌ಲೈನ್ ಕಳ್ಳರ ಪಾಲಾಗಿತ್ತು. ಇನ್ನು 2024-25ನೇ ಸಾಲಿನಲ್ಲಿ 23,953 ಡಿಜಿಟಲ್ ವಂಚನೆ ಪ್ರಕರಣಗಳಿಂದ ಜನರು ₹36,014 ಕೋಟಿ ಕಳೆದುಕೊಂಡಿದ್ದಾರೆ. ಅಂದರೆ ವಂಚನೆ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದ್ದರೂ ವಂಚನೆ ಮೊತ್ತದ ಪ್ರಮಾಣ ಕಳೆದ ಒಂದು ವರ್ಷದ ಅವಧಿಯಲ್ಲಿ ಶೇ 194ರಷ್ಟು ಹೆಚ್ಚಳವಾಗಿದೆ. ಆರ್‌ಬಿಐ ವಾರ್ಷಿಕ ವರದಿ 2025ರಲ್ಲೇ ಈ ಬಗ್ಗೆ ಉಲ್ಲೇಖವಿದೆ.

ವಂಚನೆ ನಡೆಯುತ್ತಿರುವುದು ಹೇಗೆ?: ಕಳ್ಳರ ಪಾಲಿಗೆ ನಿಮ್ಮ ಮೊಬೈಲ್ ಫೋನೇ ಯುದ್ಧಭೂಮಿ, ನಿಮ್ಮ ನಂಬಿಕೆ ದುರ್ಬಳಕೆ ಮಾಡಿಕೊಂಡು ವಂಚಿಸುವುದೇ ಅವರ ಗುರಿ. ಆನ್‌ಲೈನ್ ವಂಚಕರು ಈಗ ಒಟಿಪಿ ಬಳಸಿ ಮೋಸ ಎಸಗುವುದನ್ನಷ್ಟೇ ಮಾಡುತ್ತಿಲ್ಲ. ಎನಿಡೆಸ್ಕ್, ಟೀಮ್ ವೀವರ್ ತರಹದ ಷೇರಿಂಗ್ ಆ್ಯಪ್‌ಗಳು, ಗೂಗಲ್‌ನಲ್ಲಿ ಬರುತ್ತಿರುವ ನಕಲಿ ಬ್ಯಾಂಕ್ ಸೇವೆ ಸಂಖ್ಯೆಗಳು, ಡೀಪ್‌ಫೇಕ್ ವಾಯ್ಸ್ ಮೆಸೇಜ್‌ಗಳು, ಮಾಲ್‌ವೇರ್ ಆ್ಯಪ್‌ಗಳು, ಲೋನ್ ಆ್ಯಪ್ ಮೂಲಕ ಬ್ಲ್ಯಾಕ್‌ಮೇಲ್ ಮಾಡುವುದು ಸೇರಿ ಹಲವು ತಂತ್ರಗಳನ್ನು ಬಳಸುತ್ತಾರೆ.

ಕಿವಿಮಾತು: ಒಂದು ಕಡೆ ಸೈಬರ್ ವಂಚಕರು ಹೊಸ ಮಾರ್ಗಗಳನ್ನು ಕಂಡುಕೊಂಡು ಗ್ರಾಹಕರ ವಂಚನೆ ಮುಂದುವರಿಸುತ್ತಿದ್ದರೆ, ಮತ್ತೊಂದೆಡೆ ಅವರ ನಿಯಂತ್ರಣಕ್ಕೆ ಆರ್‌ಬಿಐ ಕಠಿಣ ನಿಯಮಗಳನ್ನು ಜಾರಿಗೆ ತರುತ್ತಿದೆ. ಇದರಿಂದ ಖಂಡಿತವಾಗಿಯೂ ಬ್ಯಾಂಕ್ ಗ್ರಾಹಕರಿಗೆ ದೊಡ್ಡ ಮಟ್ಟದ ಅನುಕೂಲವಾಗಲಿದೆ. ಆದರೆ ಕಳ್ಳರಿಗೆ ಪಾಸ್‌ವರ್ಡ್, ಒಟಿಪಿ ಕೊಟ್ಟರೆ, ಗೊತ್ತಿಲ್ಲದ ಲಿಂಕ್ ಮೇಲೆ ಕ್ಲಿಕ್ ಮಾಡಿದರೆ, ಕಾರ್ಡ್ ವಿವರ ನೀಡಿದರೆ ಎಂತಹ ಶ್ರೇಷ್ಠ ಸುರಕ್ಷತಾ ಕ್ರಮವೂ ನಿಮ್ಮ ಹಣದ ರಕ್ಷಣೆಗೆ ನಿಲ್ಲುವುದಿಲ್ಲ. ಸೈಬರ್ ವಂಚನೆಗಳ ತಡೆಗೆ ಜಾಗೃತಿಯೇ ಉತ್ತಮ ಮದ್ದು.

ಏಪ್ರಿಲ್ 1ರಿಂದ ಹೊಸ ನಿಯಮಗಳು

ಸೈಬರ್ ವಂಚನೆ ತಡೆಯಲು ಆರ್‌ಬಿಐ ಕಠಿಣ ನಿಯಮಗಳನ್ನು ಎಲ್ಲ ಬ್ಯಾಂಕ್ ಮತ್ತು ಪೇಮೆಂಟ್ ಆ್ಯಪ್‌ಗಳಿಗೆ ಅನ್ವಯವಾಗುವಂತೆ ಜಾರಿಗೆ ತರುತ್ತಿದೆ. ಗೂಗಲ್ ಪೇ, ಫೋನ್ ಪೇ, ಪೇಟಿಎಂ, ಭೀಮ್, ನೆಟ್ ಬ್ಯಾಂಕಿಂಗ್ ಆ್ಯಪ್‌ಗಳು ಈ ವ್ಯಾಪ್ತಿಗೆ ಬರುತ್ತವೆ. ಈ ಬದಲಾವಣೆಗಳು ನಿಮ್ಮ ಬ್ಯಾಂಕ್ ಮತ್ತು ಯುಪಿಐ ಆ್ಯಪ್ ಬಳಕೆ ಮೇಲೆ ನೇರ ಪರಿಣಾಮ ಉಂಟು ಮಾಡುತ್ತವೆ.

1. **ಎರಡು ಹಂತದ ಪರಿಶೀಲನೆ:** ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ನಿಮ್ಮ ಮೊಬೈಲ್, ಲೊಕೇಷನ್ ಮತ್ತು ಪಾವತಿ ಮೊತ್ತ ಆಧರಿಸಿ ಎರಡು ಹಂತದ ಪರಿಶೀಲನೆ (ಟೂ ಫ್ಯಾಕ್ಟರ್ ಅಥೆಂಟಿಕೇಷನ್) ಜಾರಿಗೆ ಬರಲಿದೆ.
2. **ಬ್ಯಾಂಕಿಂಗ್ ಆ್ಯಪ್‌ಗಳಲ್ಲಿ ಸ್ಕ್ರೀನ್ ಶಾಟ್ ರದ್ದು:** ಯಾವುದೇ ಪೇಮೆಂಟ್ ಆ್ಯಪ್ ಮತ್ತು ಬ್ಯಾಂಕಿಂಗ್ ಆ್ಯಪ್‌ಗಳಲ್ಲಿ ಸ್ಕ್ರೀನ್ ಶಾಟ್, ಸ್ಕ್ರೀನ್ ರೆಕಾರ್ಡ್ ಮತ್ತು ಸ್ಕ್ರೀನ್ ಷೇರ್ ಮಾಡುವ ಅವಕಾಶವಿರುವುದಿಲ್ಲ. ವಂಚನೆಗಳನ್ನು ತಡೆಯುವ ದೃಷ್ಟಿಯಿಂದ ಈ ಕಟ್ಟುನಿಟ್ಟಿನ ನಿಯಮ ತರಲಾಗುತ್ತಿದೆ.
3. **ರಾತ್ರಿ ವೇಳೆ ಪಾವತಿ ನಿರ್ಬಂಧಕ್ಕೆ ಅವಕಾಶ:** ನಿಮ್ಮ ಮೊಬೈಲ್ ಮತ್ತು ಯುಪಿಐ ಪೇಮೆಂಟ್ ಆ್ಯಪ್‌ಗಳಲ್ಲಿ ರಾತ್ರಿ ವೇಳೆ ಪಾವತಿಗಳನ್ನು ತಡೆಹಿಡಿಯಲು ಅವಕಾಶ ಕಲ್ಪಿಸಲಾಗುತ್ತದೆ. ಉದಾಹರಣೆಗೆ ರಾತ್ರಿ 11ರಿಂದ ಬೆಳಗ್ಗೆ 6 ಗಂಟೆವರೆಗೆ ನಿಮ್ಮ ಖಾತೆಯಿಂದ ಯಾವುದೇ ಮೊತ್ತ ಹೊರ ಹೋಗದಂತೆ ತಡೆಯಲು ಇದರಿಂದ ಸಾಧ್ಯವಾಗುತ್ತದೆ. ಆನ್‌ಲೈನ್ ವಂಚಕರ ಭಯದಿಂದ ಮುಕ್ತರಾಗಿ ನೆಮ್ಮದಿಯಾಗಿ ನಿದ್ರೆ ಮಾಡಲು ಇದು ನೆರವಾಗುತ್ತದೆ.
4. **ವೈರಸ್ ಕಂಡರೆ ಆ್ಯಪ್ ಕಾರ್ಯನಿರ್ವಹಣೆ ಸ್ಥಗಿತ:** ಬ್ಯಾಂಕಿಂಗ್ ಅಥವಾ ಪೇಮೆಂಟ್ ಆ್ಯಪ್‌ಗಳಲ್ಲಿ ವೈರಸ್ ಕಂಡು ಬಂದರೆ ಅದರ ಕಾರ್ಯನಿರ್ವಹಣೆ ಸ್ವಯಂ ಚಾಲಿತವಾಗಿ ನಿಲ್ಲಲಿದೆ. ನಿಮ್ಮ ಮೊಬೈಲ್‌ನಲ್ಲಿ ವಿಶ್ವಾಸಾರ್ಹವಲ್ಲದ ಆ್ಯಪ್‌ಗಳು ಕಂಡು ಬಂದರೆ ಅವನ್ನು ತೆಗೆಯುವ (ಅನ್‌ಇನ್‌ಸ್ಟಾಲ್) ತನಕ ಬ್ಯಾಂಕಿಂಗ್ ಮತ್ತು ಪೇಮೆಂಟ್ ಆ್ಯಪ್ ಕೆಲಸ ಮಾಡುವುದಿಲ್ಲ.
5. **ಒಟಿಪಿ ಎಸ್‌ಎಂಎಸ್ ರೂಪದಲ್ಲಿ ಬರಲ್ಲ:** ಸದ್ಯ ಯಾವುದೇ ಪಾವತಿ ಮಾಡಬೇಕಾದರೆ ಎಸ್‌ಎಂಎಸ್ ಮೂಲಕ ಒಟಿಪಿ ಬರುತ್ತದೆ. ಆದರೆ ಏಪ್ರಿಲ್ 1ರಿಂದ ಒಟಿಪಿ ನಿಮ್ಮ ಮೊಬೈಲ್ ಬ್ಯಾಂಕಿಂಗ್ ಆ್ಯಪ್‌ಗಳಿಗೆ ಬರಲಿದೆ. ಇದರಿಂದಾಗ ಆನ್‌ಲೈನ್ ವಂಚಕರು ಒಟಿಪಿ ಕದಿಯುವುದು ಅಷ್ಟು ಸುಲಭವಾಗುವುದಿಲ್ಲ.
6. **ಅನುಮಾನಾಸ್ಪದ ವಹಿವಾಟಿಗೆ ಹೆಚ್ಚುವರಿ ಪ್ರಶ್ನೆಗಳು:** ಆ್ಯಪ್‌ಗಳನ್ನು ಬಳಸಿ ನಿಮ್ಮ ಬ್ಯಾಂಕ್ ಖಾತೆಯಿಂದ ಅನುಮಾನಾಸ್ಪದ ವಹಿವಾಟುಗಳು ನಡೆಯುತ್ತಿವೆ ಎಂದಾದಲ್ಲಿ ಪಾವತಿಗೆ ತಾತ್ಕಾಲಿಕ ತಡೆಬೀಳುತ್ತದೆ. ಹೆಚ್ಚುವರಿ ಪ್ರಶ್ನೆಗಳಿಗೆ ಉತ್ತರಿಸಿ ಮರುಖಾತರಿಯಾದ ಬಳಿಕ ಪಾವತಿ ಮುಂದುವರಿಸಲು ಸಾಧ್ಯವಾಗುತ್ತದೆ.
7. **ದೊಡ್ಡ ಮೊತ್ತದ ಪಾವತಿಗೆ ಬಯೊಮೆಟ್ರಿಕ್:** ನೀವು ಬ್ಯಾಂಕಿಂಗ್ ಆ್ಯಪ್‌ಗಳನ್ನು ಬಳಸುವಾಗ ಟೈಪಿಂಗ್ ವೇಗ, ಸ್ವೈಪ್ ಪ್ಯಾಟರ್ನ್ ಮತ್ತು ಟಚ್ ಪ್ರೆಶರ್‌ಗಳನ್ನು ಟ್ರ್ಯಾಕ್ ಮಾಡಲಾಗುತ್ತದೆ. ಯಾವುದೇ ಸಂದರ್ಭದಲ್ಲಿ ಈ ವಿಧಾನಗಳಲ್ಲಿ ಅನುಮಾನಾಸ್ಪದ ನಡೆ ಕಂಡುಬಂದರೆ ವಹಿವಾಟು ಸ್ಥಗಿತಗೊಳಿಸಲಾಗುತ್ತದೆ. ದೊಡ್ಡ ಮೊತ್ತದ ಪಾವತಿಗಳಿಗೆ ಆಧಾರ್ ಬಯೊಮೆಟ್ರಿಕ್ ಪರಿಶೀಲನೆ ಮಾಡಲಾಗುತ್ತದೆ.

ರಸ್ತೆ ಅಪಘಾತ ಹಾಗೂ ಜೀವಹಾನಿ ತಪ್ಪಿಸಲು ಕೇಂದ್ರದ ಹೊಸ ಕ್ರಮ

ಅಪಘಾತ ಮರುಕಳಿಕೆ: ಗುತ್ತಿಗೆದಾರರಿಗೆ ದಂಡ



ನವದೆಹಲಿ (ಪಿಟಿಐ): ರಾಷ್ಟ್ರೀಯ ಹೆದ್ದಾರಿಯ ನಿರ್ದಿಷ್ಟ ಪ್ರದೇಶದಲ್ಲಿ ಒಂದು ವರ್ಷದ ಅವಧಿಯಲ್ಲಿ ಒಂದಕ್ಕಿಂತ ಹೆಚ್ಚು ಅಪಘಾತ ಸಂಭವಿಸಿದರೆ ಸಂಬಂಧಪಟ್ಟ ಗುತ್ತಿಗೆದಾರರಿಗೆ ದಂಡ ವಿಧಿಸಲು ಕೇಂದ್ರ ಹೆದ್ದಾರಿ ಸಚಿವಾಲಯ ನಿರ್ಧರಿಸಿದೆ. ರಸ್ತೆ ಅಪಘಾತ ಮತ್ತು ಜೀವಹಾನಿಯನ್ನು ತಪ್ಪಿಸಲು ಸಚಿವಾಲಯ ಈ ಕ್ರಮಕ್ಕೆ ಮುಂದಾಗಿದೆ.

ದಂಡ ವಿಧಿಸುವ ಕ್ರಮವು ‘ನಿರ್ಮಾಣ–ನಿರ್ವಹಣೆ–ವರ್ಗಾವಣೆ’ (ಬಿಒಟಿ) ಮಾದರಿಯಲ್ಲಿ ನಿರ್ಮಿಸಲಾದ ಹೆದ್ದಾರಿಗಳಿಗೆ ಅನ್ವಯವಾಗಲಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಕಾರ್ಯದರ್ಶಿ ವಿ. ಉಮಾಶಂಕರ್ ತಿಳಿಸಿದ್ದಾರೆ.

ಹೆದ್ದಾರಿ ಸಚಿವಾಲಯವು ಬಿಒಟಿ ಕಡತಗಳನ್ನು ಪರಿಷ್ಕರಿಸಿದೆ. ಇನ್ನು ಮುಂದೆ ಗುತ್ತಿಗೆದಾರರು, ತಾವು ಬಿಒಟಿ ಮಾದರಿಯಲ್ಲಿ ನಿರ್ಮಿಸಿದ ಹೆದ್ದಾರಿಯಲ್ಲಿ ನಿರ್ದಿಷ್ಟ ಅವಧಿಯಲ್ಲಿ ಒಂದಕ್ಕಿಂತ ಹೆಚ್ಚು ಅಪಘಾತ ಸಂಭವಿಸಿದರೆ ಹೆದ್ದಾರಿಯ ಆ ಪ್ರದೇಶದಲ್ಲಿನ ಲೋಪ ಸರಿಪಡಿಸುವ ಕೆಲಸ ಮಾಡಬೇಕಾಗುತ್ತದೆ ಎಂದು ಉಮಾಶಂಕರ್ ಹೇಳಿದ್ದಾರೆ.

‘ನಿರ್ದಿಷ್ಟ ವ್ಯಾಪ್ತಿಯಲ್ಲಿ ಒಂದಕ್ಕಿಂತ ಹೆಚ್ಚು ಅಪಘಾತ ಸಂಭವಿಸಿದರೆ, ಗುತ್ತಿಗೆದಾರನಿಗೆ ₹25 ಲಕ್ಷ ದಂಡ ವಿಧಿಸಲಾಗುತ್ತದೆ. ಮುಂದಿನ ವರ್ಷದಲ್ಲಿ ಮತ್ತೊಂದು ಅಪಘಾತ ಅಲ್ಲಿ ಸಂಭವಿಸಿದರೆ ದಂಡದ ಮೊತ್ತವು ₹50 ಲಕ್ಷಕ್ಕೆ ಹೆಚ್ಚಾಗುತ್ತದೆ’ ಎಂದು ಅವರು ವಿವರಿಸಿದ್ದಾರೆ. ಹೆದ್ದಾರಿ ಸಚಿವಾಲಯವು ಅಪಘಾತ ನಡೆಯುವ 3,500 ಸ್ಥಳಗಳನ್ನು ಗುರುತಿಸಿದೆ.

ರಸ್ತೆ ಅಪಘಾತಕ್ಕೆ ಒಳಗಾದವರಿಗೆ ನಗದು ರಹಿತವಾಗಿ ಚಿಕಿತ್ಸೆ ಒದಗಿಸುವ ಯೋಜನೆಗೆ ಕೇಂದ್ರ ಸರ್ಕಾರವು ಶೀಘ್ರದಲ್ಲಿಯೇ ಅಧಿಕೃತವಾಗಿ ಚಾಲನೆ ನೀಡಲಿದೆ. ಇದು ದೇಶದೆಲ್ಲೆಡೆ ಅನ್ವಯವಾಗಲಿದೆ. ಯೋಜನೆಯ ಪರೀಕ್ಷಾರ್ಥ ಅನುಷ್ಠಾನದ ಸಂದರ್ಭದಲ್ಲಿ ಪಡೆದ ಅನುಭವಗಳನ್ನು ಆಧರಿಸಿ ಯೋಜನೆಯಲ್ಲಿ ಅಗತ್ಯ ಬದಲಾವಣೆಗಳನ್ನು ತರಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಮೇ ತಿಂಗಳಲ್ಲಿ ಹೊರಡಿಸಿದ್ದ ಅಧಿಸೂಚನೆಯಲ್ಲಿ ಸಚಿವಾಲಯವು, ರಸ್ತೆ ಅಪಘಾತಗಳಲ್ಲಿ ಗಾಯಗೊಳ್ಳುವವರಿಗೆ ನಿರ್ದಿಷ್ಟವಾಗಿ ಗುರುತಿಸಲಾದ ಆಸ್ಪತ್ರೆಗಳಲ್ಲಿ ಮೊದಲ ಏಳು ದಿನಗಳವರೆಗೆ ₹1.5 ಲಕ್ಷದವರೆಗಿನ ಚಿಕಿತ್ಸೆಯನ್ನು ನಗದು ರಹಿತವಾಗಿ ನೀಡಲಾಗುತ್ತದೆ ಎಂದು ಹೇಳಿತ್ತು.

ನಗದು ರಹಿತ ಚಿಕಿತ್ಸೆಯ ಪ್ರಾಯೋಗಿಕ ಅನುಷ್ಠಾನವನ್ನು ಸಚಿವಾಲಯವು ಚಂಡೀಗಢದಲ್ಲಿ 2024ರ ಮಾರ್ಚ್ 14ರಂದು ಆರಂಭಿಸಿದೆ. ಇದನ್ನು ನಂತರ ಆರು ರಾಜ್ಯಗಳಿಗೆ ವಿಸ್ತರಿಸಲಾಗಿದೆ.

ಮುಖ್ಯಾಂಶಗಳು

- ಬಿಒಟಿ ಮಾದರಿಯಲ್ಲಿ ನಿರ್ಮಿಸಿದ ರಸ್ತೆಗಳಿಗೆ ಅನ್ವಯ
- ಮೊದಲ ಹಂತದಲ್ಲಿ ₹25 ಲಕ್ಷ ದಂಡ
- ಅಪಘಾತ ಮರುಕಳಿಸಿದರೆ ₹50 ಲಕ್ಷ ದಂಡ

ಗೋದ್ರೆಜ್ ಲಾಭ ಶೇ 2ರಷ್ಟು ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಮುಂಚೂಣಿ ಎಫ್‌ಎಂಸಿಜಿ ಕಂಪನಿಗಳ ಪೈಕಿ ಒಂದಾಗಿರುವ ಗೋದ್ರೆಜ್ ಕನ್ಸ್ಯೂಮರ್ ಪ್ರಾಡಕ್ಟ್ಸ್ ಲಿಮಿಟೆಡ್ (ಜಿಸಿಪಿಎಲ್) ಸೆಪ್ಟೆಂಬರ್ ತ್ರೈಮಾಸಿಕದ ಹಣಕಾಸು ಫಲಿತಾಂಶ ಪ್ರಕಟಿಸಿದ್ದು, ನಿವ್ವಳ ಮಾರಾಟವು ಶೇ 4ರಷ್ಟು ಹೆಚ್ಚಳವಾಗಿದೆ.

ಆದರೆ ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಕೆ ಮಾಡಿದರೆ ಸೆಪ್ಟೆಂಬರ್ ತ್ರೈಮಾಸಿಕದ ಅವಧಿಯಲ್ಲಿ ಕಂಪನಿಯ ನಿವ್ವಳ ಲಾಭದಲ್ಲಿ ಶೇ 2ರಷ್ಟು ಇಳಿಕೆ ಆಗಿದೆ. ಕಂಪನಿಯು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹459.34 ಕೋಟಿ ಲಾಭ ಗಳಿಸಿದೆ.

ಮೆಕ್ಸಿಕೊ: ಸೂಪರ್‌ಮಾರ್ಕೆಟ್‌ನಲ್ಲಿ ಸ್ಫೋಟ 23 ಮಂದಿ ಸಾವು

ಮೆಕ್ಸಿಕೊ ನಗರ (ಎಎಫ್‌ಪಿ): ಮೆಕ್ಸಿಕೊದ ಹರ್ಮೊಸಿಲ್ಲೊ ಎಂಬ ನಗರದ ಸೂಪರ್ ಮಾರ್ಕೆಟ್‌ವೊಂದರಲ್ಲಿ ಶನಿವಾರ ಸ್ಫೋಟ ಸಂಭವಿಸಿ 23 ಮಂದಿ ಮೃತಪಟ್ಟಿದ್ದು, 12 ಮಂದಿ ಗಾಯಗೊಂಡಿದ್ದಾರೆ. ಸೂಪರ್ ಮಾರ್ಕೆಟ್‌ನ ಕೆಟ್ಟಿದ್ದ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ನಿಂದಲೇ ಸ್ಫೋಟ ಸಂಭವಿಸಿರಬಹುದು ಎನ್ನಲಾಗುತ್ತಿದೆ.

‘ಘಟನೆಯು ಆಕಸ್ಮಿಕವಾಗಿ ಸಂಭವಿಸಿದೆ. ಮೃತರಲ್ಲಿ ಕೆಲವರು ಪುಟ್ಟ ಮಕ್ಕಳೂ ಇದ್ದಾರೆ. ಮೃತಪಟ್ಟವರಲ್ಲಿ ಹೆಚ್ಚಿನ ಮಂದಿ ವಿಷಕಾರಿ ಅನಿಲ ಸೇವಿಸಿದ್ದರು. ಗಾಯಗೊಂಡವರನ್ನು ಹತ್ತಿರದ ಆಸ್ಪತ್ರೆಗಳಲ್ಲಿ ದಾಖಲಿಸಲಾಗಿದೆ’ ಎಂದು ಸೊನಾರೊ ರಾಜ್ಯದ ಗವರ್ನರ್ ಆಲ್ಫೊಂಜೊ ಡುರಾಜೊ ಮಾಹಿತಿ ನೀಡಿದರು.

‘ಶನಿವಾರ ಮಧ್ಯಾಹ್ನ ಸುಮಾರು 2 ಗಂಟೆಗೆ ಸ್ಫೋಟ ಸಂಭವಿಸಿದೆ’ ಎಂದು ಸ್ಥಳೀಯ ಪತ್ರಿಕೆಯೊಂದು ವರದಿ ಮಾಡಿದೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹467-652
ದ್ವಿತಳಿ (ಬಿ.ವಿ)	₹466-856

ಮೊಟ್ಟೆ ಧಾರಣೆ (ಎನ್‌ಇಸಿಸಿ)

	ಬೆಂಗಳೂರು	ಮೈಸೂರು:
100 ಕ್ಕೆ	₹595	₹595
12 ಕ್ಕೆ	₹80	

ನೃತ್ಯ ಪ್ರದರ್ಶನ



ಪಿಟಿಐ ಚಿತ್ರ

ಮಧ್ಯಪ್ರದೇಶದ 70ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಭೋಪಾಲ್‌ನಲ್ಲಿ ಕಲಾವಿದರು ಭಾನುವಾರ ನೃತ್ಯ ಪ್ರದರ್ಶಿಸಿದರು

ಬ್ರಿಟನ್ ರೈಲಿನಲ್ಲಿ ಇರಿತ: 9 ಜನ ಗಂಭೀರ

ಲಂಡನ್ (ಪಿಟಿಐ): ಬ್ರಿಟನ್‌ನ ಕೇಂಬ್ರಿಜ್‌ಶೈರ್‌ನ ಹಂಟಿಂಗ್ಡನ್‌ನಲ್ಲಿ ಶನಿವಾರ ರಾತ್ರಿ ರೈಲಿನಲ್ಲಿ ಇಬ್ಬರು ದುಷ್ಕರ್ಮಿಗಳು ಪ್ರಯಾಣಿಕರಿಗೆ ಚಾಕುವಿನಿಂದ ಇರಿದಿದ್ದು, 10 ಮಂದಿ ಗಾಯಗೊಂಡಿದ್ದಾರೆ. ಇವರಲ್ಲಿ 9 ಜನರ ಸ್ಥಿತಿ ಗಂಭೀರವಾಗಿದೆ.


ಮಾಹಿತಿ ಲಭಿಸಿದ ಬೆನ್ನಲ್ಲೇ, ತುರ್ತು ಕಾರ್ಯಾಚರಣೆ ನಡೆಸಿದ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಘಟನೆ ಬೆನ್ನಲ್ಲೇ ಪೂರ್ವ ಇಂಗ್ಲೆಂಡ್‌ನಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದ್ದು, ಕಟ್ಟೆಚ್ಚರ ವಹಿಸಲಾಗಿದೆ.

‘ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. 9 ಮಂದಿ ಜೀವನ್ಮರಣದ ಮಧ್ಯೆ ಹೋರಾಟ ನಡೆಸುತ್ತಿದ್ದಾರೆ. ಭಯೋತ್ಪಾದನಾ ನಿಗ್ರಹ ಪೊಲೀಸ್ ತಂಡವೂ ನಮ್ಮೊಂದಿಗೆ ತನಿಖೆಯಲ್ಲಿ ಭಾಗಿಯಾಗಿದೆ’ ಎಂದು ಬ್ರಿಟಿಷ್ ವಿಶೇಷ ಪೊಲೀಸ್ ತಂಡ ತಿಳಿಸಿದೆ.

‘ಡಾನ್ಕಾಸ್ಟರ್‌ನಿಂದ ಕಿಂಗ್ಸ್ ಕ್ರಾಸ್ ಸ್ಟೇಷನ್‌ಗೆ ಹೊರಟಿದ್ದ ಹೈಸ್ಪೀಡ್ ರೈಲಿನಲ್ಲಿ ಈ ಘಟನೆ ನಡೆದಿದೆ. ಶನಿವಾರ ಸಂಜೆ 7.39ಕ್ಕೆ ರೈಲಿನಲ್ಲಿ ಇರಿತ ನಡೆದಿದೆ ಎಂಬ ಮಾಹಿತಿ ಲಭಿಸಿತು. ತಕ್ಷಣ ಕಾರ್ಯಪ್ರವೃತ್ತರಾಗಿ ಹಂಟಿಂಗ್ಡನ್ ನಿಲ್ದಾಣದಲ್ಲಿ ರೈಲು ನಿಲ್ಲಿಸಿ, ಇಬ್ಬರನ್ನು ಬಂಧಿಸಿದೆವು’ ಎಂದು ಭದ್ರತಾ ಸಿಬ್ಬಂದಿ ಹೇಳಿದ್ದಾರೆ.

ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಘಟನೆಯನ್ನು ಖಂಡಿಸಿದ್ದು, ‘ಇದೊಂದು ಭಯಾನಕ ಘಟನೆ. ಜನರು ಪೊಲೀಸರ ನಿರ್ದೇಶನಗಳನ್ನು ಪಾಲಿಸಬೇಕು’ ಎಂದು ಸಾಮಾಜಿಕ ಜಾಲತಾಣದ ಮೂಲಕ ಮನವಿ ಮಾಡಿದ್ದಾರೆ.

‘ತನಿಖೆ ನಡೆಯುತ್ತಿದೆ. ಪ್ರಾಥಮಿಕ ಹಂತದಲ್ಲೇ ಜನರು ಊಹಾಪೋಹದ ಸುದ್ದಿಗಳನ್ನು ಹರಡಬಾರದು’ ಎಂದು ಬ್ರಿಟನ್‌ನ ಗೃಹ ಕಾರ್ಯದರ್ಶಿ ಶಬಾನಾ ಮಹಮ್ಮದ್ ಮನವಿ ಮಾಡಿದ್ದಾರೆ.



ಹಂಟಿಂಗ್ಡನ್‌ನ ರೈಲು ನಿಲ್ದಾಣದಲ್ಲಿ ಭದ್ರತಾ ಸಿಬ್ಬಂದಿ ಪರಿಶೀಲನೆ ನಡೆಸಿದರು —ಎಎಫ್‌ಪಿ ಚಿತ್ರ

ಉಕ್ರೇನ್ ಮೇಲೆ ರಷ್ಯಾ ದಾಳಿ: ಇಬ್ಬರು ಸಾವು

ಕೀವ್ (ಪಿಟಿಐ): ಉಕ್ರೇನ್‌ನ ಒಡೆಸಾ ಪ್ರಾಂತ್ಯದ ಮೇಲೆ ರಷ್ಯಾ ನಡೆಸಿದ ಡ್ರೋನ್ ದಾಳಿಯಲ್ಲಿ ಇಬ್ಬರು ಸಾವಿಗೀಡಾಗಿದ್ದು, ಮೂವರು ಗಾಯಗೊಂಡಿದ್ದಾರೆ.

ದೇಶದ ಇಂಧನ ಮೂಲಸೌಕರ್ಯಗಳನ್ನು ಗುರಿ ಯಾಗಿಸಿ ರಷ್ಯಾ ತನ್ನ ದಾಳಿ ಮುಂದುವರಿಸಿದೆ ಎಂದು ಉಕ್ರೇನ್ ಅಧಿಕಾರಿಗಳು ಹೇಳಿದರು.

ಒಡೆಸಾದ ಕಾರು ನಿಲುಗಡೆ ಸ್ಥಳದ ಮೇಲೆ ಭಾನುವಾರ ಮುಂಜಾನೆ ರಷ್ಯಾ ಡ್ರೋನ್ ದಾಳಿ ನಡೆಸಿತು. ಝುಪೊರಿಝಿಯಾ ಪ್ರದೇಶದ ಮೇಲೆ ರಾತ್ರಿಯಿಡೀ ಡ್ರೋನ್ ಹಾಗೂ ಕ್ಷಿಪಣಿಗಳಿಂದ ರಷ್ಯಾ ದಾಳಿ ನಡೆಸಿತು. ಹೀಗಾಗಿ ಈ ಪ್ರದೇಶದಲ್ಲಿ ದೀರ್ಘ ಸಮಯದವರೆಗೆ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು.

‘ದಾಳಿ ವೇಳೆ ಇಬ್ಬರು ನಾಗರಿಕರು ಗಾಯಗೊಂಡಿದ್ದಾರೆ. ಸುಮಾರು 60,000 ಜನರು ವಿದ್ಯುತ್ ವ್ಯತ್ಯಯದಿಂದ ಸಮಸ್ಯೆ ಅನುಭವಿಸಿದ್ದಾರೆ’ ಎಂದು ಝುಪೊರಿಝಿಯಾ ಗವರ್ನರ್ ಇವಾನ್ ಫೆಡೊರೊವ್ ತಿಳಿಸಿದರು.

11 ರಾಯಭಾರಿಗಳ ವಾಪಸ್: ನೇಪಾಳ ‘ಸುಪ್ರೀಂ’ ತಡೆಯಾಜ್ಞೆ

ಕಠ್ಮಂಡು(ಪಿಟಿಐ): ಚೀನಾ, ಅಮೆರಿಕ ಸೇರಿ 11 ರಾಷ್ಟ್ರಗಳಲ್ಲಿನ ತನ್ನ ರಾಯಭಾರಿಗಳನ್ನು ವಾಪಸು ಕರೆಸಿಕೊಳ್ಳುವ ಸರ್ಕಾರದ ನಿರ್ಧಾರಕ್ಕೆ ನೇಪಾಳ ಸುಪ್ರೀಂ ಕೋರ್ಟ್ ಭಾನುವಾರ ತಡೆ ನೀಡಿದೆ.

ನ್ಯಾಯಮೂರ್ತಿಗಳಾದ ಶಾರಂಗ ಸುವೇದಿ ಹಾಗೂ ಶ್ರೀ ಕಾಂತ ಪೌಡೆಲ್ ಅವರು ಇದ್ದ ಪೀಠವು ಈ ಕುರಿತ ಅರ್ಜಿ ವಿಚಾರಣೆ ನಡೆಸಿ, ಮಧ್ಯಂತರ ತಡೆಯಾಜ್ಞೆ ನೀಡಿದೆ.

ಚೀನಾ, ಜರ್ಮನಿ, ಇಸ್ರೇಲ್, ಮಲೇಷ್ಯಾ, ಕತಾರ್, ರಷ್ಯಾ, ಸೌದಿ ಅರೇಬಿಯಾ, ಸ್ಪೇನ್, ಬ್ರಿಟನ್, ಅಮೆರಿಕ ಹಾಗೂ ಜಪಾನ್‌ನಲ್ಲಿರುವ ರಾಯಭಾರಿಗಳನ್ನು ನವೆಂಬರ್ 6ರ ಒಳಗಾಗಿ ವಾಪಸ್ ಕರೆಸಿಕೊಳ್ಳಬೇಕು ಎಂದು ಅಕ್ಟೋಬರ್ 6ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿತ್ತು.

ಸರ್ಕಾರದ ಈ ನಿರ್ಧಾರ ಪ್ರಶ್ನಿಸಿ, ಈ ಎಲ್ಲ ದೇಶಗಳಲ್ಲಿರುವ ರಾಜತಾಂತ್ರಿಕರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಈ ಹಿಂದಿನ, ನೇಪಾಳ ಕಮ್ಯುನಿಸ್ಟ್ ಪಾರ್ಟಿ–ಯುನಿಫೈಡ್ ಮಾರ್ಕ್ಸಿಸ್ಟ್ ಹಾಗೂ ನೇಪಾಳಿ ಕಾಂಗ್ರೆಸ್ ಮೈತ್ರಿಕೂಟ ನೇತೃತ್ವದ ಸರ್ಕಾರ ಈ ರಾಯಭಾರಿಗಳನ್ನು ನೇಮಕ ಮಾಡಿತ್ತು.

ಮುಂದುವರಿದ ‘ಸಿ.ಎಂ ಕುರ್ಚಿ’ ಚರ್ಚೆ

‘ಕುರ್ಚಿ ಖಾಲಿ ಇಲ್ಲ’

ಒಂದನೇ ಪುಟದಿಂದ...

‘ನನ್ನ ಮೇಲೆ ಮತ್ತು ಪಕ್ಷದ ಮೇಲೆ ಗೌರವವಿದ್ದರೆ, ದಯವಿಟ್ಟು ಈ ರೀತಿಯ ಆಧಾರರಹಿತ ಪ್ರಚಾರವನ್ನು ತಕ್ಷಣವೇ ನಿಲ್ಲಿಸಬೇಕು. ಮುಖ್ಯಮಂತ್ರಿಯವರ ನೇತೃತ್ವದಲ್ಲಿ ನಮ್ಮ ಸರ್ಕಾರ ಉತ್ತಮವಾಗಿ ಜನಪರ ಕಾರ್ಯಗಳನ್ನು ಮಾಡುತ್ತಿದೆ. ಈ ಸಮಯದಲ್ಲಿ ಒಗ್ಗಟ್ಟಿನಿಂದ ಕೆಲಸ ಮಾಡಿ, ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸುವುದಷ್ಟೇ ನಮ್ಮ ಗುರಿಯಾಗಿರಬೇಕು’ ಎಂದು ವಿವರಿಸಿದ್ದಾರೆ.

‘ಪಕ್ಷ ಮತ್ತು ನಾಡಿನ ಜನತೆ ವಹಿಸಿರುವ ಜವಾಬ್ದಾರಿಯನ್ನು ನಿಷ್ಠೆಯಿಂದ ನಿರ್ವಹಿಸುವು ದರತ್ತ ಮಾತ್ರ ನನ್ನ ಗಮನವಿದೆ. ಆದ್ದರಿಂದ, ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ನನ್ನ ಹಿತೈಷಿಗಳು ಯಾರೂ ಇಂತಹ ಗೊಂದಲಕಾರಿ ಪ್ರಚಾರಕ್ಕೆ ಕಿವಿಗೊಡಬಾರದು ಮತ್ತು ಇದರಲ್ಲಿ ಭಾಗಿಯಾಗಬಾರದು ಎಂದು ಕೋರುತ್ತೇನೆ. ನಾವೆಲ್ಲರೂ ಒಟ್ಟಾಗಿ ಪಕ್ಷವನ್ನು ಬಲಪಡಿಸಲು ಮತ್ತು ರಾಜ್ಯದ ಅಭಿವೃದ್ಧಿಗಾಗಿ ಶ್ರಮಿಸೋಣ’ ಎಂದು ಹೇಳಿದ್ದಾರೆ.

‘2028ರವರೆಗೆ ಸಿದ್ದರಾಮಯ್ಯ ಸಿ.ಎಂ’

ಒಂದನೇ ಪುಟದಿಂದ...

ನಗರದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು ‘ಮುಖ್ಯಮಂತ್ರಿ ಆಗಬೇಕು ಎನ್ನುವ ಆಸೆ ಎಲ್ಲರಿಗೂ ಇರುತ್ತದೆ. ಶಿವಕುಮಾರ್ ಅವರ ಅಭಿಮಾನಿಗಳು ಕೂಡ ಆಸೆ ಇಟ್ಟುಕೊಂಡಿದ್ದಾರೆ. ಶಿವಕುಮಾರ್ ಅಪಾರ ದೈವಭಕ್ತ ರಾಗಿದ್ದು ದೇವಸ್ಥಾನಗಳಿಗೆ ಹೋಗುವುದು ಸಾಮಾನ್ಯ. ಅವರು ದೇವಸ್ಥಾನಕ್ಕೆ ಹೋಗುವುದಕ್ಕೂ ಮುಖ್ಯಮಂತ್ರಿ ಸ್ಥಾನದ ಪೈಪೋಟಿಗೂ ಸಂಬಂಧವಿಲ್ಲ. ನವೆಂಬರ್‌ನಲ್ಲಿ ಯಾವ ಕ್ರಾಂತಿಯೂ ಇಲ್ಲ. ಎಲ್ಲವೂ ಬಿಜೆಪಿ ಸೃಷ್ಟಿ’ ಎಂದರು.

ಸಚಿವ ಸಂಪುಟ ವಿಸ್ತರಣೆ ಬಗ್ಗೆ ಕೇಳಲಾದ ಪ್ರಶ್ನೆಗೆ ‘ವಿಸ್ತರಣೆ ಆಗಬಹುದು. ಪಕ್ಷ ಸೂಚಿಸಿದರೆ ಸಚಿವ ಸ್ಥಾನ ತ್ಯಾಗಕ್ಕೂ ಸಿದ್ಧನಿದ್ದೇನೆ. ನನಗೆ ಪಕ್ಷ ಉಪ ಮುಖ್ಯಮಂತ್ರಿ ಪಟ್ಟ ಕೊಟ್ರೆ ನಾನು ಬೇಡ ಅನ್ನಲ್ಲ. ಎಲ್ಲರಿಗೂ ಆಸೆ ಇರ್ತದೆ. ಪಕ್ಷ ಏನು ತೀರ್ಮಾನ ಮಾಡುತ್ತೋ ಅದಕ್ಕೆ ನಾನು ಬದ್ಧ’ ಎಂದಷ್ಟೇ ಹೇಳಿದರು.

ದಲಿತ ಸಿಎಂ ಕೂಗಿಗೆ ನನ್ನ ಬೆಂಬಲ: ದಲಿತ ಸಮುದಾಯದವರು ಮುಖ್ಯಮಂತ್ರಿ ಆಗಬೇಕೆನ್ನುವ ಕೂಗು ಎದ್ದಿದ್ದು, ನನ್ನ ಬೆಂಬಲವೂ ಇದೆ. ಆದರೆ, ಅದು ಹೈಕಮಾಂಡ್ ತೀರ್ಮಾನ. ನಾನು ಅಭಿಪ್ರಾಯವಷ್ಟೇ ತಿಳಿಸಬಹುದು’ ಎಂದು ಜಮೀರ್ ಅಹಮದ್ ಹೇಳಿದರು.

‘ಹೇಳಿದವರು ಯಾರು?’

ಒಂದನೇ ಪುಟದಿಂದ...

‘ನಮ್ಮ ಪಕ್ಷದ ನಾಯಕರು, ಸಚಿವರು ದೆಹಲಿ ಭೇಟಿಗೆ ಹೋಗುವುದು ಹೊಸ ಮತ್ತು ವಿಶೇಷ ವಿಚಾರವೇನೂ ಅಲ್ಲ. ದೆಹಲಿಗೆ ಹೋದವರು ಹೈಕಮಾಂಡ್ ಅನ್ನು ಭೇಟಿ ಮಾಡುವುದು ಸಾಮಾನ್ಯ. ಸತೀಶ ಜಾರಕಿಹೊಳಿ ಅವರ ದೆಹಲಿ ಭೇಟಿಯಲ್ಲಿ ವಿಶೇಷವೇನೂ ಇಲ್ಲ. ತಂತ್ರಜ್ಞಾನ ಶೃಂಗಸಭೆ ಬಗ್ಗೆ ಮಾತನಾಡಲು ನಾನೂ ನಾಡಿದ್ದು ದೆಹಲಿಗೆ ಹೋಗುತ್ತಿದ್ದೇನೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ನೀವು ಉಪ ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಯೇ’ ಎಂದು ಸುದ್ದಿಗಾರರು ಪ್ರಶ್ನಿಸಿದ್ದಕ್ಕೆ, ‘ಸಚಿವ ಆಗಿದ್ದೇನೆ ಮತ್ತು ಜಿಲ್ಲಾ ಉಸ್ತುವಾರಿಯನ್ನೂ ನೀಡಿದ್ದಾರೆ. ಅವೆರಡನ್ನೂ ಮಾಡಿಕೊಂಡು ಹೋಗುತ್ತೇನೆ. ಈಗ ನನ್ನನ್ನು ಬಿಟ್ಟುಬಿಡಿ’ ಎಂದು ತೆರಳಿದರು.

ಇತಿಹಾಸ ನಿರ್ಮಿಸಿದ ಇಸ್ರೊ

ಒಂದನೇ ಪುಟದಿಂದ...

ಕನಿಷ್ಠ 15 ವರ್ಷ ಕಾರ್ಯಾಚರಣೆ: ಉಪಗ್ರಹವನ್ನು ಭೂಹೊಂದಾಣಿಕೆ ವರ್ಗಾವಣೆ ಕಕ್ಷೆಗೆ (ಜಿಟಿಒ) ಸೇರಿಸಲಾಗಿದ್ದು, ಇದು 2013ರಲ್ಲಿ ಉಡಾವಣೆ ಮಾಡಿದ ‘ಜಿಎಸ್‌ಎಟಿ–7’ ಸರಣಿಯ ಉಪಗ್ರಹಕ್ಕೆ ಬದಲಿಯಾಗಿ, ಮುಂದಿನ 15 ವರ್ಷಗಳವರೆಗೆ ಕಾರ್ಯ ನಿರ್ವಹಿಸಲಿದೆ ಎಂದು ಇಸ್ರೊ ಹೇಳಿದೆ.

ಸಾಗರಯಾನಕ್ಕೆ, ಭೂಮೇಲ್ಮೈನಲ್ಲಿ ನಡೆಯುವ ಚಟುವಟಿಕೆಗೆ ಅಗತ್ಯವಿರುವ ಸಂವಹನ ಸೇವೆಯನ್ನು ಈ ಉಪಗ್ರಹದ ಮೂಲಕ ನೀಡಲಾಗುತ್ತದೆ.

ಎಲ್‌ವಿಎಂ–3 ಮೂಲಕ ನಡೆದಿರುವ ಉಡಾವಣೆಗಳು ಶೇ 100ರಷ್ಟು ಯಶಸ್ಸಿನ ದರ ಹೊಂದಿವೆ. ಚಂದ್ರಯಾನ– 3ರ (3,841.4 ಕೆ.ಜಿ) ಉಡಾವಣೆ ನಂತರ ಈ ರಾಕೆಟ್, ಮತ್ತೊಂದು ಮೈಲಿಗಲ್ಲು ನಿರ್ಮಿಸಿದೆ.

ಇಸ್ರೊದ ಗಗನಯಾನ ಯೋಜನೆಯಲ್ಲಿ ‘ಎಲ್‌ವಿಎಂ–3’ ರಾಕೆಟ್ ಬಳಸುವ ಯೋಜನೆ ಇದ್ದು, ಇದಕ್ಕೆ ‘ಎಚ್‌ಆರ್‌ಎಲ್‌ವಿ’ ಎಂದು ಹೆಸರಿಡಲಾಗಿದೆ. 2018ರಲ್ಲಿ ಜಿಸ್ಯಾಟ್–11 (5,854 ಕೆ.ಜಿ) ಉಪಗ್ರಹವನ್ನು ಫ್ರೆಂಚ್ ಗಯಾನದಿಂದ ಉಡ್ಡಯನ ಮಾಡಲಾಗಿತ್ತು.

ಗಾಯಾಳುಗಳ ಸಂಖ್ಯೆ ಏರುಗತಿ

ಒಂದನೇ ಪುಟದಿಂದ...

‘ರಾಷ್ಟ್ರೀಯ ರೇಬಿಸ್ ನಿಯಂತ್ರಣ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ರೇಬಿಸ್ ನಿರೋಧಕ ಲಸಿಕೆಯು ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಮೇಲ್ಮಟ್ಟದ ಆಸ್ಪತ್ರೆಗಳಲ್ಲಿ ಲಭ್ಯವಿದೆ. ‘ರೇಬಿಸ್ ಇಮ್ಯುನೊಗ್ಲೋಬ್ಯುಲಿನ್’ (ಆರ್‌ಐಜಿ) ಚುಚ್ಚುಮದ್ದು ಸಮುದಾಯ ಆರೋಗ್ಯ ಕೇಂದ್ರ ಹಾಗೂ ಮೇಲ್ಮಟ್ಟದ ಆಸ್ಪತ್ರೆಗಳಲ್ಲಿ ದೊರೆಯುತ್ತದೆ. ಈ ಚಿಕಿತ್ಸೆಯನ್ನು ಸಂಪೂರ್ಣ ಉಚಿತವಾಗಿ ಒದಗಿಸಲಾಗುತ್ತಿದೆ’ ಎಂದು ಇಲಾಖೆಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಕಡಿತದ ವರದಿ ಕಡ್ಡಾಯ

ನಾಯಿ ಕಡಿತವನ್ನು ‘ಘೋಷಿತ ಕಾಯಿಲೆ’ಯ ವ್ಯಾಪ್ತಿಗೆ ತರಲಾಗಿರುವುದರಿಂದ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದವರ ಮಾಹಿತಿ ಲಭ್ಯವಾಗುತ್ತಿದೆ. ಆಸ್ಪತ್ರೆಗಳು ಈ ಕಡಿತ ಪ್ರಕರಣಗಳು ಹಾಗೂ ಮರಣ ಪ್ರಕರಣಗಳ ಮಾಹಿತಿಯನ್ನು ಕಡ್ಡಾಯವಾಗಿ ಒದಗಿಸಬೇಕಿದೆ. ಹಿಂದೆ ಖಾಸಗಿ ಆಸ್ಪತ್ರೆಗಳು ಈ ಬಗ್ಗೆ ಸಮರ್ಪಕ ಮಾಹಿತಿ ನೀಡದ ಪರಿಣಾಮ, ಪ್ರಕರಣಗಳ ನಿಖರ ಸಂಖ್ಯೆ ದೊರೆಯುತ್ತಿರಲಿಲ್ಲ.

‘ಕಡ್ಡಾಯವಾಗಿ ಚುಚ್ಚುಮದ್ದು ಪಡೆಯಿರಿ’

‘ಯಾವುದೇ ನಾಯಿ ಕಚ್ಚಿದರೂ ನಿರ್ಲಕ್ಷ್ಯ ಮಾಡಬಾರದು. ನಾಯಿ ಕಡಿತದಿಂದಲೇ ರೇಬಿಸ್ ಕಾಣಿಸಿಕೊಳ್ಳುವುದು ಜಾಸ್ತಿ. ರೇಬಿಸ್ ಸೋಂಕು ದೇಹದ ನರವ್ಯೂಹ ಸೇರಿದ ಬಳಿಕ ಬಲಿಷ್ಠಗೊಂಡು ವ್ಯಕ್ತಿಯನ್ನು ಗಾಸಿಗೊಳಿಸುತ್ತದೆ. ಹೀಗಾಗಿ, ಆದಷ್ಟು ಬೇಗ ಚಿಕಿತ್ಸೆಗೆ ಒಳಗಾಗಬೇಕು. ನಾಯಿ ಕಚ್ಚಿದ ಗಾಯದಿಂದ ರಕ್ತ ಬಂದಲ್ಲಿ, 24 ಗಂಟೆಯೊಳಗೆ ಕಡ್ಡಾಯವಾಗಿ ‘ರೇಬಿಸ್ ಇಮ್ಯುನೊಗ್ಲೋಬ್ಯುಲಿನ್’ ಚುಚ್ಚುಮದ್ದು ಪಡೆಯಬೇಕು. ಇದು ರೇಬಿಸ್ ತಡೆಯಲಿದ್ದು, ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ದೊರೆಯಲಿದೆ. ಕಚ್ಚಿದ ನಾಯಿ ಮೇಲೆ ಕೂಡ ನಿಗಾ ಇಡಬೇಕಾಗುತ್ತದೆ. ಯಾವುದೇ ಕಾರಣಕ್ಕೂ ನಾಯಿಯನ್ನು ಸಾಯಿಸಬಾರದು’ ಎಂದು ವೈದ್ಯಕೀಯ ತಜ್ಞ ಡಾ. ಅನ್ಸರ್ ಅಹಮದ್ ತಿಳಿಸಿದರು.

ಆರೋಗ್ಯ ಇಲಾಖೆ ಸಲಹೆ

- ನಾಯಿ ಕಡಿತದಿಂದ ಆದ ಗಾಯವನ್ನು ತಕ್ಷಣ ಸೋಪು ಮತ್ತು ನೀರಿನಿಂದ ತೊಳೆಯಬೇಕು
- ನಂಜುನಿರೋಧಕವನ್ನು ಹಚ್ಚಿಕೊಳ್ಳಬೇಕು
- ಗಾಯ ದೊಡ್ಡದಾಗಿದ್ದರೆ ಅಥವಾ ರಕ್ತಸ್ರಾವ ಅಧಿಕವಾಗಿದ್ದಲ್ಲಿ ಶುದ್ಧ ಬಟ್ಟೆ ಕಟ್ಟಿಕೊಳ್ಳಬೇಕು
- ತಕ್ಷಣ ವೈದ್ಯಕೀಯ ಚಿಕಿತ್ಸೆ ಪಡೆಯಬೇಕು
- ಕೂಡಲೇ ವೈದ್ಯಕೀಯ ನೆರವು ಪಡೆದಲ್ಲಿ ರೇಬಿಸ್ ತಡೆಯಲು ಸಾಧ್ಯ

2026ರ ಜ.23ಕ್ಕೆ ಲ್ಯಾಂಡ್‌ಲಾರ್ಡ್



ದುನಿಯಾ ವಿಜಯ್

‘ಕಾಟೇರ’ ಸಿನಿಮಾದ ಕಥೆಗಾರ, ನಿರ್ದೇಶಕ ಜಡೇಶ ಕೆ. ಹಂಪಿ ನಿರ್ದೇಶನದ, ‘ದುನಿಯಾ’ ವಿಜಯ್ ನಟನೆಯ ಸಿನಿಮಾ ‘ಲ್ಯಾಂಡ್‌ಲಾರ್ಡ್’ ಬಿಡುಗಡೆ ದಿನಾಂಕ ಘೋಷಣೆಯಾಗಿದೆ. ಚಿತ್ರವು 2026ರ ಜ.23ರಂದು ತೆರೆಕಾಣಲಿದೆ.

ಸಾರಥಿ ಫಿಲಂಸ್ ಲಾಂಛನದಲ್ಲಿ ಕೆ.ವಿ. ಸತ್ಯಪ್ರಕಾಶ್ ಹಾಗೂ ಹೇಮಂತ್ ಗೌಡ ಕೆ.ಎಸ್ ನಿರ್ಮಿಸಿರುವ ಈ ಸಿನಿಮಾದಲ್ಲಿ ನಾಯಕಿಯಾಗಿ ರಚಿತಾ ರಾಮ್ ನಟಿಸಿದ್ದು, ಇತ್ತೀಚೆಗೆ ಚಿತ್ರದ ಸರ್ವೈವರ್ ಟೀಸರ್ ಬಿಡುಗಡೆಯಾಯಿತು. ಜನವರಿ 20 ದುನಿಯಾ ವಿಜಯ್ ಅವರ ಜನ್ಮದಿನ. ಆ ಸಂದರ್ಭದಲ್ಲೇ ಚಿತ್ರ ಬಿಡುಗಡೆ ಮಾಡಿ ಅಭಿಮಾನಿಗಳಿಗೆ ಜನ್ಮದಿನದ ಕೊಡುಗೆ ನೀಡಲಿದೆ ಚಿತ್ರತಂಡ.

ಟೀಸರ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ದುನಿಯಾ ವಿಜಯ್, ‘ಸಾಕಷ್ಟು ಬಾಣಗಳು ನಾಟಿದರೂ ಆ ನೋವನ್ನು ತಡೆದುಕೊಳ್ಳುವ ಶಕ್ತಿಯನ್ನು ಅಭಿಮಾನಿಗಳು ನೀಡಿದ್ದಾರೆ. ಕಣ್ಣೀರನ್ನು ಒರೆಸಿದವರು ಅವರು. ಚಿತ್ರರಂಗದಲ್ಲಿ ದುನಿಯಾ ವಿಜಯ್ ಮುಗಿದೇಹೋದ ಎನ್ನುವಾಗ ತೊಡೆತಟ್ಟಿದವರು ಅವರು. ನಿಮ್ಮ ಜೊತೆ ನಾವಿದ್ದೇವೆ ಎಂದ ಅಭಿಮಾನಿ ಸಲಗ ಇವರು. ಪ್ರತಿಯೊಬ್ಬರಿಗೂ ಬದುಕಿನಲ್ಲಿ ನೋವು, ನಲಿವು, ಕಷ್ಟ ಬರುವುದು ಸಹಜ. ಇಂಥ ಸಮಯದಲ್ಲಿ ಕೈಹಿಡಿದ ಅಭಿಮಾನಿಗಳಿಗೆ ನಾನು ಚಿರಋಣಿ. ನಮ್ಮ ಕನ್ನಡ ಚಲನಚಿತ್ರರಂಗ ದೊಡ್ಡ ಮಟ್ಟಕ್ಕೆ ಹೋಗಿ ನಿಲ್ಲಬೇಕು ಎನ್ನುವುದೇ ನನ್ನ ಕನಸು. ನನ್ನ ಬೆನ್ನಿಗೆ ಎಷ್ಟೇ ಏಟು ಬಿದ್ದಿದ್ದರೂ, ಎಷ್ಟೇ ನೋವಿದ್ದರೂ ಅದನ್ನು ತೋರಿಸದೆ ನನ್ನಿಬ್ಬರು ಮಕ್ಕಳನ್ನು ಈ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿಸಿದ್ದೇನೆ. ಅವರಿಗೂ ನಿಮ್ಮ ಆಶೀರ್ವಾದವಿರಲಿ’ ಎಂದರು.

‘ಈ ‘ಲ್ಯಾಂಡ್‌ಲಾರ್ಡ್’ ಕೊನೆಯವರೆಗೂ ನೆನಪಿನಲ್ಲಿ ಉಳಿಯುವ ಸಿನಿಮಾ ಆಗಲಿದೆ. ಮೈಲಿಗಲ್ಲು ಸ್ಥಾಪಿಸಲಿದೆ. ಪ್ರತಿಯೊಬ್ಬನಿಗೂ ಬದುಕಲು ಅರ್ಹತೆ ಇದೆ, ಸಮಾನತೆ ಬೇಕು ಎನ್ನುವುದು ಮನಸ್ಸಿನಲ್ಲಿದ್ದರೆ ಅವರು ಖಂಡಿತಾ ‘ಲ್ಯಾಂಡ್‌ಲಾರ್ಡ್’ ನೋಡಬೇಕು. ಕನ್ನಡ ಚಿತ್ರರಂಗದ ಪ್ರಚಂಡ ಕಲಾವಿದರಲ್ಲಿ ಉಮಾಶ್ರೀ ಅವರೂ ಒಬ್ಬರು. ಅವರೂ ಈ ಸಿನಿಮಾದ ಭಾಗವಾಗಿದ್ದಾರೆ. ಅವರ ಜೊತೆ ತೆರೆಹಂಚಿಕೊಂಡಾಗ ನನ್ನ ತಾಯಿಯ ಜೊತೆಗೇ ನಟಿಸುತ್ತಿದ್ದೇನೆ ಎನ್ನುವ ಭಾವ ಮೂಡಿತ್ತು’ ಎಂದರು ವಿಜಯ್.




> ಈ ಸಿನಿಮಾದಲ್ಲಿ ನನ್ನ ವೃತ್ತಿ ಜೀವನದಲ್ಲೇ ಇಲ್ಲಿಯವರೆಗೂ ಮಾಡದಂಥ ಪಾತ್ರ ಮಾಡಿದ್ದೇನೆ. ಇದರ ಕಥೆ ಕೇಳಿ ಮೈಜುಂ ಎಂದಿತ್ತು. ವಿಜಯ್ ಅವರ ಜೊತೆ ಎರಡನೇ ಸಿನಿಮಾವಿದು. ಮೊದಲ ಸಿನಿಮಾ ಗ್ಲ್ಯಾಮರಸ್ ಆಗಿ ಕಾಣಿಸಿಕೊಂಡಿದ್ದ ನಾನು ಇಲ್ಲಿ 18 ವರ್ಷದ ಮಗಳಿರುವ ತಾಯಿಯಾಗಿ ನಟಿಸಿದ್ದೇನೆ.
> –**ರಚಿತಾ ರಾಮ್**, ನಟಿ

‘ಈ ಸಿನಿಮಾದಲ್ಲಿ ಸುಮಾರು 60 ಸಿನಿಮಾ ಹಾಗೂ ರಂಗಭೂಮಿ ಕಲಾವಿದರು ನಟಿಸಿದ್ದಾರೆ. ಎಲ್ಲಾ ಪಾತ್ರಗಳೂ ಒಂದೆಡೆ ಬಂದು ಸೇರುತ್ತವೆ. ಇದುವೇ ಚಿತ್ರದ ವಿಶೇಷ. ನನ್ನ ಸಿನಿಪಯಣದಲ್ಲಿ ಇಷ್ಟು ಬಜೆಟ್‌ನ ಸಿನಿಮಾವನ್ನು ಮಾಡಿರಲಿಲ್ಲ. ಇದೊಂದು ಬಿಗ್‌ಕ್ಯಾನ್ವಾಸ್ ಚಿತ್ರ. ಅನುಭವಪಟ್ಟ, ಕಣ್ಣಾರೆ ಕಂಡ ವಿಷಯಗಳನ್ನು ನಾನು ಸಿನಿಮಾ ಕಥೆಯಲ್ಲಿ ಅಳವಡಿಸುತ್ತೇನೆ. ಈ ಸಿನಿಮಾ ಮಾಡಲು ಶಿವರಾಮ ಕಾರಂತರ ‘ಚೋಮನ ದುಡಿ’ ಕೃತಿ ಸ್ಫೂರ್ತಿ’ ಎನ್ನುತ್ತಾರೆ ಜಡೇಶ್ ಕೆ.ಹಂಪಿ.

‘ಇದೊಂದು 80ರ ಕಾಲಘಟ್ಟದಲ್ಲಿ ನಡೆಯುವ ಈ ನೆಲದ ಕಥೆ. 45 ವರ್ಷಗಳ ಹಿಂದಿನದ್ದನ್ನು ತೆರೆಯ ಮೇಲೆ ತರುವುದು ಸುಲಭವಾಗಿರಲಿಲ್ಲ. ರಚಿತಾರಾಮ್, ರಿತನ್ಯಾ, ಶಿಶಿರ್ ಬೈಕಾಡಿ, ರಾಕೇಶ್ ಅಡಿಗ, ಅಚ್ಯುತ್ ಕುಮಾರ್, ಮಿತ್ರ, ಅಭಿಷೇಕ್ ದಾಸ್ ಹೀಗೆ ಕಲಾವಿದರ ದಂಡೇ ಈ ಸಿನಿಮಾದಲ್ಲಿದೆ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನದಲ್ಲಿ ಹಾಡುಗಳು ಚೆನ್ನಾಗಿ ಬಂದಿವೆ. ಯೋಗರಾಜ್ ಭಟ್ ಅವರು ಬರೆದು ದುನಿಯಾ ವಿಜಯ್ ಹಾಗೂ ರಚಿತರಾಮ್ ಅವರು ಅಭಿನಯಿಸಿರುವ ಹಾಡೊಂದು ಸದ್ಯದಲ್ಲೇ ಬಿಡುಗಡೆಯಾಗಲಿದೆ’ ಎಂದರು ಜಡೇಶ್.

ಉಪ್ಪಿ ಮೆಚ್ಚಿದ ‘ಐ ಆ್ಯಮ್ ಗಾಡ್’



ರವಿ ಗೌಡ, ಉಪೇಂದ್ರ


ನಟ ಉಪೇಂದ್ರ ಅವರ ಜೊತೆ ಕೆಲವು ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿರುವ ರವಿಗೌಡ ನಟಿಸಿ, ನಿರ್ದೇಶಿಸಿರುವ ‘ಐ ಆ್ಯಮ್ ಗಾಡ್’ ಸಿನಿಮಾ ನ.7ರಂದು ತೆರೆಕಾಣುತ್ತಿದೆ. ಇತ್ತೀಚೆಗೆ ಉಪೇಂದ್ರ ಅವರು ಚಿತ್ರದ ಟ್ರೇಲರ್ ರಿಲೀಸ್ ಮಾಡಿದರು.

ರವಿಗೌಡ ಅವರೇ ನಿರ್ಮಿಸಿರುವ ಈ ಸಿನಿಮಾ ಸಸ್ಪೆನ್ಸ್ ಥ್ರಿಲ್ಲರ್ ಪ್ರೇಮಕಥೆಯಾಗಿದೆ. ಉಪೇಂದ್ರ ಅವರ ಗರಡಿಯಲ್ಲಿ ಕೆಲಸ ಮಾಡಿದ ಕಾರಣ ಉಪೇಂದ್ರ ಸಿನಿಮಾ ಶೈಲಿಯನ್ನು ‘ಐ ಆ್ಯಮ್ ಗಾಡ್’ನಲ್ಲೂ ಕಾಣಬಹುದಾಗಿದೆ. ರವಿಗೌಡಗೆ ನಾಯಕಿಯಾಗಿ ವಿಜೇತಾ ನಟಿಸಿದ್ದಾರೆ. ರವಿಶಂಕರ್, ಅವಿನಾಶ್, ಅರುಣ ಬಾಲರಾಜ್ ಹಾಗೂ ನಿರಂಜನ್ ಕುಮಾರ್ ತಾರಾಬಳಗದಲ್ಲಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಜಿತಿನ್ ದಾಸ್ ಛಾಯಾಚಿತ್ರಗ್ರಹಣ ಸಿನಿಮಾಗಿದೆ.

ಸದ್ಯದಲ್ಲೇ ‘ರಕ್ತ ಕಾಶ್ಮೀರ’ ತೆರೆಗೆ

ಎಂಡಿಎಂ ಪ್ರೊಡಕ್ಷನ್ ಲಾಂಛನದಲ್ಲಿ ನಿರ್ಮಾಣವಾಗಿರುವ, ನಿರ್ದೇಶಕ ಎಸ್.ವಿ. ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ ‘ರಕ್ತ ಕಾಶ್ಮೀರ’ ಸಿನಿಮಾ ಸದ್ಯದಲ್ಲೇ ತೆರೆಗೆ ಬರಲಿದೆ.

ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ರಾಜೇಂದ್ರ ಸಿಂಗ್ ಬಾಬು. ‘ಈ ವರ್ಷ ನನಗೆ ಬಹಳ ವಿಶೇಷ. ನಾನು ನಿರ್ದೇಶಕನಾಗಿ 50 ವರ್ಷಗಳಾಗಿವೆ ಹಾಗೂ ನಾನು ನಿರ್ದೇಶಿಸಿರುವ ಎರಡು ಚಿತ್ರಗಳು ತೆರೆಗೆ ಬರಲು ಸಿದ್ಧವಾಗಿವೆ. ಅದರಲ್ಲಿ ಮೊದಲು ‘ರಕ್ತ ಕಾಶ್ಮೀರ’ ಚಿತ್ರ ಬಿಡುಗಡೆಯಾಗಲಿದೆ. ಶೀರ್ಷಿಕೆಯೇ ತಿಳಿಸುವಂತೆ ಪಾಕ್ ಆಕ್ರಮಿತ ಕಾಶ್ಮೀರವನ್ನು ವಾಪಸ್ ಪಡೆಯುವ ಹಾಗೂ ಭಯೋತ್ಪಾದನೆಯ ವಿರುದ್ಧ ಸಮರ ಸಾರುವ ಕಥಾಹಂದರವನ್ನು ಈ ಚಿತ್ರ ಹೊಂದಿದೆ. ಪಾಕ್ ಆಕ್ರಮಿತ ಕಾಶ್ಮೀರದ ಹತ್ತಿರದ ಸಿಂಧೂ ನದಿ ದಂಡೆಯಲ್ಲೇ ಈ ಸಿನಿಮಾದ ಚಿತ್ರೀಕರಣ ಮಾಡಿದ್ದೇವೆ. ನಟ ಉಪೇಂದ್ರ ಅವರು ಈ ಚಿತ್ರದಲ್ಲಿ ಎರಡು ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ನಟಿ ರಮ್ಯಾ ಅವರು ಆರು ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ನಾಲ್ಕೈದು ಜನ ಬಾಲ ಕಲಾವಿದರು ಪ್ರಮುಖಪಾತ್ರದಲ್ಲಿದ್ದಾರೆ. ಚಿತ್ರದಲ್ಲಿ ಉಪೇಂದ್ರ ಅವರು ಮಕ್ಕಳಿಗೆ ದೇಶದ ಕುರಿತು ಜಾಗೃತಿ ಮೂಡಿಸುತ್ತಾರೆ. ಹಾಗೆ ಅವರ ಮೂಲಕವೇ ಮಹತ್ತರ ಕೆಲಸವನ್ನು ಮಾಡಿಸುತ್ತಾರೆ. ‘ಆಪರೇಷನ್ ಸಿಂಧೂರ್’ ವಿಷಯಗಳನ್ನೂ ಸೇರಿಸಿದ್ದೇವೆ. ಇದು ಮಕ್ಕಳ ಸಿನಿಮಾವಲ್ಲ. ಇದೊಂದು ಕೌಟುಂಬಿಕ ಸಿನಿಮಾವಾಗಿದ್ದು ದೇಶಪ್ರೇಮದ ಕಥೆ ಇದೆ. ಚಿತ್ರದ ಮತ್ತೊಂದು ವಿಶೇಷವೆಂದರೆ ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಕನ್ನಡದ ಹದಿನಾಲ್ಕು ಜನಪ್ರಿಯ ನಾಯಕರು ಈ ಚಿತ್ರದ ಹಾಡೊಂದರಲ್ಲಿ ಅಭಿನಯಿಸಿದ್ದಾರೆ. ವಿಷ್ಣುವರ್ಧನ್, ಅಂಬರೀಶ್, ಶ್ರೀನಾಥ್, ಶಿವರಾಜ್‌ಕುಮಾರ್, ಪುನೀತ್ ರಾಜಕುಮಾರ್, ಜಗ್ಗೇಶ್, ಉಪೇಂದ್ರ, ರಮೇಶ್ ಅರವಿಂದ್, ದರ್ಶನ್, ಜೈ ಜಗದೀಶ್, ಆದಿತ್ಯ, ರಾಕ್‌ಲೈನ್ ವೆಂಕಟೇಶ್ ಸೇರಿದಂತೆ ಕನ್ನಡದ ದಿಗ್ಗಜ ನಾಯಕರು ಒಂದೇ ಹಾಡಿನಲ್ಲಿ ಅಭಿನಯಿಸಿದ್ದಾರೆ. ಸದ್ಯದಲ್ಲೇ ಬಿಡುಗಡೆ ದಿನಾಂಕ ಘೋಷಣೆ ಮಾಡುತ್ತೇವೆ’ ಎಂದರು.



ರಾಜೇಂದ್ರ ಸಿಂಗ್ ಬಾಬು

‘ಚಿತ್ರರಂಗದಿಂದ ರಮ್ಯಾ ಕೊಂಚ ದೂರವಾಗಿದ್ದಾರೆ. ಅವರು ಮತ್ತೆ ಬರಬೇಕು. ಎಷ್ಟೋ ಕಥೆಗಳನ್ನು ಓದುವಾಗ ರಮ್ಯಾ ಅವರು ಆ ಪಾತ್ರಗಳಿಗೆ ಸೂಕ್ತ ಎಂದೆನಿಸುತ್ತದೆ. ‘ರಾಣಿ ಚನ್ನಭೈರಾದೇವಿ’ಯನ್ನು ಓದುತ್ತಿದ್ದೇನೆ. ಇದಕ್ಕೆ ಖಂಡಿತವಾಗಿಯೂ ರಮ್ಯಾ ಅವರನ್ನು ಕೇಳಿಯೇ ಕೇಳುತ್ತೇನೆ. ಅವರು ಪಾತ್ರವನ್ನು ನಿಭಾಯಿಸಿದರೆ ಬಹಳ ಸಂತೋಷ’ ಎಂದರು ರಾಜೇಂದ್ರ ಸಿಂಗ್ ಬಾಬು.

‘ನಾನು ಈ ಚಿತ್ರದ ನಿರ್ಮಾಪಕನಾಗಿ ಕಾರ್ಯನಿರ್ವಹಿಸಿದ್ದೇನೆ. ಕನ್ನಡ ಚಿತ್ರರಂಗದ ಜನಪ್ರಿಯ ನಾಯಕರು ನಮ್ಮ ಚಿತ್ರದಲ್ಲಿ ನಟಿಸಿರುವುದು ನಿಜಕ್ಕೂ ಹೆಮ್ಮೆ. ಆರು ದಿನಗಳ ಕಾಲ ಅಷ್ಟೂ ಕಲಾವಿದರೊಂದಿಗೆ ಕಾಲ ಕಳೆದಿದ್ದು ಮರೆಯಲಾಗದ ಅನುಭವ’ ಎಂದರು ನಟ ಆದಿತ್ಯ.

ದೇಶದಾದ್ಯಂತ ವೈರಾಣು ಸೋಂಕು ಪ್ರಕರಣ ಹೆಚ್ಚಳ



ದೇಶದ ಜನರಲ್ಲಿ ವೈರಾಣು ಸೋಂಕಿನ ಪ್ರಕರಣಗಳು 2025ರ ಅವಧಿಯಲ್ಲಿ ಹೆಚ್ಚಾಗಿವೆ. ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನ (ಐಸಿಎಂಆರ್) ಅಡಿ ಬರುವ ಎಲ್ಲ ಪ್ರಯೋಗಾಲಯಗಳಲ್ಲಿ ದೇಶದಾದ್ಯಂತ 4.5 ಲಕ್ಷ ರೋಗಿಗಳನ್ನು ಪರೀಕ್ಷಿಸಲಾಗಿದೆ. ಇವರಲ್ಲಿ ಶೇ 11.1ರಷ್ಟು ಮಂದಿಯಲ್ಲಿ ರೋಗಕಾರಕ ವೈರಾಣುಗಳು ಪತ್ತೆಯಾಗಿವೆ. ಈ ಬಗ್ಗೆ ಐಸಿಎಂಆರ್ ವರದಿ ಬಿಡುಗಡೆ ಮಾಡಿದೆ. ಪ್ರತೀ ವರ್ಷವು ಐಸಿಎಂಆರ್ ಇಂಥ ಪರೀಕ್ಷೆಗಳನ್ನು ನಡೆಸುತ್ತದೆ

0.8% ಅಂಶಗಳಷ್ಟು ಏರಿಕೆ

	ಮಾದರಿಗಳ ಸಂಖ್ಯೆ	ಸೋಂಕಿನ ಪ್ರಕರಣಗಳು	ಸೋಂಕು ಹರಡುವಿಕೆ ಪ್ರಮಾಣ
ಜನವರಿ - ಮಾರ್ಚ್	2.28 ಲಕ್ಷ	24,502	10.7 %
ಏಪ್ರಿಲ್ - ಜೂನ್	2.26 ಲಕ್ಷ	26,055	11.5 %


‘ಎಚ್ಚರಿಕೆ ಗಂಟೆ’

ವೈರಾಣು ಹರಡುವಿಕೆಯ ಪ್ರಮಾಣದ ಏರಿಕೆಯು ದೊಡ್ಡ ಮಟ್ಟದಲ್ಲಿ ಇಲ್ಲ. ಆದರೂ ಇದನ್ನು ಕಡೆಗಣಿಸಲು ಸಾಧ್ಯವಿಲ್ಲ. ಇದೇ ರೀತಿ ತ್ರೈಮಾಸಿಕದ ಅವಧಿಯಲ್ಲಿ ಇಂಥ ಪರಿಶೀಲನೆಗಳನ್ನು ನಡೆಸಿದರೆ, ಭವಿಷ್ಯದಲ್ಲಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಬಹುದು

ಹಿರಿಯ ವಿಜ್ಞಾನಿಗಳು

ಪ್ರಮುಖ ರೋಗಕಾರಕ ವೈರಾಣು

1. ತೀವ್ರ/ಸಾಮಾನ್ಯ ಉಸಿರಾಟ ಸಂಬಂಧಿ ಸೋಂಕಿನಲ್ಲಿ ಇನ್‌ಫ್ಲುಯೆನ್ಜಾ ಪತ್ತೆ
2. ತೀವ್ರ ಜ್ವರ ಪ್ರಕರಣಗಳಲ್ಲಿ ಡೆಂಗಿ ಸೋಂಕು ಮತ್ತು ತೀವ್ರ ರಕ್ತಸ್ರಾವ ಆಗುವುದು ಪತ್ತೆ
3. ಜಾಂಡೀಸ್ ಪ್ರಕರಣಗಳಲ್ಲಿ ಹೆಪಟೈಟೀಸ್ ಎ ಪತ್ತೆ
4. ಅತಿಸಾರ ಪ್ರಕರಣಗಳಲ್ಲಿ ನೋರೊವೈರಸ್ ಪತ್ತೆ
5. ಮಿದುಳಿನ ತೀವ್ರ ಉರಿಯೂತ ಪ್ರಕರಣಗಳಲ್ಲಿ ಹರ್ಪಿಸ್ ಸಿಂಪ್ಲೆಕ್ಸ್ ವೈರಾಣು ಪತ್ತೆ




ರೋಗ ವಲಯ...

ಒಂದು ರೋಗವು ಪ್ರತಿ ವರ್ಷವೂ ಅದೇ ಅವಧಿಯಲ್ಲಿ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಹರಡಿಕೊಂಡರೆ, ಅದನ್ನು ‘ರೋಗ ವಲಯ’ ಎನ್ನಲಾಗುವುದು. ಏಪ್ರಿಲ್‌ನಿಂದ ಜೂನ್‌ವರೆಗೆ ಇಂಥ 191 ವಲಯಗಳನ್ನು ಪತ್ತೆ ಮಾಡಲಾಗಿದೆ. ಜನವರಿಯಿಂದ ಮಾರ್ಚ್‌ವರೆಗೆ ಇಂಥ 389 ವಲಯಗಳನ್ನು ಪತ್ತೆ ಮಾಡಲಾಗಿದೆ.

ಆಧಾರ: ಪಿಟಿಐ

ಬೀದಿ ನಾಯಿ ಹಾವಳಿ: ಇಂದು ವಿಚಾರಣೆ



ನವದೆಹಲಿ (ಪಿಟಿಐ): ಬೀದಿ ನಾಯಿಗಳ ಹಾವಳಿ ತಡೆಗಟ್ಟುವಿಕೆ ಕುರಿತ ಪ್ರಕರಣವನ್ನು ಸುಪ್ರೀಂ ಕೋರ್ಟ್ ಸೋಮವಾರ ವಿಚಾರಣೆ ನಡೆಸಲಿದೆ.

ನ್ಯಾಯಮೂರ್ತಿಗಳಾದ ವಿಕ್ರಮನಾಥ್, ಸಂದೀಪ್ ಮೆಹ್ತಾ ಹಾಗೂ ಎನ್.ವಿ.ಅಂಜಾರಿಯಾ ಅವರಿರುವ ವಿಶೇಷ ನ್ಯಾಯಪೀಠವು ವಿಚಾರಣೆ ನಡೆಸಲಿದೆ. ನ್ಯಾಯಾಲಯದ ಆದೇಶದಂತೆ ಪಶ್ಚಿಮ ಬಂಗಾಳ ಹಾಗೂ ತೆಲಂಗಾಣ ರಾಜ್ಯಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳು ಪೀಠದ ಮುಂದೆ ಹಾಜರಾಗಬೇಕಿದೆ.

ಪ್ರಾಣಿಗಳ ಜನನ ನಿಯಂತ್ರಣ (ಎಬಿಸಿ) ನಿಯಮಗಳ ಅನುಸಾರ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದನ್ನು ತಿಳಿಸಿ ಎಂದು ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಆ.22ರಂದು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು.

ಅ.27ರಂದು ವಿಚಾರಣೆ ನಡೆಸಿದ ಪೀಠವು, ‘ತಾನು ಆದೇಶ ನೀಡಿದ್ದರೂ ಪಶ್ಚಿಮ ಬಂಗಾಳ ಮತ್ತು ತೆಲಂಗಾಣ ಹೊರತುಪಡಿಸಿ ಇತರ ಯಾವುದೇ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಪ್ರಮಾಣ ಪತ್ರ ಸಲ್ಲಿಸಿಲ್ಲ’ ಎಂದು ತರಾಟೆಗೆ ತೆಗೆದುಕೊಂಡಿತ್ತು. ಹೀಗಾಗಿ ಎಲ್ಲಾ ಮುಖ್ಯ ಕಾರ್ಯದರ್ಶಿಗಳು ವಿಚಾರಣೆಗೆ ಹಾಜಾರಾಗಬೇಕೆಂದು ಆದೇಶಿಸಿತ್ತು.

ಖುದ್ದಾಗಿ ಹಾಜರಾಗುವುದರಿಂದ ವಿನಾಯಿತಿ ನೀಡುವಂತೆ ಮುಖ್ಯ ಕಾರ್ಯದರ್ಶಿಗಳು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಅದನ್ನು ನ್ಯಾಯಾಲಯವು ಅ.31ರಂದು ನಿರಾಕರಿಸಿತ್ತು. ‘ಹೀಗಾದರೆ ನ್ಯಾಯಾಲಯದ ಆದೇಶಕ್ಕೆ ಗೌರವವಿರುವುದಿಲ್ಲ’ ಎಂದು ಹೇಳಿತ್ತು.

ದೆಹಲಿಯಲ್ಲಿ ಬೀದಿ ನಾಯಿ ಕಡಿತದ ಪ್ರಕರಣಗಳು ಹೆಚ್ಚಾಗಿದ್ದು, ಅದರಲ್ಲೂ ಮಕ್ಕಳು ರೇಬಿಸ್‌ಗೆ ಬಲಿಯಾಗುತ್ತಿದ್ದಾರೆ ಎಂಬ ಮಾಧ್ಯಮ ವರದಿ ಆಧಾರದ ಮೇಲೆ ಜುಲೈ 28ರಂದು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ಸುಪ್ರೀಂ ಕೋರ್ಟ್, ಅದರ ವಿಚಾರಣೆಯನ್ನು ನಡೆಸುತ್ತಿದೆ.

ಕೇರಳದಲ್ಲಿ ಕ್ಯಾನ್ಸರ್ ರೋಗಿಗಳಿಗೆ ಉಚಿತ ಬಸ್ ಪ್ರಯಾಣ

ತಿರುವನಂತಪುರ (ಪಿಟಿಐ): ರಾಜ್ಯದಲ್ಲಿ ಕ್ಯಾನ್ಸರ್ ರೋಗಿಗಳಿಗೆ ಬಸ್‌ನಲ್ಲಿ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸುವುದಾಗಿ ಕೇರಳ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ಘೋಷಿಸಿದೆ. ಚಿಕಿತ್ಸೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಯಾವುದೇ ಆಸ್ಪತ್ರೆಗೆ ಭೇಟಿ ನೀಡಲು ಅನುಕೂಲವಾಗಲು ಈ ನಿರ್ಧಾರ ಕೈಗೊಳ್ಳಲಾಗಿದೆ.

ಸಾರಿಗೆ ಸಚಿವ ಕೆ.ಬಿ. ಗಣೇಶ್ ಕುಮಾರ್ ಅವರು ಇಂಥದ್ದೊಂದು ಯೋಜನೆ ಜಾರಿ ಮಾಡುವ ಬಗ್ಗೆ ಈ ಹಿಂದೆ ಹೇಳಿದ್ದರು.

ಕೆಎಸ್‌ಆರ್‌ಟಿಸಿ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಪ್ರಮೋಜ್ ಶಂಕರ್ ಅವರು ಅ.29ರಂದು ಈ ಬಗ್ಗೆ ಪ್ರಕಟಣೆ ಹೊರಡಿಸಿದ್ದಾರೆ. ‘ಕಿಮೋಥೆರಪಿ, ರೇಡಿಯೇಷನ್ ಹಾಗೂ ಇತರ ಚಿಕಿತ್ಸೆಗೆ ಸಂಬಂಧಿಸಿದಂತೆ ಆಸ್ಪತ್ರೆಗೆ ಹೋಗಲು ಕ್ಯಾನ್ಸರ್ ರೋಗಿಗಳು ಬಸ್‌ನಲ್ಲಿ ಉಚಿತವಾಗಿ ಪ್ರಯಾಣ ಮಾಡಬಹುದು. ಸಾಮಾನ್ಯ ಬಸ್‌ನಿಂದ ಸೂಪರ್‌ಫಾಸ್ಟ್ ಬಸ್‌ವರೆಗಿನ ದರ್ಜೆಯ ಬಸ್‌ಗಳಲ್ಲಿ ಈ ಸೇವೆ ಲಭ್ಯವಿರಲಿದೆ’ ಎಂದು ಪ್ರಕಟಣೆ ತಿಳಿಸಿದೆ.

ಈ ಸೇವೆ ಪಡೆಯಲು ರೋಗಿಗಳು, ಕೆಎಸ್‌ಆರ್‌ಟಿಸಿ ನೀಡುವ ರೇಡಿಯೋ ಫ್ರೀಕ್ವೆನ್ಸಿ ಐಡೆಂಟಿಫಿಕೇಶನ್ (ಆರ್‌ಎಫ್ ಐಡಿ) ಕಾರ್ಡ್ ಅನ್ನು ಪಡೆಯಬೇಕು. ಇದಕ್ಕಾಗಿ keralartcit.com. ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬೇಕು.

ರಸ್ತೆ ಅಪಘಾತ 15 ಸಾವು

ಜೈಪುರ(ಪಿಟಿಐ): ರಾಜಸ್ಥಾನದ ಫಲೋಡಿ ಜಿಲ್ಲೆ ಮತೋಡಾ ಗ್ರಾಮದ ಬಳಿ ನಿಂತಿದ್ದ ಟ್ರಕ್‌ವೊಂದಕ್ಕೆ ಭಾನುವಾರ ಟೆಂಪೊ ಟ್ರಾವೆಲರ್ ಡಿಕ್ಕಿ ಹೊಡೆದ ಪರಿಣಾಮ ಕನಿಷ್ಠ 15 ಮಂದಿ ಮೃತಪಟ್ಟು, ಇತರ ಇಬ್ಬರು ಗಾಯಗೊಂಡಿದ್ದಾರೆ.

‘ಮೃತರು ಜೋಧಪುರ ನಿವಾಸಿಗಳಾಗಿದ್ದು, ಬಿಕಾನೇರ್‌ನಲ್ಲಿರುವ ಕೋಲಾಯತ್ ದೇವಸ್ಥಾನಕ್ಕೆ ಭೇಟಿ ನೀಡಿ ಮರಳುತ್ತಿದ್ದ ವೇಳೆ ಈ ಅಪಘಾತ ಸಂಭವಿಸಿದೆ. ಗಾಯಾಳುಗಳನ್ನು ಜೋಧಪುರದ ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಜೋಧಪುರ ಪೊಲೀಸ್ ಕಮಿಷನರ್ ಓಂ ಪ್ರಕಾಶ್ ತಿಳಿಸಿದ್ದಾರೆ.

ಪ್ರಧಾನಿ ಮೋದಿ– ರಾಹುಲ್ ವಾಕ್ಸಮರ

ಬಿಹಾರ ವಿಧಾನಸಭಾ ಚುನಾವಣೆ
• ವಿವಿಧ ಪಕ್ಷಗಳಿಂದ ಬಿರುಸಿನ ಪ್ರಚಾರ

ಆರಾ (ಬಿಹಾರ) (ಪಿಟಿಐ): ಬಿಹಾರ ವಿಧಾನಸಭಾ ಚುನಾವಣೆಯ ಪ್ರಚಾರ ಬಿರುಸು ಪಡೆದುಕೊಂಡಿದ್ದು, ಪ್ರಧಾನಿ ನರೇಂದ್ರ ಮೋದಿ ಹಾಗೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಭಾನುವಾರ ತುರುಸಿನ ಪ್ರಚಾರ ನಡೆಸಿದ್ದಾರೆ. ಮೊದಲ ಹಂತದ ಮತದಾನದ ದಿನಾಂಕ ಸಮೀಪಿಸುತ್ತಿರುವಂತೆಯೇ ಬಿಜೆಪಿ–ಕಾಂಗ್ರೆಸ್ ಪರಸ್ಪರ ವಾಕ್ಸಮರ ತೀವ್ರಗೊಳಿಸಿವೆ.

ಭೋಜಪುರ ಜಿಲ್ಲೆಯ ಆರಾದಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡ ಪ್ರಧಾನಿ ಮೋದಿ ಅವರು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ಮುಂದುವರಿಸಿದರು. ‘ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಒಪ್ಪಿಕೊಳ್ಳಲು ಕಾಂಗ್ರೆಸ್ ಸಿದ್ಧವಿರಲಿಲ್ಲ. ಆದರೆ, ಬೆದರಿಕೆಗೆ ಮಣಿದು ಒಪ್ಪಿಕೊಳ್ಳಬೇಕಾಯಿತು’ ಎಂದು ಆರೋಪಿಸಿದರು.

‘ಆರ್‌ಜೆಡಿ ಪಕ್ಷದವರನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಘೋಷಿಸಲು ಕಾಂಗ್ರೆಸ್ ಎಂದಿಗೂ ಬಯಸಿರಲಿಲ್ಲ. ಆದರೆ, ಆರ್‌ಜೆಡಿಯು ಕಾಂಗ್ರೆಸ್‌ನ ತಲೆಗೆ ಕಟ್ಟಾ (ನಾಡ ಪಿಸ್ತೂಲ್) ಗುರಿ ಇಟ್ಟು ಬೆದರಿಸುವ ಮೂಲಕ ಮುಖ್ಯಮಂತ್ರಿ ಅಭ್ಯರ್ಥಿ ಸ್ಥಾನವನ್ನು ತನ್ನದಾಗಿಸಿಕೊಂಡಿತು. ಚುನಾವಣೆಯ ನಂತರ, ಎರಡೂ ಪಕ್ಷಗಳ ನಾಯಕರು ಪರಸ್ಪರ ತಲೆ ಒಡೆಯಲಿದ್ದಾರೆ. ಅದರಿಂದ ಬಿಹಾರಕ್ಕೆ ಯಾವುದೇ ಒಳಿತು ಉಂಟಾಗದು’ ಎಂದು ವಾಗ್ದಾಳಿ ನಡೆಸಿದರು.

ಆಡಳಿತಾರೂಢ ಎನ್‌ಡಿಎ ಭಾರಿ ಬಹುಮತದೊಂದಿಗೆ ಮತ್ತೆ ಅಧಿಕಾರಕ್ಕೇರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಅವರು, ‘ವಿಕಸಿತ ಭಾರತ’ಕ್ಕೆ ಅಗತ್ಯವಾಗಿರುವ ‘ಅಭಿವೃದ್ಧಿ ಹೊಂದಿದ ಬಿಹಾರ’ ನಿರ್ಮಾಣದ ಕೆಲಸ ಮುಂದುವರಿಯಲಿದೆ ಎಂದರು.

> ಲಾಲು ಅವರ ಮಗ (ತೇಜಸ್ವಿ) ಬಿಹಾರದ ಮುಖ್ಯಮಂತ್ರಿಯಾದರೆ ಅಪಹರಣ, ಸುಲಿಗೆ ಮತ್ತು ಕೊಲೆ ಪ್ರಕರಣಗಳ ಮೇಲ್ವಿಚಾರಣೆ ಮಾಡಲು ಇನ್ನೂ ಮೂರು ಹೊಸ ಖಾತೆಗಳನ್ನು ರಚಿಸಲಾಗುತ್ತದೆ
> **ಅಮಿತ್ ಶಾ,** ಕೇಂದ್ರ ಗೃಹ ಸಚಿವ

> ಬಿಜೆಪಿ ಮತ್ತು ಜೆಡಿಯು ಕಳೆದ 20 ವರ್ಷಗಳಲ್ಲಿ ಬಿಹಾರದ ಯುವ ಜನರ ಪ್ರತಿಯೊಂದು ಅವಕಾಶವನ್ನೂ ಕಸಿದುಕೊಂಡಿವೆ. ಇದೀಗ ಬದಲಾವಣೆಯ ಕಾಲ ಕೂಡಿಬಂದಿದೆ
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

‘ಬಿಜೆಪಿಯಿಂದ ಮತ ಕಳವು’

ಬೆಗೂಸರಾಯ್ ವರದಿ: ‘ಕರ್ನಾಟಕ, ಮಹಾರಾಷ್ಟ್ರ, ಹರಿಯಾಣ ಮತ್ತು ಮಧ್ಯ ಪ್ರದೇಶದ ಚುನಾವಣೆಗಳನ್ನು ಬಿಜೆಪಿ ಹಾಗೂ ಆರ್‌ಎಸ್‌ಎಸ್ ‘ಸಂಪೂರ್ಣವಾಗಿ ಕದ್ದಿವೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದರು.

ಬೆಗೂಸರಾಯ್‌ನಲ್ಲಿ ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ಅವರು ‘ಚುನಾವಣಾ ಆಯೋಗವು ಬಿಹಾರದಲ್ಲಿ ಮಹಾಘಟಬಂಧನ್ ಮೈತ್ರಿಕೂಟದ ಬೆಂಬಲಿಗರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಿದೆ. ನಾವು ಇದಕ್ಕೆ ಈಗಾಗಲೇ ಪುರಾವೆಗಳನ್ನು ಒದಗಿಸಿದ್ದು, ಅದನ್ನು ಮತ್ತೆ ಒದಗಿಸುತ್ತೇವೆ’ ಎಂದರು.

‘ಪ್ರಧಾನಿ ಮೋದಿ ಅವರು ಮತ ಗಳಿಕೆಗಾಗಿ ಏನು ಬೇಕಾದರೂ ಮಾಡಲು ಸಿದ್ಧರಿದ್ದಾರೆ’ ಎಂದು ಹೇಳಿದ ಕಾಂಗ್ರೆಸ್ ನಾಯಕ, ‘ನೀವು ಅವರಿಗೆ (ಪ್ರಧಾನಿಗೆ) ಯೋಗ ಮಾಡಲು ಹೇಳಿದರೆ ಅವರು ಕೆಲವು ಆಸನಗಳನ್ನು ಮಾಡುತ್ತಾರೆ’ ಎಂದು ವ್ಯಂಗ್ಯವಾಡಿದರು.

‘ಮತ ಗಳಿಸಲು ಅವರು ವೇದಿಕೆಯ ಮೇಲೆ ನೃತ್ಯ ಮಾಡುತ್ತಾರೆ. ಚುನಾವಣೆಯ ದಿನದವರೆಗೆ ನೀವು ಏನೇ ಹೇಳಿದರೂ ಮೋದಿ ಅದನ್ನು ಮಾಡುವರು. ಏಕೆಂದರೆ, ಚುನಾವಣೆಯ ನಂತರ ಅವರು ತಮ್ಮ ನೆಚ್ಚಿನ ಉದ್ಯಮಿಗಳ ಪರವಾಗಿ ಮಾತ್ರ ಕೆಲಸ ಮಾಡುತ್ತಾರೆ’ ಎಂದು ಟೀಕಿಸಿದರು.





ಪ್ರಧಾನಿ ನರೇಂದ್ರ ಮೋದಿ ಅವರು ಪಟ್ನಾದಲ್ಲಿ ಭಾನುವಾರ ನಡೆದ ರೋಡ್ ಶೋ ವೇಳೆ ಬೆಂಬಲಿಗರತ್ತ ಕೈಬೀಸಿದರು (ಎಡಚಿತ್ರ). ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬೆಗೂಸರಾಯ್‌ನ ಕೊಳದಲ್ಲಿ ಮೀನು ಹಿಡಿಯುತ್ತಿದ್ದ ಮೀನುಗಾರರ ಜತೆ ಮಾತನಾಡಲು ದೋಣಿಯಿಂದ ನೀರಿಗೆ ಧುಮುಕಿದರು –ಎಎಫ್‌ಪಿ / ಪಿಟಿಐ ಚಿತ್ರಗಳು

‘ಚೇತರಿಸದ ಕಾಂಗ್ರೆಸ್’

‘ನಮ್ಮ ಸೈನಿಕರು ಪಾಕಿಸ್ತಾನದಲ್ಲಿನ ಭಯೋತ್ಪಾದಕರ ಅಡಗುತಾಣಗಳ ಮೇಲೆ ಬಾಂಬ್ ದಾಳಿ ನಡೆಸಿದಾಗ ಕಾಂಗ್ರೆಸ್‌ನ ‘ರಾಜಮನೆತನದವರು’ ನಿದ್ದೆ ಕಳೆದುಕೊಳ್ಳುತ್ತಿದ್ದರು. ಪಾಕಿಸ್ತಾನ ಮತ್ತು ಕಾಂಗ್ರೆಸ್, ಆಪರೇಷನ್ ಸಿಂಧೂರದ ಆಘಾತದಿಂದ ಇನ್ನೂ ಚೇತರಿಸಿಕೊಂಡಿಲ್ಲ. ಭಯೋತ್ಪಾದಕರನ್ನು ಅವರ ತವರು ನೆಲದಲ್ಲಿಯೇ ಮಟ್ಟಹಾಕುವುದಾಗಿ ನಾವು ಪ್ರತಿಜ್ಞೆ ಮಾಡಿದ್ದೆವು. ಸಿಂಧೂರ ಕಾರ್ಯಾಚರಣೆ ಮೂಲಕ ಆ ಭರವಸೆಯನ್ನು ಈಡೇರಿಸಿದ್ದೇವೆ. ಇದು ರಾಷ್ಟ್ರಕ್ಕೆ ಹೆಮ್ಮೆ ತಂದಿದೆ. ಅವರು (ರಾಹುಲ್) ನುಸುಳುಕೋರರಿಗೆ ರಕ್ಷಣೆ ನೀಡಲಿಕ್ಕಾಗಿ ‘ಮತದಾರರ ಅಧಿಕಾರ ಯಾತ್ರೆ’ ನಡೆಸಿದ್ದಾರೆ. ಬಿಹಾರದ ಜನರ ಸಂಪನ್ಮೂಲ ನುಸುಳುಕೋರರ ಕೈಸೇರಬಾರದು’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

‘ಪ್ರಧಾನಿಗೆ ಟ್ರಂಪ್ ಭಯ’

‘ವಿಶಾಲ ಎದೆ ಹೊಂದಿರುವುದು ನಿಮ್ಮನ್ನು ಧೈರ್ಯಶಾಲಿಯನ್ನಾಗಿ ಮಾಡುವುದಿಲ್ಲ. ಸಣಕಲು ಮೈಕಟ್ಟು ಹೊಂದಿದ್ದ ಮಹಾತ್ಮ ಗಾಂಧಿ ಆ ಕಾಲದ ದೈತ್ಯ ಶಕ್ತಿ ಎನಿಸಿದ್ದ ಬ್ರಿಟಿಷರನ್ನು ಯಾವ ರೀತಿ ಎದುರಿಸಿದ್ದರು ಎಂಬುದನ್ನು ನೋಡಿ. ‘ನನಗೆ 56 ಇಂಚಿನ ಎದೆ ಇದೆ. ನಾನು ಯಾರಿಗೂ ಹೆದರುವುದಿಲ್ಲ’ ಎಂದು ಹೇಳುವ ಮೋದಿ ಅವರು ಆಪರೇಷನ್ ಸಿಂಧೂರ ಸಮಯದಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕರೆ ಮಾಡಿದಾಗ ಹೆದರಿದರು. ಪಾಕ್ ವಿರುದ್ಧದ ಸೇನಾ ಸಂಘರ್ಷ ಎರಡೇ ದಿನದಲ್ಲಿ ಕೊನೆಗೊಂಡಿತು. ಅವರು (ಮೋದಿ) ಟ್ರಂಪ್‌ಗೆ ಹೆದರುತ್ತಾರೆ. ಅಂಬಾನಿ, ಅದಾನಿ ಅವರು ರಿಮೋಟ್ ಕಂಟ್ರೋಲ್ ಮೂಲಕ ಪ್ರಧಾನಿಯನ್ನು ನಿಯಂತ್ರಿಸುತ್ತಿದ್ದಾರೆ’ ಎಂದು ರಾಹುಲ್ ಗಾಂಧಿ ಹೇಳಿದರು.

ಸರ್ವ ಪಕ್ಷಗಳ ಸಭೆಯಲ್ಲಿ 46 ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಭಾಗಿ

ಎಸ್‌ಐಆರ್ ವಿರುದ್ಧ ‘ಸುಪ್ರೀಂ’ಗೆ ಸ್ಟಾಲಿನ್

ಪ್ರಜಾವಾಣಿ ವಾರ್ತೆ/ಪಿಟಿಐ

ಚೆನ್ನೈ: ತಮಿಳುನಾಡಿನಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಆರಂಭಗೊಳ್ಳಲು ಎರಡು ದಿನ ಬಾಕಿ ಉಳಿದಿರುವಂತೆ, ಇದರ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ಡಿಎಂಕೆ ಮತ್ತು ಮಿತ್ರ ಪಕ್ಷಗಳು ನಿರ್ಧರಿಸಿವೆ. ಭಾನುವಾರ ಇಲ್ಲಿ ನಡೆದ ಸರ್ವ ಪಕ್ಷಗಳ ಸಭೆಯಲ್ಲಿ ಈ ನಿರ್ಣಯ ಅಂಗೀಕರಿಸಲಾಗಿದೆ ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ತಿಳಿಸಿದರು.

ನವೆಂಬರ್ 4ರಿಂದ ಡಿಸೆಂಬರ್ 4ರವರೆಗೆ ನಡೆಯಲಿರುವ ‘ಎಸ್‌ಐಆರ್’ ಕೈಬಿಡಬೇಕು ಎಂದು ಕಾಂಗ್ರೆಸ್ ಮತ್ತು ಎಡಪಕ್ಷಗಳು ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದು, ವಿಧಾನಸಭಾ ಚುನಾವಣೆಯ ನಂತರ, ಮುಂದಿನ ವರ್ಷ ಇದನ್ನು ನಿಷ್ಪಕ್ಷಪಾತವಾಗಿ ನಡೆಸಬೇಕು ಎಂದು ಆಗ್ರಹಿಸಿವೆ.

ಸ್ಟಾಲಿನ್ ಅಧ್ಯಕ್ಷತೆಯಲ್ಲಿ ನಡೆದ ಸರ್ವ ಪಕ್ಷಗಳ ಸಭೆಯಲ್ಲಿ 46 ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಆದರೆ, ನಟ ವಿಜಯ್ ಅವರ ಟಿವಿಕೆ ಪಕ್ಷ, ಪಿಎಂಕೆ, ಎಎಂಎಂಕೆ ಸೇರಿದಂತೆ ಎಐಎಡಿಎಂಕೆ–ಬಿಜೆಪಿ ಮೈತ್ರಿಕೂಟದ ಭಾಗವಾಗಿರದ ಇತರ ಪಕ್ಷಗಳು ಸಭೆಯನ್ನು ಬಹಿಷ್ಕರಿಸಿದ್ದವು.

‘ಕೇಂದ್ರ ಬಿಜೆಪಿ ಕೈಗೊಂಬೆಯಾಗಿ ಚುನಾವಣಾ ಆಯೋಗ ವರ್ತಿಸುತ್ತಿದೆ’ ಎಂದು ಆರೋಪಿಸಿದ ಸರ್ವಪಕ್ಷ ಸಭೆಯು, ಎಸ್‌ಐಆರ್ ಜಾರಿ ವಿರುದ್ಧದ ನಿರ್ಣಯವನ್ನು ಅಂಗೀಕರಿಸಿತು.

‘ಎಸ್‌ಐಆರ್’ ನಡೆಸಲು ಉದ್ದೇಶಿಸಿರುವ ಸಮಯದಲ್ಲಿ, ಮತದಾರರ ಅಂತಿಮ ಪಟ್ಟಿ ಪ್ರಕಟವಾಗುವುದಕ್ಕಿಂತ (ಜ.31) ಮೊದಲೇ ‘ಪೊಂಗಲ್ ಮತ್ತು ಕ್ರಿಸ್‌ಮಸ್ ಹಬ್ಬ ಇರುವುದರಿಂದ ಹಲವು ಜನರಿಗೆ ಇದರಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ. ಅರ್ಹ ಮತದಾರರ ಹೆಸರುಗಳು ಪಟ್ಟಿಯಿಂದ ಕೈಬಿಟ್ಟು ಹೋಗುವ ಸಾಧ್ಯತೆ ಇದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು. ಆದರೆ, ಚುನಾವಣಾ ಆಯೋಗ ಇದನ್ನು ಒಪ್ಪದಿದ್ದರೆ ನಾವು ಸುಪ್ರೀಂಕೋರ್ಟ್ ಮೊರೆ ಹೋಗುವುದಲ್ಲದೆ, ಬೇರೆ ದಾರಿ ಇಲ್ಲ’ ಎಂದು ಸ್ಟಾಲಿನ್ ಹೇಳಿದರು.

ಎಐಎಡಿಎಂಕೆ ಮತ್ತು ಬಿಜೆಪಿ ಎಸ್‌ಐಆರ್ ಸ್ವಾಗತಿಸಿದ್ದು, ಚುನಾವಣೆಯಲ್ಲಿ ಸೋಲುವ ಭಯದಿಂದಲೇ ಡಿಎಂಕೆ ಇದನ್ನು ವಿರೋಧಿಸಿದೆ ಎಂದು ದೂರಿವೆ.

ಗೊಂದಲದ ಗೂಡು: ವಿಜಯ್



ವಿಜಯ್

ಚೆನ್ನೈ: ಎಸ್‌ಐಆರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಹಲವು ಗೊಂದಲಗಳಿದ್ದು, ಅವೆಲ್ಲವೂ ನಿವಾರಣೆಯಾಗುವವರೆಗೆ ತಮಿಳುನಾಡಿನಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆಸಬಾರದು ಎಂದು ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಮುಖ್ಯಸ್ಥ, ನಟ ವಿಜಯ್ ಭಾನುವಾರ ಆಗ್ರಹಿಸಿದ್ದಾರೆ.

‘ನ. 4ರಿಂದ ತಮಿಳುನಾಡಿನಲ್ಲಿ ಎಸ್‌ಐಆರ್ ಆರಂಭಿಸಲು ಚುನಾವಣಾ ಆಯೋಗವು ಉದ್ದೇಶಿಸಿರುವಂತೆಯೇ ಈ ಬಗ್ಗೆ ವಿಜಯ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಜತೆಗೆ ರಾಜ್ಯದಲ್ಲಿ ಒಟ್ಟು 6.36 ಕೋಟಿ ಮಂದಿ ಮತದಾರರಿದ್ದಾರೆ. ಕೇವಲ 30 ದಿನಗಳಲ್ಲಿ ಎಲ್ಲರ ದಾಖಲೆ ಪರಿಶೀಲನೆ ಸಾಧ್ಯವೇ’ ಎಂದು ಪ್ರಶ್ನಿಸಿದ್ದಾರೆ.

‘ಹಾವಿನ ಹುತ್ತದಲ್ಲಿ ಆಮ್ಲ ಸುರಿದಂತೆ’



ಸುವೇಂದು

ಕೋಲ್ಕತ್ತ(ಪಿಟಿಐ): ಚುನಾವಣಾ ಆಯೋಗವು ಕೈಗೊಳ್ಳುತ್ತಿರುವ ಎಸ್‌ಐಆರ್, ಹಾವಿನ ಹುತ್ತದೊಳಗೆ ಕಾರ್ಬಾಲಿಕ್ ಆಮ್ಲ ಸುರಿದಂತೆ ಎಂದು ಹೋಲಿಕೆ ಮಾಡಿರುವ ಬಿಜೆಪಿ ನಾಯಕ ಸುವೇಂದು ಅಧಿಕಾರಿ, ‘ಇದು ಪಶ್ಚಿಮ ಬಂಗಾಳದಲ್ಲಿ ನೆಲಸಿರುವ ನುಸುಳುಕೋರರನ್ನು ಪತ್ತೆಮಾಡುವ ಪ್ರಕ್ರಿಯೆ’ ಎಂದು ಭಾನುವಾರ ಹೇಳಿದ್ದಾರೆ.

‘ಟಿಎಂಸಿ ನೆರವಿನಿಂದ ನುಸುಳುಕೋರರು ರಾಜ್ಯದಲ್ಲಿ ಹಲವು ವರ್ಷಗಳಿಂದ ವಾಸಿಸುತ್ತಿದ್ದಾರೆ. ಅವರನ್ನು ಪತ್ತೆ ಹಚ್ಚಿ, ಗಡಿಪಾರು ಮಾಡಲಾಗುವುದು. ಹುತ್ತದೊಳಗೆ ಕಾರ್ಬಾಲಿಕ್ ಆಮ್ಲ ಸುರಿದಾಗ ಹಾವುಗಳು ಹೊರಬರುತ್ತವೆ. ಅವುಗಳನ್ನು ಹಿಡಿದು ಹೊರಗೆ ಎಸೆಯಲಾಗುತ್ತದೆ. ಚುನಾವಣಾ ಆಯೋಗವು ನುಸುಳುಕೋರರ ಸಮಸ್ಯೆಗೆ ‘ಎಸ್‌ಐಆರ್’ ಎಂಬ ಸೂಕ್ತ ಔಷಧಿ ಬಳಕೆ ಮಾಡುತ್ತಿದೆ’ ಎಂದು ಅಧಿಕಾರಿ ಹೇಳಿದ್ದಾರೆ.

ಹರ್ಮನ್ ಪಡೆಯ ಮುಡಿಗೆ ವಿಶ್ವಕಪ್

ದೀಪ್ತಿ ಶರ್ಮಾ–ಶಫಾಲಿ ವರ್ಮಾ ಆಲ್‌ರೌಂಡ್ ಆಟದ ಸೊಬಗು • ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡಕ್ಕೆ ನಿರಾಸೆ

ಐಸಿಸಿ ಮಹಿಳಾ ವಿಶ್ವಕಪ್

ನವಿ ಮುಂಬೈ (ಪಿಟಿಐ): ಶಫಾಲಿ ವರ್ಮಾ ಮತ್ತು ದೀಪ್ತಿ ಶರ್ಮಾ ಭಾನುವಾರ ರಾತ್ರಿ ವಿಜಯದ ದೀಪ ಬೆಳಗಿದರು. ಅವರ ಆಲ್‌ರೌಂಡ್ ಆಟದ ಬಲದಿಂದ ಭಾರತ ವನಿತೆಯರ ತಂಡವು ಮೊದಲ ಸಲ ವಿಶ್ವಕಪ್ ಜಯಿಸಿತು.

ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಫೈನಲ್‌ನಲ್ಲಿ ಭಾರತ ತಂಡವು 52 ರನ್‌ಗಳಿಂದ ದಕ್ಷಿಣ ಆಫ್ರಿಕಾ ಎದುರು ಜಯಭೇರಿ ಬಾರಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಭಾರತ ಮಹಿಳಾ ತಂಡವು 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 298 ರನ್ ಗಳಿಸಿತು. ಅದಕ್ಕುತ್ತರವಾಗಿ ದಿಟ್ಟ ಹೋರಾಟ ನಡೆಸಿದ ದಕ್ಷಿಣ ಆಫ್ರಿಕಾ ತಂಡದ ನಾಯಕಿ ಲಾರಾ ವೋಲ್ವಾರ್ಟ್ (101ರನ್) ಅಮೋಘ ಶತಕ ಬಾರಿಸಿದರು. ಆದರೆ ಉಳಿದ ಬ್ಯಾಟರ್‌ಗಳಿಂದ ದೀರ್ಘ ಇನಿಂಗ್ಸ್ ಮೂಡಿಬರಲಿಲ್ಲ. ಅದರ ಫಲವಾಗಿ ಮೊದಲ ವಿಶ್ವಕಪ್ ಜಯದ ಸಂಭ್ರಮ ದಕ್ಷಿಣ ಆಫ್ರಿಕಾದ ಕೈತಪ್ಪಿತು. 45.3 ಓವರ್‌ಗಳಲ್ಲಿ 246 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಭಾನುವಾರ ಮಧ್ಯಾಹ್ನ ಮಳೆ ಸುರಿದಿದ್ದರಿಂದ ಎರಡು ತಾಸು ತಡವಾಗಿ ಪಂದ್ಯ ಆರಂಭವಾಯಿತು. ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಆತಿಥೇಯ ತಂಡದ ಆರಂಭಿಕ ಜೋಡಿ ಸ್ಮೃತಿ ಮಂದಾನ (45; 58ಎ, 4X8) ಮತ್ತು ಶಫಾಲಿ ವರ್ಮಾ (87; 78ಎ, 4X7, 6X2) ಮೊದಲ ವಿಕೆಟ್ ಜೊತೆಯಾಟದಲ್ಲಿ 104 ರನ್ ಸೇರಿಸಿದರು. ಅರ್ಧ ಶತಕದತ್ತ ಹೆಜ್ಜೆಯಿಟ್ಟಿದ್ದ ಸ್ಮೃತಿ ಅವರು ಚೋಲೆ ಟ್ರೈಯನ್ ಅವರು ಹಾಕಿದ 18ನೇ ಓವರ್‌ನಲ್ಲಿ ವಿಕೆಟ್‌ಕೀಪರ್ ಝೂಫ್ತಾಗೆ ಕ್ಯಾಚ್ ಕೊಟ್ಟರು.

ಪ್ರತೀಕಾ ರಾವಲ್ ಅವರು ಗಾಯಗೊಂಡಿದ್ದರಿಂದ ತಂಡದಲ್ಲಿ ಸ್ಥಾನ ಪಡೆದಿರುವ ಶಫಾಲಿ ಈ ಟೂರ್ನಿಯಲ್ಲಿ ಆಡಿದ ಎರಡನೇ ಪಂದ್ಯವಿದು. ಸೆಮಿಫೈನಲ್‌ನಲ್ಲಿ ಮಿಂಚಿರಲಿಲ್ಲ. ಆದರೆ ಶಫಾಲಿ ಈ ಪಂದ್ಯದಲ್ಲಿ ತಮ್ಮ ಸಾಮರ್ಥ್ಯ ಮೆರೆದರು. ದಕ್ಷಿಣ ಆಫ್ರಿಕಾ ಬೌಲರ್‌ಗಳ ಶಿಸ್ತಿನ ದಾಳಿಗೆ ದಿಟ್ಟ ಉತ್ತರ ಕೊಟ್ಟರು. ಆದರೆ ಶತಕದ ಸಮೀಪದದಲ್ಲಿದ್ದಾಗ ಅಯಾಬೊಂಗಾ ಕಾಕಾ ಬೌಲಿಂಗ್‌ನಲ್ಲಿ ಔಟಾದರು. ಸೆಮಿಫೈನಲ್ ಪಂದ್ಯದ ಗೆಲುವಿನ ರೂವಾರಿಯಾಗಿದ್ದ ಜಿಮಿಮಾ ರಾಡ್ರಿಗಸ್ (24 ರನ್) ಅವರೊಂದಿಗೆ ಶಫಾಲಿ 62 ರನ್ ಸೇರಿಸಿದರು. ಜಿಮಿಮಾ ಆಟಕ್ಕೂ ಅಯಾಬೊಂಗಾ ತಡೆಯೊಡ್ಡಿದ್ದರು.


ವೋಲ್ವಾರ್ಟ್

ನಾಯಕಿ ಹರ್ಮನ್‌ಪ್ರೀತ್ ಕೌರ್ (20 ರನ್) ಅವರನ್ನು ನಿಯಂತ್ರಿಸುವಲ್ಲಿ ಮ್ಲಾಬಾ ಯಶಸ್ವಿಯಾದರು. ಒಂದು ಕಡೆ ವಿಕೆಟ್ ಪತನವಾಗುತ್ತಿದ್ದರೂ ದೀಪ್ತಿ ಶರ್ಮಾ ಗಟ್ಟಿಯಾಗಿ ನಿಂತರು. 100ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು. ಮೂರು ಬೌಂಡರಿ ಮತ್ತು ಒಂದು ಸಿಕ್ಸರ್ ಬಾರಿಸಿದರು. ರಿಚಾ ಘೋಷ್ (34; 24ಎ) ಕೂಡ ಬೀಸಾಟವಾಡಿದರು. ರಿಚಾ ಅವರ ವಿಕೆಟ್ ಕೂಡ ಅಯಾಬೊಂಗಾ ಪಾಲಾಯಿತು. ದೀಪ್ತಿ ಕೊನೆಯ ಓವರ್‌ನಲ್ಲಿ ರನ್‌ಔಟ್ ಆದರು.



ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ಉತ್ತಮ ಆರಂಭವನ್ನೇ ಮಾಡಿತು. ಲಾರಾ ವೋಲ್ವಾರ್ಟ್ ಮತ್ತು ತಾಜ್ಮೀನ್ ಬ್ರಿಟ್ಸ್ ಮೊದಲ ವಿಕೆಟ್‌ಗೆ 51 ರನ್ ಸೇರಿಸಿದರು. 10ನೇ ಓವರ್‌ನಲ್ಲಿ ಬ್ರಿಟ್ಸ್ ರನೌಟ್ ಆಗುವುದರೊಂದಿಗೆ ಭಾರತಕ್ಕೆ ಮೊದಲ ಯಶಸ್ಸು ದೊರೆಯಿತು. ಆದರೆ ಲಾರಾ ಒಂದು ಕಡೆ ಬೀಸಾಟವಾಡುತ್ತಿದ್ದರು. ಇದನ್ನು ಮನಗಂಡ ಬೌಲರ್‌ಗಳು ಇನ್ನೊಂದು ಬದಿಯಲ್ಲಿ ಬ್ಯಾಟರ್‌ಗಳೂ ಕಾಲೂರಲು ಬಿಡಲಿಲ್ಲ. ಚಾಣಾಕ್ಷತೆ ಮೆರೆದರು. ಕೆಲವು ಬಾರಿ ಮಿಸ್‌ಫೀಲ್ಡ್ ಮತ್ತು ಕ್ಯಾಚ್‌ಗಳನ್ನು ಕೈಚೆಲ್ಲಿದರೂ ಭಾರತದ ಆಟಗಾರ್ತಿಯರು ಧೈರ್ಯ ಕಳೆದುಕೊಳ್ಳಲಿಲ್ಲ. ಮರಳಿ, ಮರಳಿ ಯತ್ನವ ಮಾಡಿದರು. ಅದಕ್ಕೆ ತಕ್ಕಂತೆ ಮೋಡಿ ಮಾಡಿದ ದೀಪ್ತಿ ಐದು ವಿಕೆಟ್ ಗೊಂಚಲು ಗಳಿಸಿದರು. ಶಫಾಲಿ ಕೂಡ ಎರಡು ವಿಕೆಟ್ ಪಡೆದರು.

46ನೇ ಓವರ್‌ನಲ್ಲಿ ದೀಪ್ತಿ ಎಸೆತವನ್ನು ಎತ್ತಿ ಹೊಡೆದ ನದೀನ್ ಡಿ ಕ್ಲರ್ಕ್ ಅವರ ಕ್ಯಾಚ್ ಅನ್ನು ಸ್ವಲ್ಪ ದೂರದವರೆಗೂ ಓಡಿ ಹೋಗಿ ಕೈತುಂಬಿಕೊಂಡ ಹರ್ಮನ್ ಸಂಭ್ರಮದಿಂದ ಕುಣಿದಾಡಿದರು. ಮರುಕ್ಷಣವೇ ಸಹ ಆಟಗಾರ್ತಿಯರು ತಮ್ಮ ನಾಯಕಿಯನ್ನು ಬಿಗಿದಪ್ಪಿ ಸಂಭ್ರಮಿಸಿದರು. ಎಲ್ಲರ ಕಂಗಳಲ್ಲಿಯೂ ಆನಂದ ಬಾಷ್ಪ ಜಿನುಗಿತು.

ಶಫಾಲಿಗೆ ಒಲಿದ ಅದೃಷ್ಟ

ಭಾರತ ಮಹಿಳೆಯರ ಕ್ರಿಕೆಟ್ ತಂಡವು ಮೊಟ್ಟಮೊದಲ ಬಾರಿಗೆ ಐಸಿಸಿ ವಿಶ್ವಕಪ್ ಟ್ರೋಫಿ ಜಯಿಸಿತು. ಆದರೆ ಈ ತಂಡದಲ್ಲಿದ್ದ ಶಫಾಲಿ ವರ್ಮಾ ಮತ್ತು ರಿಚಾ ಘೋಷ್ ಅವರಿಗೆ ಇದು ಎರಡನೇ ವಿಶ್ವಕಪ್!

ಹೌದು; 2023ರಲ್ಲಿ ಮಹಿಳೆಯರ 19 ವರ್ಷದೊಳಗಿನವರ ವಿಶ್ವಕಪ್ ಜಯಿಸಿದ್ದ ಭಾರತ ತಂಡಕ್ಕೆ ಶಫಾಲಿ ನಾಯಕಿಯಾಗಿದ್ದರು. ಆ ತಂಡದಲ್ಲಿ ರಿಚಾ ಕೂಡ ಇದ್ದರು. ಭಾರತ ಮಹಿಳಾ ಕ್ರಿಕೆಟ್‌ಗೆ ಒಲಿದಿದ್ದ ಮೊಟ್ಟಮೊದಲ ಐಸಿಸಿ ಟ್ರೋಫಿ ಅದಾಗಿತ್ತು.

2025ರ ಏಕದಿನ ವಿಶ್ವಕಪ್ ಟೂರ್ನಿಯ ಕೊನೆಯ ಎರಡು ಪಂದ್ಯಗಳಲ್ಲಿ ಆಡಲು ಮಾತ್ರ ಶಫಾಲಿಗೆ ಅವಕಾಶ ಸಿಕ್ಕಿತ್ತು. ಶಫಾಲಿ ಅವರು ಕಳೆದ ಕೆಲವು ತಿಂಗಳುಗಳಿಂದ ಫಾರ್ಮ್ ಕಳೆದುಕೊಂಡಿದ್ದರಿಂದ ಭಾರತ ತಂಡದಲ್ಲಿ ಸ್ಥಾನ ಪಡೆದಿರಲಿಲ್ಲ. ಆದರೆ ಪ್ರತೀಕಾ ರಾವಲ್ ಅವರು ಗಾಯಗೊಂಡ ಕಾರಣ ಶಫಾಲಿ ಅವರಿಗೆ ಸೆಮಿಫೈನಲ್‌ನಲ್ಲಿ ಅವಕಾಶ ನೀಡಲಾಗಿತ್ತು. ಫೈನಲ್‌ನಲ್ಲಿ ಅವರು ಆಲ್‌ರೌಂಡ್ ಆಟದ ಮೂಲಕ ತಂಡದ ಗೆಲುವಿನ ರೂವಾರಿಯಾದರು. ಪಂದ್ಯ ಆಟಗಾರ್ತಿ ಗೌರವ ಗಳಿಸಿದರು.


ವಿಶ್ವಕಪ್ ಗೆದ್ದ ಸಂಭ್ರಮದಲ್ಲಿ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಉಪನಾಯಕಿ ಸ್ಮೃತಿ ಮಂದಾನ ಚಿತ್ರಗಳು: ಪಿಟಿಐ: ಎಎಫ್‌ಪಿ

ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ವಿಜೇತರು

ವರ್ಷ	ಆತಿಥ್ಯ	ಚಾಂಪಿಯನ್	ರನ್ನರ್ಸ್ ಅಪ್	ಒಟ್ಟು ತಂಡ
1973	ಇಂಗ್ಲೆಂಡ್	ಇಂಗ್ಲೆಂಡ್	ಆಸ್ಟ್ರೇಲಿಯಾ	7
1978	ಭಾರತ	ಆಸ್ಟ್ರೇಲಿಯಾ	ಇಂಗ್ಲೆಂಡ್	4
1982	ನ್ಯೂಜಿಲೆಂಡ್	ಆಸ್ಟ್ರೇಲಿಯಾ	ಇಂಗ್ಲೆಂಡ್	5
1988	ಆಸ್ಟ್ರೇಲಿಯಾ	ಆಸ್ಟ್ರೇಲಿಯಾ	ಇಂಗ್ಲೆಂಡ್	5
1993	ಇಂಗ್ಲೆಂಡ್	ಇಂಗ್ಲೆಂಡ್	ನ್ಯೂಜಿಲೆಂಡ್	8
1997	ಭಾರತ	ಆಸ್ಟ್ರೇಲಿಯಾ	ನ್ಯೂಜಿಲೆಂಡ್	11
2000	ನ್ಯೂಜಿಲೆಂಡ್	ನ್ಯೂಜಿಲೆಂಡ್	ಆಸ್ಟ್ರೇಲಿಯಾ	8
2005	ದಕ್ಷಿಣ ಆಫ್ರಿಕಾ	ಆಸ್ಟ್ರೇಲಿಯಾ	ಭಾರತ	8
2009	ಆಸ್ಟ್ರೇಲಿಯಾ	ಇಂಗ್ಲೆಂಡ್	ನ್ಯೂಜಿಲೆಂಡ್	8
2013	ಭಾರತ	ಆಸ್ಟ್ರೇಲಿಯಾ	ವೆಸ್ಟ್ ಇಂಡೀಸ್	8
2017	ಇಂಗ್ಲೆಂಡ್	ಇಂಗ್ಲೆಂಡ್	ಭಾರತ	8
2022	ನ್ಯೂಜಿಲೆಂಡ್	ಆಸ್ಟ್ರೇಲಿಯಾ	ಇಂಗ್ಲೆಂಡ್	8
2025	ಭಾರತ	ಭಾರತ	ದಕ್ಷಿಣ ಆಫ್ರಿಕಾ	8

ಸ್ಕೋರ್ ಕಾರ್ಡ್

ಭಾರತ: 7 ವಿಕೆಟ್‌ಗಳಿಗೆ 298 (50 ಓವರುಗಳಲ್ಲಿ)
ಮಂದಾನ ಸಿ ಝೂಫ್ತಾ ಬಿ ಟ್ರೈಯನ್ 45 (58ಎ, 4x8)
ಶಫಾಲಿ ಸಿ ಲೂಸ್ ಬಿ ಕಾಕಾ 87 (78ಎ, 4x7, 6x2)
ಜೆಮಿಮಾ ಸಿ ವೋಲ್ವಾರ್ಟ್ ಬಿ ಕಾಕಾ 24 (37ಎ, 4x1)
ಹರ್ಮನ್‌ಪ್ರೀತ್ ಬಿ ಮ್ಲಾಬಾ 20 (29ಎ, 4x2)
ದೀಪ್ತಿ ರನ್‌ಔಟ್ (ಟ್ರೈಯನ್/ಝೂಫ್ತಾ) 58 (58ಎ, 4x3, 6x1)
ಅಮನ್‌ಜೋತ್ ಸಿ ಆ್ಯಂಡ್ ಬಿ ನದೀನ್ 12 (14ಎ, 4x1)
ರಿಚಾ ಸಿ ಡರ್ಕಸನ್ ಬಿ ಕಾಕಾ 34 (24ಎ, 4x3, 6x2)
ರಾಧಾ ಔಟಾಗದೇ 3
ಇತರೆ: 15 (ಬೈ 2, ವೈಡ್ 12, ನೋಬಾಲ್ 1)
ವಿಕೆಟ್ ಪತನ: 1–104 (ಸ್ಮೃತಿ ಮಂದಾನ, 17.4 ov), 2–166 (ಶಫಾಲಿ ವರ್ಮಾ, 27.5), 3–171 (ಜೆಮಿಮಾ ರಾಡ್ರಿಗಸ್, 29.4), 4–223 (ಹರ್ಮನ್‌ಪ್ರೀತ್ ಕೌರ್, 38.6), 5–245 (ಅಮನ್‌ಜೋತ್ ಕೌರ್, 43.1), 6–292 (ರಿಚಾ ಘೋಷ್, 48.6), 7–298 (ದೀಪ್ತಿ ಶರ್ಮಾ, 49.6)
ಬೌಲಿಂಗ್: ಮರೈಝಾನ್ ಕಾಪ್ 10–1–59–0, ಅಯಾಬೊಂಗಾ ಕಾಕಾ 9–0–58–3, ನಾನ್‌ಕುಲುಲೆಕೊ ಮ್ಲಾಬಾ 10–0–47–1, ನದೀನ್ ಡಿ ಕ್ಲರ್ಕ್ 9–0–52–1, ಸುನಿ ಲೂಸ್ 5–0–34–0, ಚೋಲೆ ಟ್ರೈಯನ್ 7–0–46–1
ದಕ್ಷಿಣ ಆಫ್ರಿಕಾ: 246 (45.3 ಓವರ್‌ಗಳಲ್ಲಿ)
ವೋಲ್ವಾರ್ಟ್ ಸಿ ಅಮನ್‌ಜೋತ್ ಬಿ ದೀಪ್ತಿ 101 (98ಎ, 4x11, 6x1)
ತಾಜ್ಮೀನ್ ರನ್‌ಔಟ್ (ಅಮನ್‌ಜೋತ್) 23 (35ಎ, 4x2, 6x1)
ಬಾಷ್ ಎಲ್‌ಬಿಡಬ್ಲ್ಯು ಬಿ ಶ್ರೀಚರಣಿ 0 (6ಎ)
ಲೂಸ್ ಸಿ ಮತ್ತು ಬಿ ಶಫಾಲಿ 25 (31ಎ, 4x4)
ಮರೈಝಾನ್ ಸಿ ರಿಚಾ ಬಿ ಶಫಾಲಿ 4 (5ಎ)
ಝೂಫ್ತಾ ಸಿ ಯಾದವ್ ಬಿ ದೀಪ್ತಿ 16 (29ಎ, 4x1)
ಡರ್ಕಸನ್ ಬಿ ದೀಪ್ತಿ 35 (37ಎ, 4x1, 6x2)
ಟ್ರೈಯನ್ ಬಿ ದೀಪ್ತಿ 9 (8ಎ, 4x1)
ನದೀನ್ ಸಿ ಕೌರ್ ಬಿ ದೀಪ್ತಿ 18 (19ಎ, 4x3)
ಕಾಕಾ ರನ್‌ಔಟ್ (ದೀಪ್ತಿ/ಘೋಷ್) 1 (7ಎ)
ಮ್ಲಾಬಾ ಔಟಾಗದೇ 0 (0ಎ)
ಇತರೆ: 14 (ನೋಬಾಲ್ 2, ವೈಡ್ 12)
ವಿಕೆಟ್ ಪತನ: 1-51 (ತಾಜ್ಮೀನ್ ಬ್ರಿಟ್ಸ್, 9.3), 2-62 (ಅನಿಕೆ ಬಾಷ್, 11.5), 3-114 (ಸುನಿ ಲೂಸ್, 20.2), 4-123 (ಮರೈಝಾನ್ ಕಾಪ್, 22.1), 5-148 (ಸಿನಾಲೊ ಝೂಫ್ತಾ, 29.3), 6-209 (ಅನೇರಿ ಡರ್ಕಸನ್, 39.3), 7-220 (ಲಾರಾ ವೋಲ್ವಾರ್ಟ್, 41.1), 8-221 (ಚೋಲೆ ಟ್ರೈಯನ್, 41.4), 9-246 (ಅಯಾಬೊಂಗಾ ಕಾಕಾ, 44.6), 10-246 (ನದೀನ್ ಡಿ ಕ್ಲರ್ಕ್, 45.3)
ಬೌಲಿಂಗ್: ರೇಣುಕಾ ಸಿಂಗ್ 8–0–28–0, ಕ್ರಾಂತಿ ಗೌಡ್ 3–0–16–0, ಅಮನ್‌ಜೋತ್ 4–0–34–0, ದೀಪ್ತಿ ಶರ್ಮಾ 9.3–0–39–5, ಶ್ರೀಚರಣಿ 9–0–48–1, ರಾಧಾ ಯಾದವ್ 5–0–45–0, ಶಫಾಲಿ 7–0–36–2
ಪಂದ್ಯದ ಆಟಗಾರ್ತಿ: ಶಫಾಲಿ ವರ್ಮಾ
ಸರಣಿಯ ಆಟಗಾರ್ತಿ: ದೀಪ್ತಿ ಶರ್ಮಾ

ಫಲಿತಾಂಶ: ಭಾರತಕ್ಕೆ 52 ರನ್‌ಗಳ ಗೆಲುವು

ಟಿ20: ಆಸ್ಟ್ರೇಲಿಯಾ ಎದುರು ಭಾರತ ಜಯಭೇರಿ

ಅರ್ಷದೀಪ್, ವಾಷಿಂಗ್ಟನ್ ಮಿಂಚು

ಹೋಬರ್ಟ್ (ಪಿಟಿಐ): ಎಡಗೈ ವೇಗಿ ಅರ್ಷದೀಪ್ ಸಿಂಗ್ ಮತ್ತು ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರ ಬ್ಯಾಟಿಂಗ್ ಬಲದಿಂದ ಭಾರತ ತಂಡವು ಆಸ್ಟ್ರೇಲಿಯಾ ಎದುರಿನ ಟಿ20 ಪಂದ್ಯದಲ್ಲಿ ಜಯಭೇರಿ ಬಾರಿಸಿತು. ಇದರೊಂದಿಗೆ ಐದು ಪಂದ್ಯಗಳ ಸರಣಿಯಲ್ಲಿ 1–1ರ ಸಮಬಲ ಸಾಧಿಸಿತು.

ಭಾನುವಾರ ಇಲ್ಲಿ ನಡೆದ ಸರಣಿಯ ಎರಡನೇ ಪಂದ್ಯದಲ್ಲಿ ಭಾರತ ತಂಡವು 5 ವಿಕೆಟ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ಭಾರತವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅರ್ಷದೀಪ್ ಸಿಂಗ್ (35ಕ್ಕೆ3) ಅವರ ದಾಳಿಯಿಂದಾಗಿ ಆಸ್ಟ್ರೇಲಿಯಾ ಆರಂಭದಲ್ಲಿ ಆಘಾತ ಅನುಭವಿಸಿತು. ಈ ಹಂತದಲ್ಲಿ ಟಿಮ್ ಡೇವಿಡ್ (74; 38ಎ, 4X8, 6X5) ಮತ್ತು ಸ್ಟೊಯಿನಿಸ್ (64; 39ಎ, 4X8, 6X2) ಅವರ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 186 ರನ್‌ಗಳ ಹೋರಾಟದ ಮೊತ್ತ ಗಳಿಸಿತು. ಇದಕ್ಕುತ್ತರವಾಗಿ ಭಾರತವು 18.3 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 188 ರನ್ ಗಳಿಸಿತು.


ಭಾರತದ ವೇಗಿ ಅರ್ಷದೀಪ್ ಸಿಂಗ್ ಎಎಫ್‌ಪಿ ಚಿತ್ರ


ವಾಷಿಂಗ್ಟನ್ ಸುಂದರ್ ಬ್ಯಾಟಿಂಗ್ ವೈಖರಿ ಪಿಟಿಐ ಚಿತ್ರ

ಗುರಿ ಬೆನ್ನಟ್ಟಿದ ಭಾರತ ತಂಡದ ಆರಂಭ ಸಾಧಾರಣವಾಗಿತ್ತು. ಅಭಿಷೇಕ್ ಶರ್ಮಾ (25; 16ಎ), ಶುಭಮನ್ ಗಿಲ್ (15; 12ಎ), ನಾಯಕ ಸೂರ್ಯಕುಮಾರ್ ಯಾದವ್ (24; 11ಎ), ತಿಲಕ್ ವರ್ಮಾ (29; 26ಎ) ಅವರು ದೀರ್ಘ ಇನಿಂಗ್ಸ್ ಆಡುವಲ್ಲಿ ಸಫಲರಾಗಲಿಲ್ಲ. ಆದರೆ ಆರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ವಾಷಿಂಗ್ಟನ್ (ಅಜೇಯ 49; 23ಎ) ಅವರು ಜಿತೇಶ್ ಜೊತೆಗೂಡಿ ತಂಡವನ್ನು ಗೆಲುವಿನ ದಡ ಸೇರಿಸಿದರು. ವಾಷಿಂಗ್ಟನ್ 3 ಬೌಂಡರಿ ಹಾಗೂ 4 ಸಿಕ್ಸರ್ ಬಾರಿಸಿದರು. ಜಿತೇಶ್ 13 ಎಸೆತಗಳಲ್ಲಿ 22 ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 6ಕ್ಕೆ186 (ಟಿಮ್ ಡೇವಿಡ್ 74, ಮಾರ್ಕಸ್ ಸ್ಟೊಯಿನಿಸ್ 64, ಮ್ಯಾಥ್ಯೂ ಶಾರ್ಟ್ 26, ಅರ್ಷದೀಪ್ ಸಿಂಗ್ 35ಕ್ಕೆ3, ವರುಣ್ ಚಕ್ರವರ್ತಿ 33ಕ್ಕೆ2) ಭಾರತ: 18.3 ಓವರ್‌ಗಳಲ್ಲಿ 5ಕ್ಕೆ188 (ಅಭಿಷೇಕ್ ಶರ್ಮಾ 25, ಸೂರ್ಯಕುಮಾರ್ ಯಾದವ್ 24, ತಿಲಕ್ ವರ್ಮಾ 29, ವಾಷಿಂಗ್ಟನ್ ಸುಂದರ್ ಔಟಾಗದೇ 49, ಜಿತೇಶ್ ಶರ್ಮಾ 22, ನೇಥನ್ ಎಲಿಸ್ 36ಕ್ಕೆ3) ಫಲಿತಾಂಶ: ಭಾರತ ತಂಡಕ್ಕೆ 5 ವಿಕೆಟ್‌ಗಳ ಜಯ. ಸರಣಿಯಲ್ಲಿ 1–1ರ ಸಮಬಲ. ಪಂದ್ಯಶ್ರೇಷ್ಠ: ಅರ್ಷದೀಪ್ ಸಿಂಗ್

ಛತ್ತೀಸಗಢ ಸಾಧಾರಣ ಮೊತ್ತ

ಮೈಸೂರು: ಮಯಂಕ್ ವರ್ಮಾ ಅಜೇಯ ಶತಕದ ನೆರವಿನಿಂದ (164 ರನ್; 233 ಎ, 4X15, 6X1) ಛತ್ತೀಸಗಢ ತಂಡವು ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ (23 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಕರ್ನಾಟಕ ಎದುರು ಮೊದಲ ಇನಿಂಗ್ಸ್‌ನಲ್ಲಿ 303 ರನ್ ಕಲೆ ಹಾಕಿತು. ಭಾನುವಾರ ಮೊದಲ ದಿನದಾಟದ ಅಂತ್ಯಕ್ಕೆ ಆತಿಥೇಯ ತಂಡವು ವಿಕೆಟ್ ನಷ್ಟವಿಲ್ಲದೆ 17 ರನ್ ಗಳಿಸಿದೆ.

ಇಲ್ಲಿನ ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಛತ್ತೀಸಗಢಕ್ಕೆ ವಿಕೆಟ್ ಕೀಪರ್ ಮಯಂಕ್ ಹಾಗೂ ಶೋಬಿತ್ ಶರ್ಮಾ 87 ರನ್‌ಗಳ ಉತ್ತಮ ಆರಂಭಿಕ ಜೊತೆಯಾಟವಾಡಿದರು. ಆದರೆ, ಬಳಿಕ ಕರ್ನಾಟಕದ ಬೌಲರ್‌ಗಳು ಎದುರಾಳಿಗಳನ್ನು ನಿಯಂತ್ರಿಸಿದರು. ಮಧ್ಯಮ ಕ್ರಮಾಂಕದಲ್ಲಿ ಪ್ರತೀಕ್ ಜಚಕ್ (53) ಬಿಟ್ಟರೆ ಉಳಿದವರು ಯಶಸ್ವಿಯಾಗಲಿಲ್ಲ.

ಕರ್ನಾಟಕದ ಇನಿಂಗ್ಸ್ ಆರಂಭಿಸಿದ ಇ.ಜೆ. ಜಾಸ್ಪರ್ (1*) ಹಾಗೂ ಪ್ರಖರ್ ಚತುರ್ವೇದಿ (16*) ಸೋಮವಾರಕ್ಕೆ ಆಟ ಕಾಯ್ದುಕೊಂಡರು.

ಸಂಕ್ಷಿಪ್ತ ಸ್ಕೋರ್: ಛತ್ತೀಸಗಢ: 83 ಓವರ್‌ಗಳಲ್ಲಿ 303 (ಮಯಂಕ್ ವರ್ಮಾ ಔಟಾಗದೇ 164, ಪ್ರಥಮ್ ಜಚಕ್ 53. ಕೆ.ಪಿ. ಕಾರ್ತಿಕೇಯ 34ಕ್ಕೆ 2, ಧ್ರುವ್ ಪ್ರಭಾಕರ್ 45ಕ್ಕೆ 2, ಹಾರ್ದಿಕ್ ರಾಜ್ 83ಕ್ಕೆ 2, ಕೆ. ಶಶಿಕುಮಾರ್ 93ಕ್ಕೆ 2). ಕರ್ನಾಟಕ: 5 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 17 (ಪ್ರಖರ್ ಚತುರ್ವೇದಿ ಔಟಾಗದೇ 16, ಇ.ಜೆ. ಜಾಸ್ಪರ್ ಔಟಾಗದೇ 1)

ರಣಜಿ ಟ್ರೋಫಿ: ಕೇರಳದ ವಿರುದ್ಧದ ಪಂದ್ಯದಲ್ಲಿ ಕರ್ನಾಟಕದ ಬಿಗಿಹಿಡಿತ

ಕರುಣ್, ಸ್ಮರಣ್ ‘ತ್ರಿಶತಕ’ದ ಜತೆಯಾಟ

ಪ್ರಜಾವಾಣಿ ವಾರ್ತೆ

ಮಂಗಲಪುರ (ಕೇರಳ): ಕರುಣ್ ನಾಯರ್ ಮತ್ತು ಆರ್. ಸ್ಮರಣ್ 'ತ್ರಿಶತಕದ ಜೊತೆಯಾಟದಿಂದಾಗಿ ಕರ್ನಾಟಕ ತಂಡವು ರಣಜಿ ಟ್ರೋಫಿ ಟೂರ್ನಿಯ ಪಂದ್ಯದಲ್ಲಿ ಕೇರಳ ವಿರುದ್ಧ ಬಿಗಿಹಿಡಿತ ಸಾಧಿಸಿದೆ.

ತಲಾ ಒಂದು ದ್ವಿಶತಕ ಗಳಿಸಿದ ಕರುಣ್ (233; 389ಎಸೆತ, 4X25, 6X2) ಮತ್ತು ಸ್ಮರಣ್ (ಔಟಾಗದೇ 220; 390ಎ, 4X16, 6X3) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 343 (585ಎಸೆತ) ಸೇರಿಸಿದರು. ಇದರಿಂದಾಗಿ ತಂಡವು 167 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 586 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು.

ಇದಕ್ಕುತ್ತರವಾಗಿ ಇನಿಂಗ್ಸ್ ಆರಂಭಿಸಿದ ಆತಿಥೇಯ ತಂಡವು ಎರಡನೇ ದಿನದಾಟದ ಮುಕ್ತಾಯಕ್ಕೆ10 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 21 ರನ್ ಗಳಿಸಿತು. ಕರ್ನಾಟಕದ ವೇಗಿ ವಿದ್ವತ್ ಕಾವೇರಪ್ಪ (7ಕ್ಕೆ2) ಆರಂಭದಲ್ಲಿಯೇ ಪೆಟ್ಟುಕೊಟ್ಟರು.

ಮೊದಲ ದಿನದಾಟದಲ್ಲಿ ಕರ್ನಾಟಕ ತಂಡವು 3 ವಿಕೆಟ್‌ಗಳಿಗೆ 319 ರನ್ ಗಳಿಸಿತ್ತು. 142 ರನ್ ಗಳಿಸಿದ್ದ ಕರುಣ್ ಹಾಗೂ 88 ರನ್ ಪೇರಿಸಿದ್ದ ಸ್ಮರಣ್ ಕ್ರೀಸ್‌ನಲ್ಲಿದ್ದರು. ಭಾನುವಾರ ಆಟ ಮುಂದುವರಿಸಿದ ಅವರ ಭರಾಟೆಯನ್ನು ತಡೆಯಲು ಕೇರಳ ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ.



ದ್ವಿಶತಕ ದಾಖಲಿಸಿದ ಕರ್ನಾಟಕದ ಕರುಣ್ ನಾಯರ್ (ಎಡ), ಆರ್. ಸ್ಮರಣ್

ಟೆಸ್ಟ್ ಕ್ರಿಕೆಟ್‌ನಲ್ಲಿ ತ್ರಿಶತಕ ಬಾರಿಸಿದ ದಾಖಲೆ ಇರುವ ಕರುಣ್ ಅವರು ಇಲ್ಲಿಯೂ ಅದೇ ಸಾಧನೆ ಮಾಡುವ ಭರವಸೆ ಮೂಡಿಸಿದ್ದರು. ಹೋದ ವರ್ಷದ ಋತುವಿನಲ್ಲಿ ವಿದರ್ಭ ತಂಡದಲ್ಲಿ ಆಡಿದ್ದ ಅವರು ರನ್ ಹೊಳೆ ಹರಿಸಿದ್ದರು. ಈ ವರ್ಷ ತವರಿಗೆ ಮರಳಿರುವ ಅವರು ಮೊದಲ ಪಂದ್ಯದಲ್ಲಿ ಅರ್ಧಶತಕ, ಎರಡನೇಯದ್ದರಲ್ಲಿ ಶತಕ ಹಾಗೂ ಮೂರನೇಯದ್ದರಲ್ಲಿ ದ್ವಿಶತಕ ಹೊಡೆದಿದ್ದಾರೆ.

ತಮ್ಮ ಇನಿಂಗ್ಸ್‌ನಲ್ಲಿ ಅವರು 22 ವರ್ಷದ ಸ್ಮರಣ್ ಅವರೊಂದಿಗೆ ಸಮನ್ವಯ ಸಾಧಿಸಿದ ರೀತಿ ಉತ್ತಮವಾಗಿತ್ತು. ಸ್ಮರಣ್ ಕೂಡ ತಾಳ್ಮೆಯಿಂದ ಆಡಿದರು. ಸೊಗಸಾದ ಹೊಡೆತಗಳನ್ನು ಪ್ರಯೋಗಿಸಿದ ಎಡಗೈ ಬ್ಯಾಟರ್ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ತಮ್ಮ ವೈಯಕ್ತಿಕ ಅತ್ಯಧಿಕ ಮೊತ್ತವನ್ನು ದಾಖಲಿಸಿ ಅಜೇಯವಾಗುಳಿದರು.

ಕರುಣ್ ಓಟಕ್ಕೆ ನೆಡುಮಾಂಕುಝಿ ಬಾಸಿಲ್ ಅವರು ತಡೆಯೊಡ್ಡಿದರು. ಶಾನ್ ರೋಜರ್ ಅಮೋಘ ಕ್ಯಾಚ್ ಪಡೆದರು. ಇನ್ನೊಂದು ಬದಿಯಲ್ಲಿದ್ದ ಸ್ಮರಣ್ ಇನಿಂಗ್ಸ್ ಹೊಣೆ ನಿಭಾಯಿಸಿದರು. ಅಭಿನವ್ ಮನೋಹರ್ 34 ಎಸೆತಗಳಲ್ಲಿ 20 ರನ್ ಗಳಿಸಿ ವೈಶಾಕ್ ಚಂದ್ರನ್ ಹೆಣೆದ ಎಲ್‌ಬಿಡಬ್ಲ್ಯು ಬಲೆಯಲ್ಲಿ ಬಿದ್ದರು. ಅಷ್ಟೊತ್ತಿಗೆ ತಂಡವು 500ರ ಗಡಿ ದಾಟಿತ್ತು. ಶ್ರೇಯಸ್ ಗೋಪಾಲ್ (ಅಜೇಯ 16) ಸ್ಮರಣ್ ಜೊತೆಗೆ ಕೆಲಹೊತ್ತು ಕ್ರೀಸ್‌ನಲ್ಲಿದ್ದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 167 ಓವರ್‌ಗಳಲ್ಲಿ 5ಕ್ಕೆ586 ಡಿಕ್ಲೇರ್ಡ್ (ಕರುಣ್ ನಾಯರ್ 233, ಆರ್. ಸ್ಮರಣ್ ಔಟಾಗದೇ 220, ಎನ್.ಪಿ. ಬಾಸಿಲ್ 101ಕ್ಕೆ2) ಕೇರಳ: 10 ಓವರ್‌ಗಳಲ್ಲಿ 3ಕ್ಕೆ21 (ಎನ್.ಪಿ. ಬಾಸಿಲ್ ಔಟಾಗದೇ 11, ಅಕ್ಷಯ್ ಚಂದ್ರನ್ ಔಟಗದೇ 6, ವಿದ್ವತ್ ಕಾವೇರಪ್ಪ 7ಕ್ಕೆ2, ವೈಶಾಖ ವಿಜಯಕುಮಾರ್ 14ಕ್ಕೆ1)

ಬ್ಯಾಡ್ಮಿಂಟನ್: ಸತೀಶ್, ಮಾನಸಿಗೆ ಪ್ರಶಸ್ತಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಮಂಗಳೂರು: ಈ ಋತುವಿನಲ್ಲಿ ಸತತ ವೈಫಲ್ಯ ಕಂಡಿದ್ದ ತಮಿಳುನಾಡಿನ ಋತ್ವಿಕ್ ಸತೀಶ್ ಕುಮಾರ್, ಕಡಲ ನಗರಿಯಲ್ಲಿ ಪ್ರಶಸ್ತಿ ಗೆದ್ದು ಸಂಭ್ರಮಿಸಿದರು. ಛತ್ತೀಸಘಡದ ರೌನಕ್ ಚೌಹಾಣ್ ಅವರ ಸೀನಿಯರ್ ವಿಭಾಗದ ಪ್ರಶಸ್ತಿ ಕನಸನ್ನು ಸತೀಶ್ ಭಾನುವಾರ ಭಗ್ನಗೊಳಿಸಿದರು.

ನಗರದ ಉರ್ವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ‘ಚೀಫ್ ಮಿನಿಸ್ಟರ್ಸ್ ಮಂಗಳೂರು ಇಂಡಿಯಾ ಇಂಟರ್‌ನ್ಯಾಷನಲ್ ಚಾಲೆಂಜ್ ಬ್ಯಾಡ್ಮಿಂಟನ್ ಟೂರ್ನಿ’ಯ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ರೌನಕ್ ಎದುರು ಸತೀಶ್ 14–21, 21–19, 21–19ರಲ್ಲಿ ಜಯ ಸಾಧಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಅಸ್ಸಾಂನ ಅಸ್ಮಿತಾ ಚಾಲಿಹ ವಿರುದ್ಧ 21–17, 22–20ರ ಜಯಭೇರಿ ಮೊಳಗಿಸಿ ಉತ್ತರಪ್ರದೇಶದ ಮಾನಸಿ ಸಿಂಗ್ ಸೀನಿಯರ್ ವಿಭಾಗದ ಮೊದಲ ಅಂತರ ರಾಷ್ಟ್ರೀಯ ಪ್ರಶಸ್ತಿ ಸಂಭ್ರಮ ಆಚರಿಸಿದರು.

ಆರಂಭದಲ್ಲೇ 6–1ರ ಮುನ್ನಡೆ ಗಳಿಸಿದ ರೌನಕ್ ಮೊದಲ ಗೇಮ್ ಸುಲಭವಾಗಿ ಗೆದ್ದರು. 2ನೇ ಗೇಮ್‌ನಲ್ಲಿ ಸತೀಶ್ ಚೇತರಿಸಿಕೊಂಡರು. 8–8, 15–15, 17–17ರ ರೋಚಕ ಕ್ಷಣಗಳ ನಂತರ ಸತೀಶ್ ಗೆಲುವು ಸಾಧಿಸಿದರು. 3ನೇ ಗೇಮ್‌ನಲ್ಲಿ ಇಬ್ಬರೂ 3–3, 7-7, 8-8, 10-10, 11–11, 15–15ರ ಸಮಬಲದ ಹೋರಾಟ ಪ್ರದರ್ಶಿಸಿದರು. ಕೊನೆಯಲ್ಲಿ ಸತೀಶ್ ಪಾರಮ್ಯ ಮೆರೆದರು.

ಮಹಿಳೆಯರ ಸಿಂಗಲ್ಸ್ ಫೈನಲ್‌ನ ಆರಂಭದಲ್ಲಿ ಎಡಗೈ ಆಟಗಾರ್ತಿ ಅಸ್ಮಿತಾ ಸತತ ಐದು ಪಾಯಿಂಟ್ ಗಳಿಸಿದರು. ನಿಧಾನಕ್ಕೆ ಹಿಡಿತ ಸಾಧಿಸಿದ ಮಾನಸಿ ನಂತರ ಪಾರಮ್ಯ ಮೆರೆದರು.


ಪುರುಷರ ವಿಭಾಗದ ಚಿನ್ನ ಗಳಿಸಿದ ಋತ್ವಿಕ್ ಸತೀಶ್ ಕುಮಾರ್ ಹಾಗೂ ಮಹಿಳೆಯರ ವಿಭಾಗದ ಪ್ರಶಸ್ತಿ ಗೆದ್ದ ಮಾನಸಿ ಸಿಂಗ್ ಪ್ರಜಾವಾಣಿ ಚಿತ್ರ

ಧ್ರುವ–ಮನೀಶಾ ಜಯಭೇರಿ: ಮಿಶ್ರ ಡಬಲ್ಸ್ ಫೈನಲ್‌ನಲ್ಲಿ ಸೋಲಿನ ಆತಂಕ ಮೀರಿದ ಭಾರತದ ಧ್ರುವ ರಾವತ್ ಮತ್ತು ಮನೀಶಾ ಥಾಯ್ಲೆಂಡ್‌ನ ನಪಪಕೊರ್ನ್ ತುಂಗಸ್ತನ್ ಮತ್ತು ತನವಿನ್ ಮಡೀ ವಿರುದ್ಧ 18–21, 21–18, 22–20ರಲ್ಲಿ ಗೆದ್ದರು.

ಪುರುಷರ ಡಬಲ್ಸ್ ಫೈನಲ್‌ನಲ್ಲಿ ಸಿಂಗಪುರದ ಯೆಂಗ್ ಕೀಟ್ ವೆಸ್ಲಿ ಕೊಹ್ ಮತ್ತು ಜುನ್ಸುಕೆ ಕುಬೊ ತಮ್ಮದೇ ದೇಶದ ಡೊನೊವಾನ್ ವಿಲಿಯರ್ಸ್ ವೀ ಹಾಗೂ ಹೊವಿನ್ ವಾಂಗ್ ವಿರುದ್ಧ 21–12, 21–17ರಲ್ಲಿ ಜಯಿಸಿದರು. ಮಹಿಳೆಯರ ಡಬಲ್ಸ್ ಫೈನಲ್‌ನಲ್ಲಿ ಥಾಯ್ಲೆಂಡ್‌ನ ಹತ್ತೈತಿಪ್ ಮಿಜಾದ್ ಮತ್ತು ನಪಪಕೊರ್ನ್ ತುಂಗಸ್ತನ್ ಭಾರತದ ಶ್ರೀನಿಧಿ ನಾರಾಯಣ್–ರೆಶಿಕಾ ಉದಯಸೂರ್ಯನ್ ಅವರನ್ನು 21–7, 21–11ರಲ್ಲಿ ಮಣಿಸಿದರು.

ದಕ್ಷಿಣ ಆಫ್ರಿಕಾ ಎ ವಿರುದ್ಧ ಭಾರತ ಎ ತಂಡ ಪಾರಮ್ಯ

ಮಾನವ್–ಅನ್ಷುಲ್ ಆಟಕ್ಕೆ ಗೆಲುವು

• ಗಿರೀಶ ದೊಡ್ಡಮನಿ

ಬೆಂಗಳೂರು: ಕೆಳಕ್ರಮಾಂಕದ ಬ್ಯಾಟರ್‌ಗಳಾದ ಮಾನವ್ ಸುತಾರ್ ಮತ್ತು ಅನ್ಷುಲ್ ಕಂಬೋಜ್ ಅವರು ದಕ್ಷಿಣ ಆಫ್ರಿಕಾ ಎ ತಂಡದ ವೇಗಿಗಳ ಬೌನ್ಸರ್ ಭಯವನ್ನು ಮೀರಿನಿಂತರು. ಭಾರತ ಎ ತಂಡವನ್ನು ಗೆಲುವಿನ ದಡ ಸೇರಿಸಿದರು.

ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಮೈದಾನದಲ್ಲಿ ನಡೆದ ‘ಟೆಸ್ಟ್’ ಪಂದ್ಯದ ಕೊನೆಯ ದಿನವಾದ ಭಾನುವಾರ ಮಾನವ್ (ಔಟಾಗದೇ 20) ಮತ್ತು ಅನ್ಷುಲ್ ಕಂಬೋಜ್ (ಔಟಾಗದೇ 37) ಮುರಿಯದ ಎಂಟನೇ ವಿಕೆಟ್ ಜೊತೆಯಾಟದಲ್ಲಿ ಸೇರಿಸಿದ 62 ರನ್‌ಗಳ ಬಲದಿಂದ ಭಾರತ ಎ ತಂಡವು 3 ವಿಕೆಟ್‌ಗಳಿಂದ ಜಯಿಸಿತು. ಪರಿಣತ ಬ್ಯಾಟರ್‌ಗಳು ಅರ್ಧಕ್ಕೆ ಬಿಟ್ಟುಹೋದ ಕೆಲಸವನ್ನು ಇವರಿಬ್ಬರೂ ಅಚ್ಚುಕಟ್ಟಾಗಿ ಪೂರ್ಣಗೊಳಿಸಿದರು. ದಕ್ಷಿಣ ಆಫ್ರಿಕಾ ಎ ಬೌಲರ್‌ಗಳ ವೇಗ, ಸ್ಪಿನ್ ಮತ್ತು ತಂತ್ರಗಾರಿಕೆಗಳ ಒತ್ತಡವನ್ನು ಸಮರ್ಥವಾಗಿ ಮೆಟ್ಟಿನಿಂತರು.

ಶುಕ್ರವಾರ 275 ರನ್‌ಗಳ ಗುರಿಯನ್ನು ಬೆನ್ನಟ್ಟಿದ್ದ ಭಾರತ ಎ ತಂಡವು ದಿನದಾಟದ ಮುಕ್ತಾಯಕ್ಕೆ 4 ವಿಕೆಟ್‌ಗಳಿಗೆ 119 ರನ್ ಗಳಿಸಿತ್ತು. ಶನಿವಾರ ಮೋಡ ಮುಸುಕಿದ್ದ ವಾತಾವರಣದಲ್ಲಿ ಫ್ಲಡ್‌ಲೈಟ್ ಬೆಳಕಿನಾಟದಲ್ಲಿ ಆತಿಥೇಯರಿಗೆ ಉತ್ತಮ ಆರಂಭವೇ ಸಿಕ್ಕಿತು. ಆದರೆ ಗೆಲುವಿನ ಹತ್ತಿರ ಸಾಗುತ್ತಿದ್ದಂತೆ ಅವಸರಕ್ಕೆ ಬಿದ್ದ ರಿಷಭ್ ಪಂತ್ (90; 113ಎ, 4X11, 6X4), ಅಯುಷ್ ಬಡೋನಿ (34; 47ಎ, 4X4) ಹಾಗೂ ತನುಷ್ ಕೋಟ್ಯಾನ್ (23; 30ಎ, 4X2) ವಿಕೆಟ್ ಚೆಲ್ಲಿದರು. ಮೂವರೂ ಬ್ಯಾಟರ್‌ಗಳು ದಕ್ಷಿಣ ಆಫ್ರಿಕಾ ಎ ತಂಡದ ‘ಶಾರ್ಟ್ ಪಿಚ್ ಎಸೆತಗಳ ತಂತ್ರಗಾರಿಕೆ’ಗೆ ಶರಣಾದರು.

ಟಿಯಾನ್ ವ್ಯಾನ್ ವಿವುರೆನ್ (56ಕ್ಕೆ3) ಮತ್ತು ಲುಥೊ ಸಿಪಾಮ್ಲಾ (37ಕ್ಕೆ1) ಅವರು ಒಂದು ಹಂತದಲ್ಲಿ ಗೆಲುವಿನ ಅವಕಾಶವನ್ನು ತಮ್ಮ ತಂಡದತ್ತ ವಾಲುವಂತೆ ಮಾಡಿದ್ದರು. ವೇಗಿಗಳು ಪ್ರತಿಯೊಂದು ಓವರ್‌ನಲ್ಲಿಯೂ ಇನ್‌ಸ್ವಿಂಗ್, ಕಟರ್ ಮತ್ತು ಕೆಳಮಟ್ಟದ ನೇರ ಎಸೆತಗಳನ್ನು ಹಾಕುವುದರ ಜೊತೆಗೆ ಒಂದೆರಡು ಶಾರ್ಟ್ ಪಿಚ್ ಎಸೆತಗಳನ್ನೂ ಪ್ರಯೋಗಿಸುತ್ತಿದ್ದರು. ಆತಿಥೇಯ ತಂಡವು 215 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿತ್ತು.

ಜಯಕ್ಕಾಗಿ ಇನ್ನೂ 60 ರನ್‌ಗಳು ಅಗತ್ಯವಿದ್ದವು. ಕ್ಲೋಸ್ ಇನ್ ಫೀಲ್ಡಿಂಗ್ ಮೂಲಕ ಪ್ರವಾಸಿ ಬಳಗವು ರಚಿಸಿದ ವ್ಯೂಹವನ್ನು ಮೀರಿ ರನ್ ಗಳಿಸುವುದರ ಜೊತೆಗೆ ವಿಕೆಟ್ ಕೂಡ ಉಳಿಸಿಕೊಳ್ಳುವ ಚಾಣಾಕ್ಷತೆಯನ್ನು ಇಬ್ಬರೂ ಮೆರೆದರು. ಎಡಗೈ ಸ್ಪಿನ್ ಆಲ್‌ರೌಂಡರ್ ಮಾನವ್ ಆರು ಸಿಂಗಲ್, ಒಂದು ಡಬಲ್ ಮತ್ತು ಮೂರು ಬೌಂಡರಿಗಳನ್ನು ಗಳಿಸಿದರು. ವೇಗದ ಬೌಲರ್ ಆಗಿರುವ ಅನ್ಷುಲ್ ಮಾತ್ರ ದಿಟ್ಟತನ ಮೆರೆದರು.


ಭಾರತ ಎ ತಂಡದ ಗೆಲುವಿಗೆ ಕಾರಣರಾದ ಮಾನವ್ ಸುತಾರ್ ಹಾಗೂ ಅನ್ಷುಲ್ ಕಂಬೋಜ್
ಪ್ರಜಾವಾಣಿ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್

ಅವರು ಎರಡು ಸಿಕ್ಸರ್ ಮತ್ತು ನಾಲ್ಕು ಬೌಂಡರಿ ಬಾರಿಸುವ ಮೂಲಕ ಪ್ರವಾಸಿಗರ ಫೀಲ್ಡಿಂಗ್ ಕೋಟೆಯನ್ನು ನುಚ್ಚುನೂರು ಮಾಡಿದರು. ಇಬ್ಬರೂ ಸೇರಿ 86 ಎಸೆತಗಳನ್ನು ಎದುರಿಸಿ ತಮ್ಮ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ ಎ: 91.2 ಓವರ್‌ಗಳಲ್ಲಿ 309. ಭಾರತ ಎ: 58 ಓವರ್‌ಗಳಲ್ಲಿ 234. ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ: 48.1 ಓವರ್‌ಗಳಲ್ಲಿ 199. ಭಾರತ ಎ: 73.1 ಓವರ್‌ಗಳಲ್ಲಿ 7ಕ್ಕೆ277 (ರಿಷಭ್ ಪಂತ್ 90, ಆಯುಷ್ ಬಡೋನಿ 34, ತನುಷ್ ಕೋಟ್ಯಾನ್ 23, ಮಾನವ್ ಸುತಾರ್ ಔಟಾಗದೇ 20, ಅನ್ಷುಲ್ ಕಂಬೋಜ್ ಔಟಾಗದೇ 37, ಟಿಶೆಪೊ ಮೊರೆಕಿ 33ಕ್ಕೆ2, ಟಿಯಾನ್ ವ್ಯಾನ್ ವಿವುರೆನ್ 56ಕ್ಕೆ3) ಫಲಿತಾಂಶ: ಭಾರತ ಎ ತಂಡಕ್ಕೆ 3 ವಿಕೆಟ್‌ಗಳ ಜಯ. ಸರಣಿಯಲ್ಲಿ 1–0 ಮುನ್ನಡೆ. ಪಂದ್ಯಶ್ರೇಷ್ಠ: ತನುಷ್ ಕೋಟ್ಯಾನ್.